ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ

## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ಕನ್ನೇಶ್ವರ

ಪ್ರಧಾನ ಸಂಪಾದಕರು

**ಡಾ. ಬಿ. ವಿ. ವಸಂತಕುಮಾರ್**

ಸಂಪಾದಕರು

**ಡಾ. ಎಸ್. ಜಿ. ರಾಮದಾಸ ರೆಡ್ಡಿ**

ಲೇಖಕರು

**ಡಾ. ಚಾಮರಾಜ ಕಮ್ಮಾರ**

**ಕರ್ನಾಟಕ ಸಾಹಿತ್ಯ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦ ೦೦೨
ದೂರವಾಣಿ: ೦೮೦-೨೨೨೧೧೭೩೦ / ೨೨೧೦೬೪೬೦
www.karnatakasahithyaacademy.org
ಇ-ಮೇಲ್: sahithya.academy@gmail.com

**KANNESHWARA:** An Introduction Book on Places in Karnataka that Played a Major Role in the Freedom Struggle, Written by Dr. Chamaraj Kammar, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಡಾ. ಚಾಮರಾಜ ಕಮ್ಮಾರ

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೭೨

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್

ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೮೦೪೯೧೬೩೪೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ಸ್ವಾತಂತ್ರ್ಯದ ಅಮೃತಮಹೋತ್ಸವ

ವಿಧಾನಸೌಧ
ಬೆಂಗಳೂರು–560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

# ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೨ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

**‘ಜಿತೇನ ಲಬ್ಯತೆ ಲಕ್ಷ್ಮಿ ಮೃತೇನಾಪಿ ಸುರಾಂಗನಾ....’ ಎಂಬ ತ್ಯಾಗ ಬಲಿದಾನಗಳ ಸಂಸ್ಕೃತಿಗಳ ನಾಡಾದ ಈ ಪುಣ್ಯಭೂಮಿಯಲ್ಲಿ ನಾಡು ನುಡಿ,ನೆಲ ಜಲ, ಸಂಸ್ಕೃತಿಗಾಗಿ ಹೋರಾಟಗಾರರು ತಮ್ಮನ್ನು ತೊಡಗಿಸಿಕೊಂಡಿರುವುದು ಅವಿಸ್ಮರಣೀಯ.**

ಕರ್ನಾಟಕ ಸಾಹಿತ್ಯ ಅಕಾಡಮಿಯಿಂದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಪ್ರಯುಕ್ತ ‘ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟ ಸಾಹಿತ್ಯ ರಚನೆ’ ಪುಸ್ತಕ ಪ್ರಕಟನೆ ಸಲುವಾಗಿ ಹಾವೇರಿ ಜಿಲ್ಲೆಯ ಕನ್ನೇಶ್ವರ, ಹೊಸರಿತ್ತಿ ಕುರಿತು ಬರೆಯಲು ಸಹೋದ್ಯೋಗಿ ಮಿತ್ರರೂ, ಆತ್ಮೀಯರೂ ಸಾಹಿತ್ಯ ಅಕಾಡಮಿಯ ಸದಸ್ಯರೂ ಆದ ಡಾ. ಜಿನದತ್ತ ಹಡಗಲಿಯವರು ಕರೆಮಾಡಿ ಪುಸ್ತಕ ಬರೆದು ಕೊಡಿರಿ ಆದರೆ ಸಮಯ ಕಡಿಮೆ ಇರುವ ಬಗ್ಗೆ ತಿಳಿಸಿದಾಗ ನೀವು ಹೇಳುತ್ತಿರುವಾಗ ಇಲ್ಲವೆನ್ನಲು ಹೇಗೆ? ಆಯ್ತುಸರ್ ಎಂದು ಹೇಳಿದಾಗ ಡಾ.ರಾಮದಾಸ ರೆಡ್ಡಿಯವರಿಂದ ಕರೆಬಂತು ಜಿಲ್ಲೆಯ ಪ್ರಾಚೀನತೆ, ಶಾಸನಗಳನ್ನು ಕುರಿತು ಅಧ್ಯಯನ ಮಾಡಿದ ನನಗೆ ಕನ್ನೇಶ್ವರ ಎಂದಾಗ ಆದರೆ ಸ್ವಾತಂತ್ರ ಹೋರಾಟಗಾರರ ಕುರಿತು ಬರೆಯಲು ಸ್ನೇಹಿತರಾದ ಡಾ.ಎಚ್.ಬಿ. ಕೆಂಚಳ್ಳಿಯವರು ಹಾವೇರಿ ಜಿಲ್ಲೆ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಸಂಶೋಧನೆ ಕೈಗೊಂಡಾಗ ಸಾಕಷ್ಟು ಚರ್ಚಿಸಿದ ವಿಷಯಗಳು ಮನಪಟಲದಮೇಲೆ ಸುಳಿದಾಡಿದವು.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ “ಕರ್ನಾಟಕದಲ್ಲಿನ ಸ್ವಾತಂತ್ರ್ಯ ಹೋರಾಟದ ೭೫ ಸ್ಥಳಗಳ ೭೫ ಕಿರುಪುಸ್ತಕಗಳನ್ನು ಪ್ರಕಟಿಸಬೇಕೆಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯು ಉದ್ದೇಶಿಸಿದೆ. ಸಾಹಿತ್ಯ ಅಕಾಡೆಮಿಯ ಈ ಕಾರ್ಯ ಸಂತೋಷಕರ ವಿಷಯ. ಸಾಹಿತ್ಯ ಅಕಾಡೆಮಿ ಹಾಗೂ ಡಾ.ಎಸ್.ಜಿ.ರಾಮದಾಸ ರೆಡ್ಡಿಯವರ ಸೂಚನೆಯ ಪ್ರಕಾರ ಕರ್ನಾಟಕ ಸ್ವಾತಂತ್ರ್ಯ

ಚಳುವಳಿಯಲ್ಲಿ 'ಕನ್ನೇಶ್ವರ' ಎಂಬ ಕಿರುಪುಸ್ತಕದಲ್ಲಿ ಹಾನುಗಲ್ಲ ಪ್ರದೇಶದ ಪರಿಚಯದೊಂದಿಗೆ ಅದರ ಸುತ್ತಮುತ್ತಲಿನ ಪ್ರದೇಶ ರಾಷ್ಟ್ರೀಯ ಹೋರಾಟದಲ್ಲಿ ನಿರ್ವಹಿಸಿದ ಕಾರ್ಯವನ್ನು ತಿಳಿಸುವುದರೊಂದಿಗೆ ಆ ಭಾಗದ ಸಿಂಧೂರ ಸಿದ್ದಪ್ಪ, ಗುಡ್ಡನಗೌಡ ಪಾಟೀಲ, ಸುಬ್ಬಣ್ಣಾಚಾರ್, ಸಂಗೂರ ಕರಿಯಪ್ಪ, ಕನ್ನೇಶ್ವರ ರಾಮ ಮೊದಲಾದವರ ಹೋರಾಟ ಅನುಪಮ ಅವಿಸ್ಮರಣೀಯವಾದುದು. ಆ ಪ್ರದೇಶದಲ್ಲಿ ನಡೆದ ಅರಣ್ಯಸತ್ಯಾಗ್ರಹ, ಮತ್ತಿತರ ಚಟುವಟಿಕೆಗಳು ಮಹತ್ತರವಾಗಿವೆ. ಹಾಗಾಗಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಅನೇಕ ವೀರರತೋಳ್ಬಲ, ಸಂಘರ್ಷ, ದೃಢಸಂಕಲ್ಪ, ಅವಿರತ ಪ್ರಯತ್ನ, ತ್ಯಾಗ, ಬಲಿದಾನಗಳ ಪರಿಣಾಮವಾಗಿ ನಾವಿಂದು ಮುಕ್ತವಾತಾವರಣದಲ್ಲಿದ್ದೇವೆ. ಕಾರಣ ಅವರ ಸ್ಮರಣಿಕೆಯೇ ಈ ಕಿರು ಹೊತ್ತಿಗೆಯಾಗಿದೆ.

ಅವಕಾಶ ಕೊಟ್ಟ ಕರ್ನಾಟಕ ಸಾಹಿತ್ಯ ಅಕಾಡಮಿಯವರಿಗೂ, ಸಂಪಾದಕರಾದ ಡಾ.ರಾಮದಾಸ ರೆಡ್ಡಿಯವರಿಗೂ, ಲಾವಣಿಯನ್ನು ಸುಶ್ರಾವ್ಯವಾಗಿ ಹಾಡಿ ಧ್ವನಿಮುದ್ರಿಸಲು ಸಹಕರಿಸಿದ ಹರಗಿ ಗ್ರಾಮದ ಲೋಕಪ್ಪ ಪರಸಪ್ಪ ಸಣ್ಣಹೊತ್ತಿಗೆ ಮತ್ತು ಕೃಷ್ಣಪ್ಪ ರಾಮಪ್ಪ ಪೂಜಾರವರಿಗೂ, ನನ್ನನ್ನು ಕರೆದು ಕೊಂಡೋಗಿ ಕನ್ನೇಶ್ವರದ ಗೌಡರಿಗೆ ಪರಿಚಯಿಸಿದ ಮಡ್ಲೂರ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಕಲವೀರ ಮನ್ವಾಚಾರ ಮಾವನವರಿಗೂ, ಮಾಹಿತಿ ನೀಡಿ ಹುರಿದುಂಬಿಸಿದ ಲಿಂಗರಾಜ ಕಮ್ಮಾರವರಿಗೂ, ಸಲಹೆ ಸೂಚನೆಗಳನ್ನಿತ್ತ ಸ್ನೇಹಿತರೂ, ಪ್ರಾಚಾರ್ಯರಾದ ಡಾ.ಎಂ.ಎಚ್. ಹೊಳೆಯಣ್ಣನವರಿಗೂ, ಡಾ.ಎಚ್.ಬಿ. ಕೆಂಚಳ್ಳಿಯವರಿಗೂ, ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಎಲ್ಲ ಗ್ರಾಮಸ್ಥರಿಗೂ ಕೃತಜ್ಞತೆಗಳು.

**ಡಾ. ಚಾಮರಾಜ ಕಮ್ಮಾರ**
ಮುಖ್ಯಸ್ಥರು, ಕನ್ನಡ ವಿಭಾಗ
ಪ್ರಿಯದರ್ಶಿನಿ ಪ್ರಥಮ ದರ್ಜೆಮಹಾವಿದ್ಯಾಲಯ, ರಟ್ಟಿಹಳ್ಳಿ

## ಪರಿವಿಡಿ


ಶುಭ ಸಂದೇಶ ೩
ಶುಭ ಸಂದೇಶ ೫
ಪ್ರಧಾನ ಸಂಪಾದಕರ ಮಾತು ೭
ಲೇಖಕರ ಮಾತು ೧೧
ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ: ಕನ್ನೇಶ್ವರ ೧೫
ಜಿಲ್ಲೆಯ ಐತಿಹಾಸಿಕತೆ ೧೫
ಜಿಲ್ಲೆಯ ಪ್ರಾಗೈತಿಹಾಸ ೧೬
ಇತಿಹಾಸ ಪೂರ್ವಕಾಲ ; ಹಾಗೂ ಐತಿಹ್ಯಗಳು ೧೮
ಹಾನಗಲ್ಲ ತಾಲೂಕ ಕನ್ನೇಶ್ವರ ಪರಿಸರದ ಸ್ವಾತಂತ್ರ್ಯ ಹೋರಾಟ ೨೮
ಧಾರವಾಡ ಜಿಲ್ಲಾ ೪ನೇ ರಾಜಕೀಯ ಪರಿಷತ್ ೨೯
ಅಸಹಕಾರ ಚಳುವಳಿ ೩೦
ಸ್ವದೇಶಿ ಚಳುವಳಿ ೩೧
ಸಂಗೂರು ಕರಿಯಪ್ಪ : (ಎರೆಸೀಮಿ) ೩೨
ವಿಧ್ವಂಸಕ ಕಾರ್ಯಗಳು: ೩೪
ಸಿಂಧೂರ ಸಿದ್ದಪ್ಪನವರು ೩೬

ಸ್ವಾತಂತ್ರ್ಯದ ಕೆಚ್ಚು ೩೭
ಜೈಲಿನ ಅನುಭವಗಳು ೪೦
ಎಣ್ಣೆಕೊಪ್ಪ ಮಲ್ಲಿಕಾರ್ಜುನ ಗೌಡ ೪೨
ಡಾ. ವಸಂತ ಶಂಕರ್ ನಾಯ್ಕ ತಟ್ಟಿ ಸಾ: ಅಕ್ಕಿಆಲೂರ
ತಾ: ಹಾನಗಲ್ಲ ೪೩
ಸುಬ್ಬಣ್ಣಚಾರ್ ಲಕ್ಷ್ಮಣಚಾರ್ ಅಕ್ಕಿವಳ್ಳಿ ಸಾ: ಹಾನಗಲ್ಲ ೪೩
ದೊಡ್ಡನಗೌಡ ನೀಲನಗೌಡ ಪಾಟೀಲ್ (ಹರಿಜನ)
ಸಾ: ಅಕ್ಕಿ ಆಲೂರು ತಾಲೂಕು ಹಾನಗಲ್ ೪೪
ಗುಡ್ಡನ ಗೌಡ ಸ್ವಾತಂತ್ರ್ಯ ಚಳುವಳಿಗೆ ಧುಮುಕಿದ ಮೇಲೆ
ಮಾಡಿದ ಪ್ರಮುಖ ಕಾರ್ಯಗಳೆಂದರೆ ೪೫
ಹರಿಜನರಿಗಾಗಿ ಹೋರಾಟ ೪೬
ಕನ್ನೇಶ್ವರ ರಾಮ ೪೮
ಕನ್ನೇಶ್ವರ ಲಾವಣಿ ೪೯
ಕನ್ನೇಶ್ವರದ ಪರಿಸರದಲ್ಲಿಯ ಚಟುವಟಿಕೆಗಳು ೫೪
ಗ್ರಂಥಋಣ ೫೯
• ಅನುಬಂಧ
ಛಾಯಾಚಿತ್ರಗಳು ೬೧
• ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ ೬೮

# ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಕನ್ನೇಶ್ವರ

"ದೇಶದ ಬಗ್ಗೆ ಹೆಮ್ಮೆ ಪಡುವುದಕ್ಕಿಂತ ದೇಶವೇ ತನ್ನ ಬಗ್ಗೆ ಹೆಮ್ಮೆ ಪಡುವಂತೆ ಬದುಕಬೇಕು" ಎಂಬ ಅಬ್ರಾಹಿಂಲಿಂಕನರ ಮಾತನ್ನು ನೆನಪಿಸಿಕೊಂಡಾಗ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಗಳಿಗೆ ನೆನಪಿಗೆ ಬರುತ್ತದೆ. ಭಾರತ ಸ್ವಾತಂತ್ರ್ಯ ಚಳುವಳಿಯು ಬ್ರಿಟಿಷ್ ಸಾಮ್ರಾಜ್ಯದಿಂದ ಸ್ವಾತಂತ್ರ್ಯವನ್ನು ಪಡೆಯಲು ಭಾರತೀಯರು ನಡೆಸಿದ ಹೋರಾಟ. ಸ್ವಾತಂತ್ರ್ಯವೆಂದರೆ ಮನುಷ್ಯ ಇತರರಿಗೆ ಹಂಗಾಗದೆ ತನ್ನ ಸ್ವಾಭಿಮಾನದ ಬದುಕನ್ನು ರೂಪಿಸಿಕೊಳ್ಳುವ ಕ್ರಮ. ಇತರರ ಭಾವನೆಗಳನ್ನು ಅರ್ಥಮಾಡಿಕೊಂಡು ತನ್ನಂತೆಯೇ ಅವರಿಗೂ ಬದುಕಲಿರುವ ಅವಕಾಶಗಳನ್ನು ಅರಿತು ಬದುಕು ನಡೆಸುವುದಾಗಿದೆ. ಈ ನಿಟ್ಟಿನಲ್ಲಿ ಮಲೆನಾಡಿನ ಭಾಗದಲ್ಲಿರುವ ಹಾವೇರಿ ಜಿಲ್ಲೆಯ ಹಾನಗಲ್ಲ ಪ್ರದೇಶದ ವರದಾನದಿ ತೀರದಲ್ಲಿರುವ ಕನ್ನೇಶ್ವರ ಮತ್ತು ಅದರ ಪರಿಸರದ ವಾಸನೆ, ತಿಳವಳ್ಳಿ, ಅಕ್ಕಿಆಲೂರು, ಸುರಳೇಶ್ವರ, ಸಂಗೂರು, ಹಾನಗಲ್ಲ, ಕಲ್ಲಾಪುರ, ಎಣ್ಣೆಕೊಪ್ಪ ಮೊದಲಾದ ಸುತ್ತಲಿನ ಅನೇಕ ಗ್ರಾಮಗಳಲ್ಲಿರುವ ಸ್ವಾತಂತ್ರ್ಯ ಹೋರಾಟಗಾರರು ತಮ್ಮದೇ ಆದ ಮಹತ್ವದ ಕೊಡುಗೆ ನೀಡಿದ್ದಾರೆ. ಅವುಗಳಲ್ಲಿ ಮಿತಿಗೊಳಪಟ್ಟು ಈ ಕಿರು ಪುಸ್ತಕದಲ್ಲಿ ಪರಿಚಯಿಸಲೆತ್ನಿಸಿದ್ದೇನೆ.

## ಜಿಲ್ಲೆಯ ಐತಿಹಾಸಿಕತೆ

ಅವಿಭಜಿತ ಧಾರಾವಾಡ ಜಿಲ್ಲೆಯ ಒಂದು ತಾಲೂಕಾಗಿದ್ದ ಹಾವೇರಿ ಕ್ರಿ.ಶ ೧೯೯೭ ಅಗಸ್ಟ್ ೨೪ ರಂದು ಒಂದು ಜಿಲ್ಲೆಯಾಗಿ ರೂಪಗೊಂಡಿತು. ಹಾವೇರಿ ಜಿಲ್ಲೆಯು ಮಧ್ಯಕರ್ನಾಟಕದಲ್ಲಿ ೧೪.೨೮ ಮತ್ತು ೧೪.೫೯ ಅಕ್ಷಾಂಶ ಮತ್ತು ೭೫.೦೭ ಮತ್ತು ೭೫.೩೮ ರೇಖಾಂಶಗಳ ಮಧ್ಯದಲ್ಲಿದ್ದು ಉತ್ತರ ಕರ್ನಾಟಕದ ಹೆಬ್ಬಾಗಿಲು ಎನಿಸಿದೆ. ಈ ಜಿಲ್ಲೆಯನ್ನು ಉತ್ತರದಲ್ಲಿ ಧಾರವಾಡ, ಗದಗ, ಜಿಲ್ಲೆಗಳೂ ಪೂರ್ವದಲ್ಲಿ ಬಳ್ಳಾರಿ, ದಾವಣಗೆರೆ ಜಿಲ್ಲೆಗಳೂ ಪಶ್ಚಿಮದಲ್ಲಿ

ಉತ್ತರಕನ್ನಡ ಜಿಲ್ಲೆ ದಕ್ಷಿಣದಲ್ಲಿ ಶಿವಮೊಗ್ಗ, ದಾವಣಗೆರೆ ಜಿಲ್ಲೆಗಳು ಸುತ್ತುವರಿದಿವೆ. ಬೆಳಗಾವಿ ವಿಭಾಗಕ್ಕೆ ಸೇರಿದ ಈ ಜಿಲ್ಲೆಗೆ ಶಿಗ್ಗಾವಿ, ಹಾವೇರಿ, ಸವಣೂರು, ಬ್ಯಾಡಗಿ, ಹಾನಗಲ್ಲು, ಹಿರೇಕೆರೂರು, ರಾಣಿಬೆನ್ನೂರು ಹಾಗೂ ರಟ್ಟಿಹಳ್ಳಿ ಹೀಗೆ ಎಂಟು ತಾಲೂಕುಗಳು ಸೇರಿವೆ. ಇವುಗಳಲ್ಲಿ ೧೯ ಹೋಬಳಿಗಳು, ೬೯೮ ಗ್ರಾಮಗಳು, ೭ ಪುರಸಭಾ ಆಡಳಿತವಿರುವ ಪಟ್ಟಣಗಳನ್ನೊಳಗೊಂಡಿದ್ದು, ೨೮೨೮ ಚ.ಕಿ.ಮಿ. ವಿಸ್ತೀರ್ಣ ಹೊಂದಿದೆ. ರಾಜ್ಯದ ಒಟ್ಟು ವಿಸ್ತೀರ್ಣದ ಶೇ೨.೫೩ ರಷ್ಟು ಇದೆ. ಹಾನಗಲ್ಲು ತಾಲೂಕು ಅತಿ ಹೆಚ್ಚು ಗ್ರಾಮಗಳನ್ನು (೧೬೬) ಹೊಂದಿರುವ, ಸವಣೂರು ಅತೀ ಕಡಿಮೆ ಗ್ರಾಮಗಳನ್ನು (೬೭) ಹೊಂದಿದ ತಾಲೂಕುಗಳಾಗಿವೆ. ಉಳಿದಂತೆ ಬ್ಯಾಡಗಿ ೭೧, ಹಾವೇರಿ ೯೮ ಹಿರೇಕೆರೂರು ೬೫ ರಟ್ಟಿಹಳ್ಳಿ ೬೫, ರಾಣಿಬೆನ್ನೂರು ೧೧೧, ಶಿಗ್ಗಾವಿ ೧೦೨ ಗ್ರಾಮಗಳನ್ನು ಹೊಂದಿದೆ. ಹೀಗೆ ಅಸ್ತಿತ್ವಕ್ಕೆ ಬಂದ ಹಾವೇರಿ ಜಿಲ್ಲೆಯ ಐತಿಹಾಸಿಕ ಹಿನ್ನಲೆಯನ್ನು ಅವಲೋಕಿಸೋಣ.

## ಜಿಲ್ಲೆಯ ಪ್ರಾಗೈತಿಹಾಸ

ಪ್ರಾಗೈತಿಹಾಸಿಕ ಕಾಲದಲ್ಲಿ ಶಿಲಾಯುಗದ ಮಾನವರು ಈ ಭಾಗದಲ್ಲಿ ವಾಸವಾಗಿರುವ ಕುರುಹುಗಳು ಸಾಕಷ್ಟು ಈ ಜಿಲ್ಲೆಯಲ್ಲಿ ದೊರೆತಿವೆ. ಇಲ್ಲಿ ಹರಿಯುವ ತುಂಗಭದ್ರಾ, ವರದಾ ನದಿಗಳು ಪ್ರಾಗೈತಿಹಾಸಿಕ ನೆಲೆಗಳಿಗೆ ಕಾರಣೀಭೂತವಾಗಿವೆ. ಹಿರೇಕೆರೂರು ತಾಲೂಕಿಗೆ ಸೇರಿದ ಹಳ್ಳೂರು, ನಾಗವಂದ, ಭೈರನಪಾದ, ಗುಡ್ಡದಮಾದಾಪುರ, ಶಿರಗಂಬಿ ಪ್ರಾಗೈತಿಹಾಸಿಕ ನೆಲೆಗಳಾಗಿವೆ. ಇವುಗಳ ಇಡಿಯಾದ ಕಾಲವನ್ನು ೧೫೦,೦೦೦ ವರ್ಷಗಳ ಈಚೆನಿಂದ ಪೂರ್ವದಲ್ಲಿಯ ಸಮಯವೆಂದು ನಿರ್ಧರಿಸಲಾಗಿದೆ. (ಇಲ್ಲಿ ೨೦೦೦ ವರ್ಷಗಳ ಹಿಂದಿನ ಕಾಲದ ವಸ್ತುಗಳು ದೊರೆತಿವೆ). ಕ್ರಿ.ಶ ೧೯೬೦ರ ದಶಕದಲ್ಲಿ ಹಳ್ಳೂರಿನಲ್ಲಿ ನಡೆದ ಉತ್ಖನನವು ಮಹತ್ವದ ಪುರಾವೆಯನ್ನು ನೀಡಿರುವುದು ಗಮನಾರ್ಹ. ಇಲ್ಲಿ ಮಾನವನು ಮೊದಲ ಬಾರಿಗೆ ರಾಗಿಯನ್ನು ಬಳಸಿರುವುದಕ್ಕೆ ಸಾಕ್ಷಾಧಾರ ದೊರೆತಿದೆ. [ಮಹದೇವ. ಸಿ, ವಾಸುದೇವನ್, ರಮೇಶ ನಾಯ್ಕ,; ಕರ್ನಾಟಕ ದೇವಾಲಯಕೋಶ ಹಾವೇರಿ ಜಿಲ್ಲೆ, ಪ್ರಸ್ತಾವನೆ ಪುಟ.೯] ದೊರೆತ ಕಲ್ಲಿನ ಆಯುಧಗಳು ಶಿಲಾಯುಗಕ್ಕೆ ಸಂಬಂಧಿಸಿವೆ. ಇಲ್ಲಿ ದೊರೆತ ಕಬ್ಬಿಣದ ಉಪಕರಣಗಳು ಇತಿಹಾಸ ಪೂರ್ವ ಕಾಲದ ಮಾನವನು ದಕ್ಷಿಣ ಭಾರತದಲ್ಲಿ ಬಹು ಹಿಂದೆಯೆ ಸುಮಾರು ಕ್ರಿ. ಶ. ಪೂರ್ವ ೧೨೦೦ರ ಸುಮಾರಿಗೆ ಕಬ್ಬಿಣದ ಬಳಕೆಯನ್ನು ಅರಿತಿರುವುದಕ್ಕೆ ಸಾಕ್ಷಿ ಹೇಳುತ್ತವೆ. ಇಲ್ಲಿ ದೊರೆತ ಗಡಿಗೆಗಳಲ್ಲಿ ತುಂಬಿಟ್ಟ ರಾಗಿಯು ಅತ್ಯಂತ ಪ್ರಾಚೀನ ಕಾಲದಲ್ಲಿಯೇ ಈ ಭಾಗದ ಜನರು ವ್ಯವಸಾಯವನ್ನು ಕೈಗೊಂಡಿದ್ದಲ್ಲದೆ ರಾಗಿ ಬೆಳೆದುದಕ್ಕೆ ಸಾಕ್ಷಿ ಹೇಳುತ್ತದೆ.



ಬ್ಯಾಡಗಿ ತಾಲೂಕು ಮೋಟೆಬೆನ್ನೂರು ಬಳಿಯ ಬಾಚಿಗುಡ್ಡದಲ್ಲಿಯ ಕಲ್ಲಿನ ಆಯುಧಗಳು ಮತ್ತು ಹಿಂದಿನಕಾಲದ ಸಂಸ್ಕೃತಿಗಳ ಮಡಿಕೆ, ಕುಡಿಕೆಗಳೂ ದೊರೆತಿವೆ. ಸವಣೂರು ತಾಲೂಕಿನ ಜಲ್ಲಾಪುರವನ್ನು ಶಿಲಾಯುಗದ ನೆಲೆಯೆಂದು ಗುರುತಿಸಲಾಗಿದೆ. ಹಾನಗಲ್ಲು ತಾಲೂಕು ವರ್ದಿಯಲ್ಲಿ ಹಳೆಶಿಲಾಯುಗದ ಸಲಕರಣೆಗಳು ದೊರೆತಿವೆ. ರಾಣೆಬೆನ್ನೂರು ತಾಲೂಕು ನದಿಹರಳಹಳ್ಳಿಯಲ್ಲಿ ಸೂಕ್ಷ್ಮಶಿಲಾಯುಗದ (ಮೈಕ್ರೋಲಿತ್ಸ್) ಅವಶೇಷಗಳು ದೊರೆತಿವೆ. ಕಬ್ಬಿಣಯುಗದ ಬೃಹತ್ ಶಿಲಾ (ಮೆಗಾಲಿಥಿಕ್) ಸಂಸ್ಕೃತಿಯ ಮಡಿಕೆ ಕುಡಿಕೆಗಳು ಹಳ್ಳೂರು, ಪುರದಕೇರಿ, ಹಾದರಗೇರಿ (ಇಂದಿನ ಹರನಗಿರಿ)ಯಲ್ಲಿ ಲಭ್ಯವಾಗಿವೆ. ಈ ಮಡಿಕೆಗಳ ಮೇಲೆ ತಿಳಿ ಬಿಳಿಬಣ್ಣದ ಚಿತ್ರಗಳಿವೆ. ಜನರಿಗೆ ಕುದುರೆ ಅಪರಿಚಿತವಾಗಿತ್ತು ಎಂಬುದು ತಿಳಿಯುತ್ತದೆ. [ಪಾಟೀಲ್ ಭೋಜರಾಜ.; (ಜಿಲ್ಲಾ ಸಂ) ಕರ್ನಾಟಕ ಗ್ರಾಮ ಚರಿತ್ರೆ ಕೋಶ ಹಾವೇರಿ. ಜಿಲ್ಲಾ ಸಂಪುಟ–೨, ಪುಟ, ೧]

ಬೃಹತ್ ಶಿಲಾಯುಗದ ಜನರ ಕಲ್ಮನೆಗಳು, ಶಿಲಾವೃತ್ತಗಳು ಈ ಜಿಲ್ಲೆಯಲ್ಲಿ ಕಂಡು ಬಂದಿವೆ. ರಾಣಿಬೆನ್ನೂರು ತಾಲೂಕು ಅಸುಂಡಿ, ಕೋಟಿಹಾಳ, ಕೂಸನೂರು ಹಾಗೂ ಮಲಕನಹಳ್ಳಿಗಳಲ್ಲಿಯೂ, ಹಾವೇರಿ ತಾಲೂಕು ಬೆನಕನಹಳ್ಳಿ ಅಗಡಿಗಳಲ್ಲಿಯೂ, ಬ್ಯಾಡಗಿ ತಾಲೂಕು ಮೋಟೇಬೆನ್ನೂರು, ಕದರಮಂಡಲಗಿಗಳಲ್ಲಿ ಇಂಥ ಗೋರಿಗಳಿವೆ. ಇವುಗಳನ್ನು ಸ್ಥಳೀಯರು ಪಾಂಡವರ ಕಟ್ಟೆ, ಸಿದ್ದರಕಟ್ಟೆ ಎಂದೆಲ್ಲಾ ಕರೆಯುತ್ತಾರೆ. ಇವುಗಳ ಕಾಲಮಾನ ಕ್ರಿ.ಪೂ.೧೧೦೦ ರಿಂದ ಕ್ರಿ.ಪೂ.೩೦೦. ಎಂದು ಊಹಿಸಲಾಗಿದೆ. [ಅದೇ, ಪುಟ, ೩೪]

## ಇತಿಹಾಸ ಪೂರ್ವಕಾಲ ; ಹಾಗೂ ಐತಿಹ್ಯಗಳು

ಪ್ರಾಚೀನ ಕಾಲದಲ್ಲಿ ಕುಂತಳ ದೇಶದ ಭಾಗವಾಗಿದ್ದ ಈ ಜಿಲ್ಲೆಯು ಹಿರೇಕೆರೂರು ತಾಲೂಕಿನ ಹಳ್ಳೂರು ಮತ್ತು ಕುಡಪಲಿ ಗ್ರಾಮಗಳು ಇತಿಹಾಸ

ಪೂರ್ವಕಾಲಕ್ಕೆ ಸೇರಿದವುಗಳಾಗಿವೆ. ಸುಮಾರು ಕ್ರಿ.ಪೂ. ೧೨೦೦ರ ಸುಮಾರಿಗೆ ಕಬ್ಬಿಣದ ಆಯುಧೋಪಕರಣಗಳನ್ನು ದಕ್ಷಿಣ ಭಾರತದಲ್ಲಿ ಬಳಸಿರುವುದನ್ನು ಕಾಣಬಹುದು. ಪ್ರಾಗೈತಿಹಾಸಿಕ ಕಾಲಕ್ಕೆ ಸಂಬಂಧಿಸಿದಂತೆ ೧೯೬೦ರ ದಶಕದಲ್ಲಿ ಹಳ್ಳೂರಿನಲ್ಲಿ ನಡೆದ ಉತ್ಖನನದಲ್ಲಿ ಮಾನವನು ಮೊದಲ ಬಾರಿಗೆ ರಾಗಿಯನ್ನು ಬಳಸಿರುವುದಕ್ಕೆ ಸಾಕ್ಷಾಧಾರಗಳು ದೊರೆತಿವೆ. ಈ ನೆಲೆಯ ಕಾಲವನ್ನು ಕ್ರಿ. ಪೂ. ೧೦೦೦ ವರ್ಷಗಳೆಂದು ನಿರ್ಧರಿಸಲಾಗಿದೆ. ಇದೇ ರೀತಿ ಕುಡುಪಲಿ ಗ್ರಾಮದಲ್ಲಿ ಶಾತವಾಹನರ ಕಾಲದ ಅವಶೇಷಗಳು ದೊರೆತಿದ್ದು ಅವುಗಳಲ್ಲಿ ಮಡಕೆ ಚೂರುಗಳು ಪ್ರಮುಖವಾಗಿದ್ದು, ಹಿರೇಕೆರೂರು ತಾಲೂಕಿನ ತಡಕನಹಳ್ಳಿ, ಮೇದೂರು, ಕಮಲಾಪುರ ಹಾಗೂ ಹಾನಗಲ್ ತಾಲೂಕಿನ ಗುಡಗುಡಿ ಗ್ರಾಮಗಳಲ್ಲಿ ಬೃಹತ್‌ಶಿಲಾಯುಗದ ಕಾಲಕ್ಕೆ ಸೇರಿದ ಅವಶೇಷಗಳು ಕಂಡುಬರುತ್ತವೆ.

ಬೃಹತ್‌ಶಿಲಾಯುಗದ ಜನರು ಭಾರೀಗಾತ್ರದ ಕಲ್ಲು ಚಪ್ಪಡಿಗಳನ್ನು ಬಳಸಿ ಮೇಜಿನಂತೆ ಕಾಣುವ ಕಲ್ಮನೆಗಳನ್ನು ಹಾಗೂ ಶಿಲಾವೃತ್ತಗಳು ಜಿಲ್ಲೆಯಲ್ಲಿ ಹಲವು ಗ್ರಾಮಗಳಲ್ಲಿ ಕಂಡುಬಂದಿವೆ. ಅವುಗಳಲ್ಲಿ ಅವಿಭಜಿತ ಹಿರೇಕೆರೂರು ತಾಲೂಕಿನ ನೆಶ್ವಿ ಗ್ರಾಮದಲ್ಲಿ [ಮನ್ಸಾಚಾರ್ ಕಲವೀರ, ಡೆಕ್ಕನ್ ಹೆರಾಲ್ಡ್, ನ್ಯೂಸ್ ಪೇಪರ್.] ಬೃಹತ್‌ಶಿಲಾಯುಗದ ಎರಡು ಸಮಾಧಿಗಳು ಕಂಡುಬರುತ್ತವೆ. ಎಂದಿರುವರು. ಇವು ೨೦೦೦ ವರ್ಷಗಳ ಹಿಂದಿನವು ಎಂದು ಗೊತ್ತಾಗುತ್ತದೆ ಹಾಗೂ ಅಸುಂಡಿ, ಕೋಟಿಹಾಳ, ಕುಸೂನೂರು, ಮಲಕನಹಳ್ಳಿ, ರಾಣಿಬೆನ್ನೂರು ತಾಲೂಕಿನ ಬೆನಕನಹಳ್ಳಿ, ಬ್ಯಾಡಗಿ ತಾಲೂಕಿನ ಮೋಟೆಬೆನ್ನೂರು, ಕದರಮುಂಡಲಗಿ ಹಾಗೂ ಹಿರೇಕೆರೂರು ಮುಂತಾದಕಡೆ ಇಂತಹ ಕಲ್ಮನೆಯಂಥ ಗೋರಿಗಳಿವೆ. ಶಿಲೆಯ ಹಲಗೆಗಳನ್ನು ಬಳಿಸಿ ಮಾಡಿದ ಈ ಬೃಹತ್‌ಕಲ್ಮನೆ ಸಮಾಧಿಗಳನ್ನು ಪಾಂಡವರ ಕಟ್ಟೆ, ಸಿದ್ಧರ ಕಟ್ಟೆ, ಎಂದೆಲ್ಲಾ ಕರೆಯುತ್ತಾರೆ. ಇದಲ್ಲದೆ ದೊಡ್ಡ ದೊಡ್ಡ ಕಲ್ಲುಗಳಿಂದ ರಚಿಸಿದ ಶಿಲಾವೃತ್ತಗಳೂ ಇವೆ. [ಶಿವತಾರಕ್ ಕೆ. ಬಿ.; 'ಕರ್ನಾಟಕದ ಪುರಾತತ್ವ ನೆಲೆಗಳು' ಪುಟ, ೬೨೯–೪೮]

ಹಾವೇರಿ ಜಿಲ್ಲೆ ವಿವಿಧ ಆಳರಸರ ಆಳ್ವಿಕೆಗೆ ಒಳಪಟ್ಟಿರುವುದನ್ನು ಹಲವು ಆಧಾರಗಳಿಂದ ಗಮನಿಸಬಹುದು. ಅಂಥ ಅರಸು ವಂಶಗಳೆಂದರೆ –



**ಶಾತವಾಹನರು ;** ಮೌರ್ಯರ ಪತನದ ನಂತರ ವಿಶಾಲ ಸಾಮ್ರಾಜ್ಯ ಕಟ್ಟಿದ ಶ್ರೇಯಸ್ಸು ಶಾತವಾಹನರಿಗೆ ಸಲ್ಲುತ್ತದೆ. ಇವರು ಮೊದಲಬಾರಿಗೆ ದಕ್ಷಿಣದಲ್ಲಿ ವಿಶಾಲ ಸಾಮ್ರಾಜ್ಯದ ನಿರ್ಮಾತೃಗಳೂ ಹೌದು, ಈ ಅರಸುಮನೆತನಕ್ಕೆ ಹಾವೇರಿ ಜಿಲ್ಲೆಯ ಪ್ರದೇಶಗಳು ಅವರ ಅಧೀನಕ್ಕೆ ಒಳಪಟ್ಟಿರುವ ಕೆಲವು ಪ್ರದೇಶಗಳನ್ನು ಗಮನಿಸಬಹುದು. ಡಾ. ಶ್ರೀನಿವಾಸ ಪಾಡಿಗಾರ ಹೇಳುವಂತೆ, ಶಾತವಾಹನರ ಕಾಲದಲ್ಲಿ ಅನೇಕ ಸಂಖ್ಯೆಯಲ್ಲಿ ನಗರಗಳು ಅಸ್ತಿತ್ವಕ್ಕೆ ಬಂದವು. ಹಾವೇರಿ ಜಿಲ್ಲೆಯ ಸಂಗೂರು, ಹೊಸರಿತ್ತಿ, ಹಳ್ಳಿಹಾಳ, ತಡಸ, ಸಿಡೇನೂರು, ಆಣೂರು, ಕದರಮುಂಡಲಗಿ, ಮೋಟೆಬೆನ್ನೂರು, ಹೊನ್ನತ್ತಿ, ಮುದೇನೂರು, ಕೂನಬೇವು, ಇಟಗಿ, ನಿಟ್ಟೂರು, ಶಂಕರನಹಳ್ಳಿ ಮುಂತಾದ ಕಡೆ ಶಾತವಾಹನರ ಕಾಲದ ಅವಶೇಷಗಳು ಕಂಡುಬರುತ್ತವೆ.

ಅಲೆಕ್ಸಾಂಡ್ರಿಯಾದ ಗ್ರೀಕ್ ಭೂಗೋಳ ತಜ್ಞ ಟಾಲಮಿಯು (ಕ್ರಿ. ಶ. ೧೫೦) ಉಲ್ಲೇಖಿಸುವ ಊರುಗಳಲ್ಲಿ ಜಿಲ್ಲೆಯ ಅಕ್ಕಿಆಲೂರು, ಮುಳಗುಂದ ಸೇರಿದ್ದು, ಅವು ಆಗ ಭಾರತ ಮತ್ತು ರೋಮ್‌ಗಳ ಮಧ್ಯೆ ನಡೆದ ಸಮೃದ್ಧ ವ್ಯಾಪಾರದಲ್ಲಿ ಈ ಜಿಲ್ಲೆಯ ಪಾಲನ್ನು ಕಾಣಬಹುದು. ಮತ್ತು ಹಾನಗಲ್ ತಾಲೂಕಿನ ಅಕ್ಕಿಆಲೂರಲ್ಲಿ ರೋಮನ್ ನಾಣ್ಯಗಳು ದೊರೆತಿರುವುದು ಇದಕ್ಕೆ ಪೂರಕವಾಗಿದೆ. ಒಟ್ಟಾರೆ ಶಾತವಾಹನರ ಕಾಲದಲ್ಲಿ ಕೈಮಗ್ಗದ ಉದ್ಯಮಕ್ಕೆ ಈ ಪ್ರದೇಶ ಪ್ರಸಿದ್ಧವಾಗಿತ್ತು ಎಂಬುದನ್ನು ಗಮನಿಸಬಹುದಾಗಿದೆ. [ಕಾಮತ್ ಸೂರ್ಯನಾಥ (ಸಂ); ಧಾರವಾಡ ಜಿಲ್ಲಾ ಗ್ಯಾಸೆಟಿಯರ್, ಪುಟ ೫೪.] ಅಂದರೆ ಈ ಪ್ರದೇಶ ವ್ಯಾಪಾರಕ್ಕೆ ಪ್ರಸಿದ್ಧವಾಗಿದ್ದು, ನಗರಗಳ ವಿವರಗಳನ್ನು ಗಮನಿಸಿದರೆ, ಶಾತವಾಹನರ ಆಳ್ವಿಕೆಯಲ್ಲಿ ಹಾವೇರಿ ಭಾಗದಲ್ಲಿ ಉತ್ತಮ ಆರ್ಥಿಕಸ್ಥಿತಿಯಿತ್ತು ಎಂಬುದನ್ನು ಅರಿಯಬಹುದು.

**ಕದಂಬರು:** ಉತ್ತರಕನ್ನಡ ಜಿಲ್ಲೆಯ ಬನವಾಸಿಯಿಂದ ಕ್ರಿ. ಶ. ಸುಮಾರು ೩೪೫ ರಿಂದ ಆಳಲು ಆರಂಭಿಸಿದ ಮಯೂರ ಶರ್ಮನಿಂದ ಕದಂಬವಂಶ ಸ್ಥಾಪನೆಯಾಯಿತು. [ಅದೇ ಪುಟ ೫೪] ಕ್ರಿ. ಶ. ೪ನೇ ಶತಮಾನದಿಂದ ೬ನೇ ಶತಮಾನದವರೆಗೆ ಬನವಾಸಿಯನ್ನು ರಾಜಧಾನಿ ಮಾಡಿಕೊಂಡು ಕುಂತಳನಾಡನ್ನು ಆಳಿದವರು, ಬನವಾಸಿ ಕದಂಬರು, ಆದಿಕದಂಬರು ಎಂದು ಹೆಸರಾದವರು. ಇವರಿಗೆ ಸಂಬಂಧಿಸಿದಂತೆ ಮೂರು ತಾಮ್ರ ಪಟಗಳು ದೇವಗಿರಿ(ಹಾವೇರಿ

ತಾಲೂಕು)ಯಲ್ಲಿಯೂ, ಒಂದು ತಾಮ್ರಪಟ ಬ್ಯಾಡಗಿ ತಾಲೂಕು ಮುತ್ತೂರಿನಲ್ಲಿಯೂ ದೊರೆತಿವೆ.

ಮಯೂರವರ್ಮನಿಂದ ಐದನೇಯವನಾದ ಅರಸನು ಕಾಕುಸ್ಥವರ್ಮ, ಇವನ ಮೂವರು ಮಕ್ಕಳಲ್ಲಿ ಹಿರಿಯವನು ಬನವಾಸಿಯಿಂದ ರಾಜ್ಯಭಾರಮಾಡಿದರೆ, ಮೂರನೆಯವನಾದ ೧ನೇ ಕೃಷ್ಣವರ್ಮನು ಅಣ್ಣನಿಂದ ದೂರವಾಗಿ ಪ್ರತ್ಯೇಕರಾಜ್ಯ ಆಡಳಿತ ಪ್ರಾರಂಭಿಸಿದನು. ಇದಕ್ಕಾಗಿ ಅವನು ಆರಿಸಿಕೊಂಡು ರಾಜಧಾನಿ ಸ್ಥಾಪಿಸಿದ ಊರು ಹಾವೇರಿ ತಾಲೂಕಿನ ದೇವಗಿರಿ. ಈ ಊರಿಗೆ ತ್ರಿಪರ್ವತವೆಂದೂ ಕರೆಯಲಾಯಿತು. ೧ನೇ ಕೃಷ್ಣವರ್ಮನಿಂದ ಪ್ರಾರಂಭವಾದ ಈ ಶಾಖೆ ಮುಂದೆ ಆರು ತಲೆಮಾರುಗಳವರೆಗೆ ಇಲ್ಲಿಂದಲೆ ಆಡಳಿತ ನಡೆಸಿತು. ಕ್ರಿ.ಶ.೫೧೬ ರಿಂದ ೫೪೦ರ ವರೆಗೆ ಆಳಿದ ೨ನೇ ಕೃಷ್ಣವರ್ಮನು ಮೂಲವಂಶದ ಹರಿವರ್ಮನನ್ನು ಸೋಲಿಸಿ ತನ್ನ ರಾಜಧಾನಿ ಬನವಾಸಿಗೆ ಸ್ಥಳಾಂತರಿಸಿದನು. ಆದರೆ ಅವನ ಮೊಮ್ಮಕ್ಕಳು ಇಲ್ಲಿಯೇ ಉಳಿದರು.

**ಬಾದಾಮಿ ಚಾಲುಕ್ಯರು:** ಕ್ರಿ.ಶ. ೫೭೮ ರಿಂದ ೭೫೭ರ ವರೆಗೆ ಕನ್ನಡ ನಾಡನ್ನು ಆಳಿದ ಬಹು ಪ್ರತಿಷ್ಠಿತ ಪ್ರಾಚೀನ ಅರಸು ಮನೆತನವಿದು. ಇಂಥ ಪ್ರಾಚೀನತಮ ರಾಜಮನೆತನದ ಬಗೆಗೆ ದಾಖಲೆಗಳು ದೊರೆಯುವುದು ಬಹು ಅಪರೂಪದ ಸಂಗತಿ. ಆದರೆ ಹಾವೇರಿ ಜಿಲ್ಲೆಯ ಸವಣೂರು, ಶಿಗ್ಗಾವಿ, ಅಕ್ಕಿಆಲೂರುಗಳಲ್ಲಿ ತಾಮ್ರಪಟಗಳು ದೊರೆತಿವೆ. ಉಳಿದೆಡೆಗಳಲ್ಲಿ ಸುಮಾರು ೧೭ ಶಾಸನಗಳು ಲಭಿಸಿದ್ದು [ಪಾಟೀಲ್ ಭೋಜರಾಜ: ಸಂ. ಕರ್ನಾಟಕ ಗ್ರಾಮಚರಿತ್ರೆ ಕೋಶ, ಪುಟ.೩೫] ಇವರ ಇತಿಹಾಸದ ಮೇಲೆ ಬೆಳಕು ಚೆಲ್ಲಿವೆ. ಹಾವೇರಿ ತಾಲೂಕಿನ ಗಣಜೂರು ಎಂಬ ಚಿಕ್ಕ ಗ್ರಾಮದಲ್ಲಿ ಬಾದಾಮಿ ಚಾಲುಕ್ಯರ ವಿಕ್ರಮಾದಿತ್ಯನ ಒಂದು, ವಿಜಯಾದಿತ್ಯನ ಒಂದು ಶಾಸನ ನಿಂತಿವೆ. ವಿಜಯಾದಿತ್ಯನ ಇನ್ನೊಂದು ಶಾಸನ ಶಿಗ್ಗಾವಿ ತಾಲೂಕಿನ ಬನ್ನಿಕೊಪ್ಪದಲ್ಲಿದೆ.

ಹರಿಹರದ ಒಂದು ತಾಮ್ರ ಶಾಸನವು ಕ್ರಿ.ಶ. ೬೯೫ರಲ್ಲಿ ಬಾದಾಮಿ ಚಾಲುಕ್ಯರ ಚಕ್ರವರ್ತಿ ವಿನಯಾದಿತ್ಯನು ಹಾವೇರಿ ತಾಲೂಕು ಕರಜಗಿಯಲ್ಲಿ ಬೀಡು ಬಿಟ್ಟಿದ್ದನೆಂದು ಹೇಳುತ್ತದೆ. ಈ ಅರಸು ಮನೆತನಕ್ಕೆ ಸಂಬಂಧಿಸಿದ ೦೩ ಶಾಸನಗಳು ಈ ತಾಲೂಕಿನಲ್ಲಿವೆ. ೨ ನೆಯ ವಿಕ್ರಮಾದಿತ್ಯನ (ಸುಮಾರು ಕ್ರಿ. ಶ. ೮) ಶಿಡೇನೂರು ಶಾಸನ ಮಹತ್ವದ್ದು, ಚಿಕ್ಕನಂದಿಹಳ್ಳಿ ಗ್ರಾಮವೊಂದರಲ್ಲಿಯೆ



ಇವರ ೨ ಶಾಸನಗಳಿವೆ. ಎರಡು ಬಾದಾಮಿ ಚಾಲುಕ್ಯರ ಕೊಕ್ಕುಳಿ ವಿಕ್ರಮಾದಿತ್ಯನಿಗೆ (ಸುಮಾರು ಕ್ರಿ. ಶ. ೮) ಸೇರಿದುವು. ಮುಳಗುಂದ ನಾಡನ್ನಾಳುವ ದೋಸಿರಾಜಿಗರ ಸೇನಾವರಸನಿಂದ ದಾನ ಹಾಗೂ ಕಣ ಅರ್ಕದಿ ಎಂಬುವನ ಮರಣವೊಂದರ ವಿಷಯ. ಇನ್ನೊಂದು ಕಿರಿಯಣ ಎಂಬುವನ ಮರಣದ ಪ್ರಸ್ತಾಪಿಸಿದೆ. [ಅದೇ ಪುಟ, ೩೪] ಈ ವಿಶಾಲ ಸಾಮ್ರಾಜ್ಯ ಮುಂದೆ ರಾಷ್ಟ್ರಕೂಟ ಮತ್ತು ಕಲ್ಯಾಣ ಚಾಲುಕ್ಯರ ಕಾಲದಲ್ಲೂ ಮುಂದುವರಿಯಿತು. ಕರ್ನಾಟಕದ ಪ್ರತಿಷ್ಠೆ ಅಖಿಲ ಭಾರತ ಮಟ್ಟದಲ್ಲಿ ಬೆಳೆದು ಚಾಳುಕ್ಯರ ಸೇನೆಯ ಕರ್ಣಾಟಕಬಲ ಎಂದು ಪ್ರಸಿದ್ಧಿಗೆ ಬಂತಷ್ಟೇ ಅಲ್ಲಾ 'ಕರ್ಣಾಟಬಲಂ ಅಜೇಯಂ' ಎಂಬ ಕೀರ್ತಿಗೆ ಭಾಜನವಾಯಿತು. [ಕಾಮತ್ ಸೂರ್ಯನಾಥ (ಸಂ); ಧಾರವಾಡ ಜಿಲ್ಲಾ ಗ್ಯಾಸೆಟಿಯರ್, ಪುಟ ೫೭]

**ರಾಷ್ಟ್ರಕೂಟರು:** ಬನವಾಸಿಯಿಂದ ಬಾದಾಮಿಗೆ ಸೇರಿದ ರಾಜಧಾನಿ ಅಲ್ಲಿಂದ ಮಾನ್ಯಖೇಟಕ್ಕೆ ಸರಿಯುವ ಮೂಲಕ ರಾಷ್ಟ್ರಕೂಟರು ಸಾಮ್ರಾಟರಾದರು. ರಾಷ್ಟ್ರಕೂಟರನ್ನು ಕುರಿತ ಶಾಸನಗಳು ಕರ್ನಾಟಕದಲ್ಲಿ ಸುಮಾರು ೭೦೦ ಇರಬಹುದಾದರೆ ಹಾವೇರಿ ಜಿಲ್ಲೆಯೊಂದೇ ೧೦೦ ರಷ್ಟು ಶಾಸನಗಳನ್ನು ಹೊಂದಿದ್ದು ಈ ಮನೆತನದ ಇತಿಹಾಸಕ್ಕೆ ಆಧಾರ ಒದಗಿಸುವ ಮೂಲಕ ದಾಖಲೆ ಸ್ಥಾಪಿಸಿದೆ. ರಾಷ್ಟ್ರಕೂಟರ ಆರಂಭಿಕ ಅರಸ ಅಕಾಲವರ್ಷ ೧ನೇ ಕೃಷ್ಣನನ್ನು ಕುರಿತ ದಾಖಲೆಗಳು ವಿರಳ, ಅದರಲ್ಲಿ ಕನ್ನಡ ಶಾಸನಗಳು ತೀರ ವಿರಳ, ಹೀಗಿರುವಾಗ ಈ ಜಿಲ್ಲೆಯ ಸವಣೂರು ತಾಲೂಕಿನ ಹತ್ತಿಮತ್ತೂರು ಗ್ರಾಮ ಒಂದು ಕನ್ನಡ ಶಾಸನವನ್ನು ಕಾಣಿಕೆಯಾಗಿತ್ತಿರುವದು.

ರಾಷ್ಟ್ರಕೂಟರ ಮಾಂಡಳಿಕ ಅರಸರಲ್ಲಿ ಸುಪ್ರಸಿದ್ಧರಾದವರು ಮಾಟೂರು ಹಾಗೂ ಚೆಲ್ಲಕೇತನ ವಂಶದವರು. ಇವರೀರ್ವರನ್ನು ಕುರಿತು ಇಲ್ಲಿಯ ಶಾಸನಗಳು ವಿವರ ಒದಗಿಸುತ್ತವೆ. ಚೆಲ್ಲಕೇತನ ವಂಶದವರು ರಾಷ್ಟ್ರಕೂಟರ ಅಮೋಘವರ್ಷ ನೃಪತುಂಗನ ಕಾಲಕ್ಕೆ ಬೆಳಕಿಗೆ ಬಂದವರು. ಈ ವಂಶದ ಮೂಲಪುರುಷ ಬಂಕೆಯ ಚಕ್ರವರ್ತಿಗೆ ಬಲಗೈಯಾಗಿದ್ದನು. ಈತನು ಬಂಕಾಪುರದವನು. ಈತನ ಹೆಸರೇ ಊರಿಗೆ ಬಂದಿದೆ. ಈ ವಂಶದವರು ಬಂಕಾಪುರವನ್ನು ರಾಜಧಾನಿ ಮಾಡಿಕೊಂಡು ಬನವಾಸಿ ಮಂಡಲದ ಆಡಳಿತ ನಡೆಸಿದರು. [ಪಾಟೀಲ್ ಭೋಜರಾಜ.; (ಸಂ) ಕರ್ನಾಟಕ ಗ್ರಾಮಚರಿತ್ರೆ ಕೋಶ, ಪುಟ,೩೬]

**ಕಲ್ಯಾಣ ಚಾಲುಕ್ಯರು:** ಈ ಅರಸು ಮನೆತನದ ಬಗೆಗೆ ಹಾವೇರಿ ಜಿಲ್ಲೆಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಶಾಸನಗಳಿವೆ. ಇವುಗಳಲ್ಲಿ ಅತ್ಯಂತ ಮಹತ್ವದ ಒಂದು ಶಾಸನ ಹಿರೇಕೆರೂರು ತಾಲೂಕಿನ ಚಿಕ್ಕೇರೂರಿನ ಬಳರಿ ದೇವಾಲಯದ ಮುಂದಿನದು. ಕಾಲ ಕ್ರಿ.ಶ. ೯೯೩, ನೂರ್ಮಡಿ ತೈಲಪನು ಉತ್ತರದ ಮಾಳವರ ಪರಮಾರರ ದೊರೆ ಮುಂಜರಾಜನ ಮೇಲೆ ಏರಿಹೋಗಿ ಜಯಿಸಿದ ವಿಷಯವಿದೆ. ಕರ್ನಾಟಕದಲ್ಲಿ ಈ ವಿಷಯ ಹೇಳುವ ಶಾಸನ ಇದೊಂದೇ ಆಗಿದೆ. [ಕಾಮತ್ ಸೂರ್ಯನಾಥ (ಸಂ); ಧಾರವಾಡ ಜಿಲ್ಲಾ ಗ್ಯಾಸೆಟಿಯರ್,, ಪುಟ. ೬೬.] ಜಿಲ್ಲೆಯಲ್ಲಿ ಚಾಲುಕ್ಯರ ಮುಖ್ಯ ಪ್ರಾಂತಗಳೆಂದರೆ– ಪಾನುಂಗಲ್–೫೦೦(ಹಾನಗಲ್ ಕೇಂದ್ರ), ಬಾಸವೂರು–೧೪೦(ಬಾಸೂರು ಕೇಂದ್ರ), ರಟ್ಟಪಳ್ಳಿ–೭೦(ರಟ್ಟೀಹಳ್ಳಿ), ಇಟಗಿ–೩೦(ಇಟಗಿ) ಹೊನ್ನವತ್ತಿ–೧೨(ಹೊನ್ನತ್ತಿ), ಬೆಣ್ಣೆವೂರು–೧೨(ಮೋಟೆಬೆನ್ನೂರು), ಬಿನ್ನವೂರು–೧೨(ರಾಣಿಬೆನ್ನೂರು) ಹೀಗೆ ಮುಂತಾದ ಉಪ ವಿಭಾಗಗಳು [ಪಾಟೀಲ್ ಭೋಜರಾಜ: ಸಂ. ಕರ್ನಾಟಕ ಗ್ರಾಮಚರಿತ್ರೆ ಕೋಶ, ಪುಟ, ೩೬] ಜಿಲ್ಲೆಯಲ್ಲಿ ಉಲ್ಲೇಖವಾಗಿವೆ.

**ಕಲಚೂರಿಗಳು:** ಕಲ್ಯಾಣ ಚಾಲುಕ್ಯರ ಮಾಂಡಲಿಕರು ಹಾಗೂ ಸಂಬಂಧಿಗಳು. ಇವರು ಕ್ರಿ.ಶ ೧೧೬೨ರಲ್ಲಿ ಅಧಿಕಾರಕ್ಕೆ ಬಂದರು, ಇವರಿಗೆ ಸಂಬಂಧಿಸಿದ ಆಧಾರಗಳು ಜಿಲ್ಲೆಯ ವಿವಿಧ ಭಾಗಗಳಲ್ಲಿ ಕಾಣಬಹುದು. ಇವರ ಅವಧಿಯಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಗಮನಾರ್ಹ ಬದಲಾವಣೆಗೆ ಅಥವಾ ಕ್ರಾಂತಿಗೆ ಕಾರಣವಾದ ಈ ವಂಶಕ್ಕೆ ಸಂಬಂಧಿಸಿದ ಅಂಶಗಳನ್ನು ಜಿಲ್ಲೆಯಲ್ಲಿ ಕಾಣಬಹುದು.

ಇವರ ಆಳ್ವಿಕೆಯಲ್ಲಿ ಜೈನರ ವಿರುದ್ಧ ವಾದನಡೆಸಿ ಗೆದ್ದ ವೀರಶೈವ ಏಕಾಂತ ರಾಮಯ್ಯನಿಗೆ ಜಯಪತ್ರವನ್ನು ಬಿಜ್ಜಳನು ಕೊಟ್ಟುದಾಗಿ ಅಬ್ಬಲೂರು ಶಾಸನ ಹೇಳುತ್ತದೆ. ಕ್ರಿ. ಶ. ೧೧೫೪ ರಲ್ಲೇ ಬಿಜ್ಜಳ ತಂತ್ರಪಾಲ ಬಲ್ಲರಸ ಹಾನಗಲ್ ತಾಲೂಕು ಗೆಜ್ಜೆಹಳ್ಳಿ ತೈಲೇಶ್ವರ ದೇವರಿಗೆ ದಾನ ನೀಡಿದ ಶಾಸನವಿದೆ. ಹಿಂದಣ ಕ್ರಿ. ಶ. ೧೧೪೬ರ ಕಾಗಿನೆಲ್ಲಿ ಬಂಡಾಯವನ್ನು ಗಮನಿಸಿದಾಗ ಈ ಪ್ರದೇಶ ಬಿಜ್ಜಳನ ವಶವಾಗಿತ್ತೇ ಎಂಬ ಸಂದೇಹ ಬರುತ್ತದೆ. ಹಾಗೂ ಮಂತಗಿಯಲ್ಲಿ ಕಲಿದೇವ ಸೆಟ್ಟಿಯು ಬಿಜ್ಜಳನ ಕಾಲದಲ್ಲಿ ಬಸದಿಯನ್ನು ಸ್ಥಾಪಿಸಿ ೨೪ ತೀರ್ಥಂಕರರನ್ನು ಪ್ರತಿಷ್ಠಾಪಿಸಿದ ಉಲ್ಲೇಖವಿದೆ. ಅಲ್ಲದೆ,



ಹುಯಿಲುಗೋಳ(ಶಿಗ್ಗಾಂವ್ ಹತ್ತಿರ)ದ ವ್ಯಾಪಾರಿ ಶ್ರೇಣಿಗಳು ಆ ಊರ ಚಂಡೇಶ್ವರ ದೇವರಿಗೆ ದಾನ ನೀಡಿದ ವಿಚಾರ ಕ್ರಿ.ಶ. ೧೧೬೪ರ ಶಾಸನದಲ್ಲಿದೆ. ಬಿಜ್ಜಳನ ಕೊನೆಯ ಶಾಸನ ಕ್ರಿ.ಶ ೧೧೬೮ ರಂತೆ ಹಿರೇಕೆರೂರು ತಾಲೂಕು ಎಮ್ಮಿಗನೂರಲ್ಲಿ ಕಾಮಗಾವುಂಡ ರಾಮೇಶ್ವರ ದೇವಾಲಯ ನಿರ್ಮಾಣ ಮಾಡಿದ. [ಕಾಮತ್ ಸೂರ್ಯನಾಥ (ಸಂ); ಧಾರವಾಡ ಜಿಲ್ಲಾ ಗ್ಯಾಸೆಟಿಯರ್, ಪುಟ. ೭೪–೭೫] ಈ ವಂಶದಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಕ್ರಾಂತಿಯನ್ನೇ ಮಾಡಿದ ಬಸವಣ್ಣನ ನೇತೃತ್ವದಲ್ಲಿ ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ದೋಷಗಳನ್ನು ತೊಳೆದು ಹೊಸ ರೂಪ ನೀಡಲು ಯತ್ನಿಸಿದ್ದು, ಅದಕ್ಕೇ ಪ್ರತಿರೋಧವಾಗಿ ಹಲವು ಜನತೆಯ ಮರಣವಾದರೂ, ಅಂದಿನ ಆ ಕ್ರಾಂತಿಯಿಂದ ಇಂದಿಗೂ ಅದರ ಪರಿಣಾಮ ಈ ಪ್ರದೇಶಗಳ ಮೇಲೆ ಆಗಿರುವುದನ್ನು ನಾವು ಕಾಣಬಹುದು.

**ಹಾನಗಲ್ಲು ಕದಂಬರು:** ಇವರು ಕಲ್ಯಾಣ ಚಾಲುಕ್ಯರ ಮಾಂಡಲಿಕರಾಗಿ ಹಾವೇರಿ ಜಿಲ್ಲೆಯಲ್ಲಿ ಸುಮಾರು ೮ನೇ ಶತಮಾನದಿಂದ ಸುಮಾರು ೧೨ನೇ ಶತಮಾನದವರೆಗೆ ಉತ್ತರ ಕರ್ನಾಟಕ ಭಾಗದಲ್ಲಿ ಆಳ್ವಿಕೆ ನಡೆಸಿದರು. ಇವರು ಆರಂಭದಲ್ಲಿ ರಾಷ್ಟ್ರಕೂಟರ ಕಾಲದಲ್ಲಿ ಬನವಾಸಿಯಿಂದ ಆಳ್ವಿಕೆ ಮಾಡುತ್ತಿದ್ದು, ಮುಂದೆ ಬನವಾಸಿ–೧೨೦೦೦, ಪ್ರಾಂತಕ್ಕೆ ಇವರ ಮೇಲೆ ಅಧಿಕಾರ ಚಲಾಯಿಸಲು ಒಬ್ಬ ಪ್ರತ್ಯೇಕ ಮಂಡಳೇಶ್ವರನನ್ನು ಬಳ್ಳಿಗಾಂವೆ(ಶಿವಮೊಗ್ಗ ಜಿ.)ಯಿಂದ ನೇಮಿಸಿದಾಗ, ಅದಕ್ಕೆ ಒಳಪಟ್ಟ ಪಾನುಂಗಲ್–೫೦೦ರ ಮೇಲೆ ಇದರ ಹೆಚ್ಚಿನ ಅಧಿಕಾರ ಹೊಂದಿದರು. ೬ನೇ ವಿಕ್ರಮಾದಿತ್ಯನು ೧೦೭೫ರಲ್ಲಿ ತೈಲನ ಚಿಕ್ಕಪ್ಪ ಶಾಂತಯದೇವನಿಗೆ ಅಧಿಕಾರ ಒಪ್ಪಿಸಿದ(ನೀರಲಗಿ ಶಾಸನ) ಇವನ ಜೊತೆ ಇವನ ಮಗ ಎರಡನೇಯ ಮಗ ತೈಲನು ಬನವಾಸಿ, ಹಾನಗಲ್‌ಗಳನ್ನು ಆಳುತ್ತಿದ್ದನು. ಶಾಂತಿವರ್ಮ ಅಥವಾ ಶಾಂತಯ ಮುಂದೆ ಬಂಕಾಪುರದಲ್ಲಿ ಇರುತ್ತಿದ್ದನು.[ ಅದೇ, ಪುಟ ೭೭.]

**ಗುತ್ತಲದ ಗುತ್ತರು:** ಕಲ್ಯಾಣ ಚಾಲುಕ್ಯರ ಮಾಂಡಲಿಕರಾಗಿ, ಕೆಲಕಾಲ ಸ್ವತಂತ್ರರಾಗಿ, ಮುಂದೆ ದೇವಗಿರಿಯ ಸೇವುಣರ ಮಾಂಡಲಿಕರಾಗಿ ೧೨ನೇ ಶತಮಾನದ ಆದಿಭಾಗದಿಂದ ೧೩ನೇ ಶತಮಾನದ ಕೊನೆಯವರೆಗೆ ಹಾವೇರಿ ತಾಲೂಕಿನ ಗುತ್ತವೊಳಲ್ ಅಥವಾ ಗುತ್ತಲದಿಂದ ಆಳಿದ ರಾಜವಂಶ ಗುತ್ತರು. ತಮ್ಮನ್ನು ಮಗಧದ ಗುಪ್ತರ ಉತ್ತರಾಧಿಕಾರಿಗಳೆಂದೂ ಉಜ್ಜಯಿನೀ

ಪುರವರಾಧೀಶ್ವರರೆಂದು ತಮ್ಮನ್ನು ತಾವು ಚಂದ್ರಗುಪ್ತಾನ್ವಯರೆಂದೂ ಕರೆದುಕೊಂಡ ಇವರ ಮೂಲ ಪುರುಷ ಮಾಗುಪ್ತ(ಮಹಾಗುಪ್ತ), ಹಾಗೂ ಆತನ ಮಗ ಗುತ್ತ ಎಂದು ಅವರ ಶಾಸನಗಳು ಹೇಳುತ್ತವೆ. ಬಹುಶಃ ಇವನು ಕಲ್ಯಾಣದ ಒಂದನೇಯ ಸೋಮೇಶ್ವರನ ಕಾಲದಲ್ಲಿ ಅಧಿಕಾರ ಹೊಂದಿದ್ದು ಹಾನಗಲ್ ಕದಂಬರಿಂದ ಕೆಲವೊಂದು ಪ್ರದೇಶಗಳನ್ನು ಗೆದ್ದುಕೊಂಡಿರಬೇಕು, ಅವನ ಮಗ ಮಲ್ಲಿದೇವನೇ ಖಚಿತವಾದ ದಿನಾಂಕವಿರುವ (೧೧೧೫) ಚೌಡದಾನಪುರ ಶಾಸನದಲ್ಲಿ ಉಲ್ಲೇಖಿತವಾದ ಅರಸನಾಗಿದ್ದು ಇವನು ಚಾಲುಕ್ಯರ ೬ನೇ ವಿಕ್ರಮಾದಿತ್ಯನ ಮಾಂಡಲಿಕ(ಬನವಾಸಿ– ೧೨೦೦೦ದ ಅಧಿಕಾರಿ) ಗೋವಿಂದರಸನ ಅಧೀನನಾಗಿದ್ದನೆಂದು ತಿಳಿಯುತ್ತದೆ. ಇವನು ವೀರನಾಗಿದ್ದು, ಅನೇಕ ಯುದ್ಧಗಳನ್ನು ಗೆದ್ದನೆಂದು ಶಾಸನಗಳು ಉಲ್ಲೇಖಿಸುತ್ತವೆ. ಅಲ್ಲದೆ ಇವನ ಅಧಿಕಾರಿಯಾಗಿದ್ದ ಜಟಾಚೋಳನಿಂದ ಚೌಡದಾನಪುರ ಮುಕ್ತೇಶ್ವರ ದೇವಾಲಯ ನಿರ್ಮಾಣವಾಯಿತು(೧೧೨೦). ಮಲ್ಲಿದೇವನ ಸೋದರ ಜೋಯಿದೇವನು ಇದೇ ಕಾಲದಲ್ಲಿ ಬೆಳಹುಗೆ–೭೦(ಬೆಳವಿಗೆ), ಹೊನ್ನತ್ತಿ–೧೨(ರಾಣಿಬೆನ್ನೂರು ಹತ್ತಿರ) ಹಾಗೂ ಬೆಣ್ಣೆಯೂರು–೧೨(ಮೋಟೆಬೆನ್ನೂರು)ಗಳ ಆಡಳಿತ ನೋಡಿಕೊಳ್ಳುತ್ತಿದ್ದನು. ಮಹಾಮಂಡಲೇಶ್ವರ ಎಂದೇ ಶಾಸನಗಳು ಬರೆದಿರುವ ಜೋಯಿದೇವನ ಮಂತ್ರಿಗಳಾದ ದೇಕಣ್ಣ ಮತ್ತು ನಾಕಣ್ಣ ಎಂಬುವವರು ಚಾಮೇಶ್ವರ ದೇವಾಲಯಕ್ಕೆ ಪನ್ನವರ್ತಿ(ಹೊನ್ನತ್ತಿ, ರಾಣಿಬೆನ್ನೂರು ತಾ॥) ಗ್ರಾಮವನ್ನು ದಾನಮಾಡಿದ ಸಂಗತಿಯೂ ಹೊನ್ನತ್ತಿ ಶಾಸನ(೧೧೨೪) ಉಲ್ಲೇಖಿಸುತ್ತದೆ.

**ರಟ್ಟಪಳ್ಳಿ ಕಡಂಬರು:** ತಮ್ಮ ಶಾಸನಗಳಲ್ಲಿ ಇವರು ತಮ್ಮನ್ನು 'ಕಡಂಬ' ಎಂದೇ ಕರೆದುಕೊಂಡಿರುವ ನೂರಂಬಾಡದ ಈ ಮಾಂಡಲಿಕರು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ತಲೆಯೆತ್ತಿ ರಟ್ಟಪಳ್ಳಿ–೭೦(ಹಿರೇಕೆರೂರು ತಾ॥) ಹಾಗೂ ಇಟ್ಟಗೆ–೩೦(ರಾಣಿಬೆನ್ನೂರು ತಾ॥) ಹೀಗೆ ೧೦೦ ಗ್ರಾಮಗಳನ್ನು ಒಳಗೊಂಡ ಪ್ರದೇಶದಲ್ಲಿ ಆಳುತ್ತಿದ್ದರು. ರಟ್ಟಿಹಳ್ಳಿ ಇವರ ಆಡಳಿತ ಕೇಂದ್ರವಾಗಿತ್ತು. ಚಾಳುಕ್ಯ ಸಾಮ್ರಾಟ ೨ನೇ ಜಯಸಿಂಹನ ಯಾವುದೋ ಶತ್ರುವನ್ನು ಸೋಲಿಸಿ ಶತ್ರುವಿನ ಒಂದು ಆನೆಯನ್ನು ವಶಪಡಿಸಿಕೊಂಡು ಅದನ್ನು ಚಕ್ರವರ್ತಿಗೆ ನೀಡಿದ್ದರಿಂದ ಈ ನೂರಂಬಾಡದ ಆಡಳಿತವನ್ನು ಬೀರದೇವನಿಗೆ ನೀಡಲಾಯಿತೆಂದು ಕ್ರಿ. ಶ. ೧೧೭೪ರ ಹಿರೇಕೆರೂರು ತಾಲೂಕು ಕಣವಿಸಿದ್ದಗೇರಿ ಶಾಸನ [ಕಇ. ಸಂ ೬, ನಂ ೭] ದಿಂದ ತಿಳಿಯುತ್ತದೆ. ತಾವು ಶಾಖಾಚರೇಂದ್ರ (ಹನುಮಂತ) ಧ್ವಜರೆಂದೂ ಕಡಂಬೇಶ್ವರನ ಪಾದಪದ್ಮಾರಕರೆಂದೂ ಕರೆದುಕೊಂಡಿದ್ದು ಕಡಂಬೇಶ್ವರ ಮಂದಿರವು ರಟ್ಟಿಹಳ್ಳಿಯಲ್ಲಿಯ ದೇವಾಲಯವಾಗಿದೆ. ಈ ಬೀರದೇವನ ಸೋದರ ೧ನೇ ಕೇತರಸನ ಮಗ ನಾಮರಸ, ಹಾಗೂ ಮೊಮ್ಮಗ ೨ನೇ ಕೇತರಸ ಇವರುಗಳ ಉಲ್ಲೇಖವಿದ್ದು ಈ ೨ನೇ ಕೇತರಸನ ಸತಿ ಅತ್ತಿಮಬ್ಬೆಯೆಂದು ಇವನ ಆರು ಜನ ಪುತ್ರರಲ್ಲಿ ೨ನೇ ಬೀರದೇವನು ಮುಂದೆ ಅರಸನಾದನೆಂದು ಶಾಸನದಿಂದ ತಿಳಿಯುತ್ತದೆ.



ಹೊನ್ನಬೊಮ್ಮಿಸೆಟ್ಟಿ ಎಂಬುವವನು ರಟ್ಟಿಹಳ್ಳಿ ಕಡಂಬೇಶ್ವರ ದೇವಾಲಯದಲ್ಲಿ ಮಲ್ಲೇಶ್ವರ ಮತ್ತು ರಾಜೇಶ್ವರ ಲಿಂಗಗಳನ್ನು ಪ್ರತಿಷ್ಠಾಪಿಸಿ ಅವುಗಳ ಪೂಜಾದಿಗಾಗಿ ಕಡವೂರು (ಹಿರೇಕೆರೂರ ತಾ॥ ಕಡೂರು) ಎಂಬ ಗ್ರಾಮವನ್ನು ಕಾಳಾಮುಖ ಪಂಥದ ರಾಜಗುರು ಮೂಜುಜಾವಿದೇವರಿಗೆ ಒಪ್ಪಿಸಿದ್ದನ್ನು ಶಾಸನ ಹೇಳಿದೆ.

**ಬಂಕಾಪುರದ ಕದಂಬರು:** ಅಲ್ಪಕಾಲ ಬಂಕಾಪುರದಿಂದ ಆಳ್ವಿಕೆಮಾಡಿದ ಕದಂಬ ಶಾಖೆಯೊಂದನ್ನು ಡಾ॥ ಬಾ. ರಾ. ಗೋಪಾಲರು ಗುರುತಿಸಿದ್ದಾರೆ. ಇವರು ಕಲ್ಯಾಣದ ಚಾಲುಕ್ಯರ ಮಾಂಡಲಿಕರಾಗಿದ್ದು, ಸತ್ಯಾಶ್ರಯನ ಸಮಕಾಲೀನರಾದ ಹಾನಗಲ್ ಕದಂಬರ ಚಟ್ಟಯದೇವನ ನಂತರ ಬನವಾಸಿ–೧೨೦೦೦ ಪ್ರಾಂತವನ್ನು ಮಯೂರಶರ್ಮ ಎಂಬಾತನು ಆಳುತ್ತಿದ್ದ ಇವನು ಚಟ್ಟಯದೇವನ ವಂಶಸ್ಥನಲ್ಲ, ಅರಿಕೇಸರಿ ಅಥವಾ ಹರಿಕಂತ ಎಂಬಾತನ ಮಗ. ಈ ಹರಿಕಂತದೇವನ ಎರಡು ಶಾಸನಗಳು ಸಿದ್ದಾಪುರ ತಾ॥ ಕೋಡಕಣಿಯಲ್ಲಿ ದೊರೆತಿವೆ. ಈತನ ಮಗ ಮಯೂರಶರ್ಮನು "ಪಾಂಥಿಪುರಾಧೀಶ್ವರ"(ಹಾನಗಲ್ ಮೂಲ ಸೂಚಿಸುತ್ತದೆ). ಎಂದು ಕರೆದುಕೊಂಡಿದ್ದು ಇವನು ಬಂಕಾಪುರದಿಂದ ಆಳುತ್ತಿದ್ದುದು ಖಚಿತ. ಈತ ಚಕ್ರವರ್ತಿ ೨ನೇ ಜಯಸಿಂಹನ ಸೋದರಿ ಅಕ್ಕಾದೇವಿಯನ್ನು ವರಿಸಿದ್ದ, ಇವನ ಶಾಸನಗಳು ಕ್ರಿ. ಶ. ೧೦೩೫ ರಿಂದ ಕಂಡುಬರುತ್ತಿದ್ದು, ಬನವಾಸಿ–೧೨೦೦೦ ಮತ್ತು ಪಾನುಂಗಲ್– ೫೦೦ ಗಳನ್ನು ಆಳುತ್ತಿದ್ದ. [ಅದೇ, ಪುಟ ೮೪.] ಹೀಗೆ ಚಿಕ್ಕ ಭಾಗವನ್ನು ಬಂಕಾಪುರದಿಂದ ಆಳ್ವಿಕೆ ಮಾಡಿದವರು ಬಂಕಾಪುರದ ಕದಂಬರು.

**ದೇವಗಿರಿಯ ಸೇವಣರು:** ೨ನೇ ಸಿಂಘಣನು ಸೇವುಣರ ವಂಶದಲ್ಲಿ ಗಣ್ಯದೊರೆ. ಇವನು ದಕ್ಷಿಣದಲ್ಲಿ ಗೋವೆಯ ಕದಂಬರನ್ನು ಸೋಲಿಸಿ ಕ್ರಿ. ಶ. ೧೨೧೩ರಲ್ಲಿ ಹೊಯ್ಸಳರಿಂದ ಲಕ್ಕುಂಡಿಯನ್ನು ಕಸಿದುಕೊಂಡ. ಬೆಳಗುತ್ತಿಯ ಸಿಂಧರನ್ನು ತನ್ನ ಮಾಂಡಳಿಕರನ್ನಾಗಿ ಮಾಡಿಕೊಂಡು ತುಂಗಭದ್ರೆಯವರೆಗೂ ರಾಜ್ಯ ವಿಸ್ತರಿಸಿದ, ಆದರೆ ಕ್ರಿ. ಶ. ೧೨೨೩–೧೨೩೫ರ ಮಧ್ಯೆ ಹೊಯ್ಸಳರ ನರಸಿಂಹನ್ನೊಂದಿಗೆ ತುಂಗಭದ್ರೆಯ ದಕ್ಷಿಣದಲ್ಲಿ ಯುದ್ಧಗಳು ನಡೆದವು. ಆದರೆ ಧಾರವಾಡ ಜಿಲ್ಲಾ ಪ್ರದೇಶದಲ್ಲಿ ಸಿಂಘಣನ ಹಿಡಿತಕ್ಕೆ ತೊಂದರೆಯಾಗಲಿಲ್ಲ. ರಟ್ಟಿಹಳ್ಳಿಯ ಒಂದು ಶಾಸನದಂತೆ, ಸೇವುಣರ ಕೊಂಕಣದಲ್ಲಿದ್ದ ಆರಿಯ ಮಲ್ಲಿಸೆಟ್ಟಿ ದ್ವಾರಸಮುದ್ರವನ್ನು ಗೆದ್ದು ಹೊಯ್ಸಳರ ನರಸಿಂಹನಿಗೆ ೧೨ ಆನೆಗಳನ್ನು ಗೆದ್ದುಕೊಟ್ಟನೆಂದು ಉಲ್ಲೇಖವಿದೆ. ಇವನ ಬೆಳ್ವಲ–೩೦೦, ಪುಲಿಗೇರಿ–೩೦೦ ಹಾಗೂ ಬನವಾಸಿ–೧೨೦೦೦ಗಳ ಮಾಂಡಲಿಕನಾಗಿರುವುದು ಕಂಡುಬಂದಿದೆ.

ಸಾತೇನಹಳ್ಳಿಯಲ್ಲಿ(ಹಿರೇಕೆರೂರು ತಾ॥) ಕ್ರಿ.ಶ. ೧೨೧೪ರಲ್ಲಿ ನಾಡಪ್ರಭು ಬೊಮ್ಮಿಸೆಟ್ಟಿಯು ಶಂಕರನಾರಾಯಣ ದೇವಾಲಯ ಕಟ್ಟಿಸಿದನು. ಹಾನಗಲ್ ಕದಂಬ ವಂಶದ ಮಲ್ಲಿದೇವನ ಪತ್ನಿ ಪದ್ಮಲದೇವಿ 'ಹುಲ್ಲುಂಗೂರು' ಇಂದಿನ ಹುಲಗೂರನಲ್ಲಿ (ಶಿಗ್ಗಾಂವ್ ತಾಲೂಕು) ಒಂದು ಅಗ್ರಹಾರವನ್ನು ಸ್ಥಾಪಿಸಿದಳು(೧೨೪೫), ಇದೆ ತಾಲೂಕಿನ ಚಿಕ್ಕಮಲ್ಲೂರಿನಲ್ಲಿ ಧವಳೇಶ್ವರ ದೇವಾಲಯಕ್ಕೆ ಹೊನ್ನಬೊಮ್ಮಿಸೆಟ್ಟಿ ಎಳಬಳ್ಳಿ ಗ್ರಾಮವನ್ನು ದಾನ ಮಾಡಿದನು. ಬಾಳಂಬೀಡ (ಹಿರೇಕೆರೂರು ತಾಲೂಕು) ಶಾಸನದಂತೆ ದಂಡನಾಯಕ ಬಾಚಯ್ಯ ಪಂಡರಂಗೇಶ್ವರನಿಗೆ ದಾನ ನೀಡಿದ ಶಾಸನವಿದೆ. ಹಾವೇರಿಯ ಸಿದ್ಧನಾಥ ದೇವಾಲಯಕ್ಕೆ ನೀಡಿದ ಮೂರು ದಾನಗಳನ್ನು ಉಲ್ಲೇಖಿಸುವ ಶಾಸನಗಳು ಸಿಂಘಣನ ಕಾಲದವು(೧೨೨೯–೩೧). ಸಿಂಗಣನ ಆಡಳಿತ ಜಿಲ್ಲೆಯಲ್ಲಿ ಭದ್ರವಾಗಿ ನೆಲೆಯಾಗಿ ಅನೇಕ ಜನಹಿತ ಕಾರ್ಯಗಳಿಗೆ ಬೆಂಬಲ ನೀಡಿದ ವಿವರ ಈ ಶಾಸನಗಳಿಂದ ತಿಳಿಯುತ್ತದೆ.

**ಹೊಯ್ಸಳರು:** ಹೊಯ್ಸಳರ ೨ನೇ ಬಲ್ಲಾಳ(೧೧೭೩–೧೨೨೦) ಇವನು ಕ್ರಿ. ಶ. ೧೧೭೭ರಲ್ಲಿ ಉಚ್ಚಂಗಿಯನ್ನು ಗೆದ್ದು, ಕ್ರಿ.ಶ. ೧೧೭೮ರಲ್ಲಿ ಹಾನಗಲ್‌ನ್ನು ವಶಪಡಿಸಿಕೊಂಡ. ಹಿರೇಕೆರೂರು ತಾಲೂಕು ಸಾತೇನಹಳ್ಳಿಯಲ್ಲಿ ದೊರೆತ ಹಲವು ಶಾಸನಗಳಂತೆ ಆ ಕಾಲದ ಅದೇ ಊರ ಪರಿಸರದಲ್ಲಿ ಬೊಮ್ಮ ಎಂಬಾತನು ನಾಗರಖಂಡ–೭೦ನ್ನು ಹೊಯ್ಸಳ ಅಧಿಕಾರಿಯಾಗಿ ಆಳುತ್ತಿದ್ದು, ಆಗ ಅಲ್ಲಿ ಹರಿಹರೇಶ್ವರ ದೇವಾಲಯವನ್ನು ಕಟ್ಟಿದ ವಿಚಾರವಿದೆ. (೧೨೦೪). ಸಾತೇನಹಳ್ಳಿ ದೊಡ್ಡ ವ್ಯಾಪಾರ ಕೇಂದ್ರವೆಂದು ಹೇಳಿದೆ, ಕ್ರಿ. ಶ. ೧೨೦೩ರ ಪರಿಸರದಲ್ಲಿ ಹೊಯ್ಸಳರಿಗೂ ಹಾನಗಲ್‌ನ ಕಾಮದೇವ ಕದಂಬ ಸೈನ್ಯಕ್ಕೂ ನಡೆದ ಉಗ್ರ ಕಾಳಗಕ್ಕೆ ಸಂಬಂಧಿಸಿದ ವೀರಗಲ್ಲುಗಳಿವೆ. [ಕಲಬುರ್ಗಿ ಎಂ ಎಂ.; ಕರ್ನಾಟಕ ಶಾಸನ ಸೂಚಿ, ಧಾರವಾಡ ಜಿಲ್ಲೆ, ಪುಟ ೭೨] ಹೀಗೆ ಜಿಲ್ಲೆಯು ತನ್ನದೆ ಆದ ಐತಿಹಾಸಿಕ ಮತ್ತು ಧಾರ್ಮಿಕ ಸಾಂಸ್ಕೃತಿಕ ಚರಿತ್ರೆಯನ್ನೊಳಗೊಂಡಿದೆ.



ಹೀಗೆ ಐತಿಹಾಸಿಕ, ಸಾಂಸ್ಕೃತಿಕ ಹಿನ್ನೆಲೆ ಹೊಂದಿದ ಹಾವೇರಿ ಜಿಲ್ಲೆಯ ಹಾನಗಲ್ಲು ತಾಲೂಕು ರಾಜಕೀಯವಾಗಿ ತನ್ನದೇ ಆದ ಛಾಪು ಮೂಡಿಸಿದೆ. ವಿರಾಟನಗರವೆಂದು ಪ್ರಸಿದ್ಧಿಪಡೆದ ಹಾನಗಲ್ಲು ಪ್ರಾಚೀನ ಕಾಲದಲ್ಲಿ ಪಾನುಂಗಲ್ ೫೦೦ ಕೇಂದ್ರ ಸ್ಥಾನವಾಗಿತ್ತು. ಯಾದವರು ಹೊಯ್ಸಳರ ನಂತರ ವಿಜಯನಗರ ಸಾಮ್ರಾಜ್ಯದ ಅರಸರು ಕ್ರಿ. ಶ. ೧೩೩೬ ರಿಂದ ೧೫೬೫ ವರೆಗೆ ವಿಜಯನಗರ ಪತನಾನಂತರ ಸ್ವಲ್ಪಕಾಲ ಇಲ್ಲಿ ಆಡಳಿತ ಅಸ್ಪಷ್ಟವಾಗಿ ಕಾಣುತ್ತದೆ. ಆದರೆ ಹದಿನೇಳನೆಯ ಶತಮಾನದ ಅಂತ್ಯಕಾಲದಲ್ಲಿ ಅಧಿಕಾರಕ್ಕೆ ಒಳಪಟ್ಟಿದ್ದರಿಂದ ಆಡಳಿತ ವ್ಯವಸ್ಥೆಯಲ್ಲಿ ದೇಸಾಯಿ, ದೇಶಪಾಂಡೆಯವರ ಪ್ರಭಾವ ಹೆಚ್ಚಾಯಿತು. ಈಗಲೂ ಹಾನಗಲ್ಲನಲ್ಲಿ ದೇಶಪಾಂಡೆಯವರ ಸಂಖ್ಯೆ ಹೆಚ್ಚಾಗಿದೆ. ಸಾರ್ವಭೌಮತ್ವಕ್ಕಾಗಿ ಮೈಸೂರಿನ ಟಿಪ್ಪು ಸುಲ್ತಾನ್ ಹಾಗೂ ಪೇಶ್ವೆಗಳ ನಡುವೆ ಕದನ ಪ್ರಾರಂಭವಾಯಿತು. ಕ್ರಿ. ಶ. ೧೭೯೯ ರಲ್ಲಿ ಇಂಗ್ಲಿಷರಿಗೂ ಟಿಪ್ಪು ಸುಲ್ತಾನನಿಗೆ ನಡೆದ ಶ್ರೀರಂಗಪಟ್ಟಣದ ಯುದ್ಧದಲ್ಲಿ ಟಿಪ್ಪು ಸುಲ್ತಾನ್ ಮರಣ ಹೊಂದಿದನು. ಇದೇ ಕಾಲಕ್ಕೆ ಪೇಶ್ವೆಗಳ ಪ್ರಭಾವ ಕಡಿಮೆಯಾಗಿತ್ತು ಈ ಪರಿಸ್ಥಿತಿಯನ್ನು ಬಳಸಿಕೊಂಡ ಇಂಗ್ಲಿಷರು ಮರಾಠರನ್ನು ಸದೆಬಡೆದು ಅವರ ರಾಜ್ಯವನ್ನು ತಮ್ಮ ಕೈವಶಪಡಿಸಿಕೊಂಡರು. ಇದರಿಂದ ಕ್ರಿ.ಶ ೧೮೦೦ರಲ್ಲಿ ಧಾರವಾಡ ಜಿಲ್ಲೆ ಬ್ರಿಟಿಷರ ಪ್ರಭಾವಕ್ಕೆ ಒಳಗಾಯಿತು. ಹಾನಗಲ್ಲು ಧಾರವಾಡ ಜಿಲ್ಲೆಯಲ್ಲಿ ಅತ್ಯಂತ ಬಹುದೊಡ್ಡ ತಾಲೂಕು ಆದ್ದರಿಂದ ಬ್ರಿಟಿಷರ ಆಡಳಿತ ವ್ಯವಸ್ಥೆ ಇಲ್ಲಿಯೂ ಸಹ ಪ್ರಾರಂಭವಾಯಿತು. ಇಂಗ್ಲೀಷರ ವಿರುದ್ಧ ಅಸಹಕಾರ ಮತ್ತು ಹೋರಾಟ ಪ್ರಾರಂಭವಾಗಲು ಕ್ರಿ. ಶ. ೧೮೦೦ ರಲ್ಲಿ ಜಾರಿಯಲ್ಲಿದ್ದ ಇನಾಂಕಮಿಷನ್ ಪಾತ್ರ ಬಹುಮುಖ್ಯವಾಗಿದೆ. ಉತ್ತರ ಕರ್ನಾಟಕದ ಬೆಳಗಾವಿ, ಬಿಜಾಪುರ, ಧಾರವಾಡ ಜಿಲ್ಲೆಗಳಲ್ಲಿ ಪೇಶ್ವೆಗಳ ಆಡಳಿತಕ್ಕೆ ಒಳಪಟ್ಟ ಅವಧಿಯಲ್ಲಿ, ಆಡಳಿತದಲ್ಲಿ ನಿಷ್ಠೆಯಿಂದ ಸೇವೆ ಸಲ್ಲಿಸಿದವರಿಗೆ ದೇಸಾಯಿ, ದೇಶಪಾಂಡೆ,

ದೇಶಮುಖ, ಪಾಟೀಲ, ಕುಲಕರಣಿ ಮೊದಲಾದ ಹುದ್ದೆಗಳನ್ನು ನೀಡಿ ವೇತನಗಳನ್ನು ಹಾಕಿ ಕೊಟ್ಟಿದ್ದರು. ಇವರೆಲ್ಲಾ ಮುಖ್ಯವಾಗಿ ಒಂದಿಲ್ಲೊಂದು ರೀತಿ ತೆರಿಗೆ ವಸೂಲಿ ಮಾಡಿ ಸರ್ಕಾರಕ್ಕೆ ಕೊಡಬೇಕಿತ್ತು. ಅವರಿಗೆ ಆತ್ಮರಕ್ಷಣೆಗೆ ಸಣ್ಣಪ್ರಮಾಣದ ಸೈನ್ಯ ಇಟ್ಟುಕೊಳ್ಳುವ ಅಧಿಕಾರವಿತ್ತಲ್ಲದೆ ಸಂದರ್ಭದಲ್ಲಿ ಅವರಿಗೆ ಒದಗಿಸಬೇಕಿತ್ತು. ಇಂಗ್ಲಿಷರಿಗೆ ಅಧಿಕಾರ ಬಂದ ತಕ್ಷಣ ಕಲೆಕ್ಟರ್, ಮಾಮಲೇದಾರ್, ಮೊದಲಾದ ಸರ್ಕಾರಿ ಅಧಿಕಾರಿಗಳನ್ನು ನೇಮಿಸಿ ನೇರವಾಗಿ ತೆರಿಗೆ ವಸೂಲಿ ಮಾಡಿದರು. ಅನೇಕ ಜಮೀನುದಾರರು ಮತ್ತು ಇನಾಂದಾರರು ತಮ್ಮ ಅಧೀನಕ್ಕೊಳಪಟ್ಟ ಪ್ರದೇಶದಲ್ಲಿ ಎಷ್ಟೋ ಜಮೀನುಗಳನ್ನು ಅನಧಿಕೃತವಾಗಿ ತಮ್ಮ ಹೆಸರಿಗೆ ಬರೆದುಕೊಂಡಿರುವ ಸುದ್ದಿಯು ಕಂಪನಿಯ ಅಧಿಕಾರಿಗಳ ಕಿವಿಗೆ ಬಿತ್ತು. ಈ ಸಮಸ್ಯೆ ಪರಿಹಾರಕ್ಕಾಗಿ ಇನಾಂಕಮಿಷನ್ ಎಂಬ ಆಯೋಗವನ್ನೇ ನೇಮಿಸಿತು.

ಹಾನಗಲ್ ತಾಲೂಕಿನಲ್ಲಿ ೧೯೩೦ ರಲ್ಲಿ ಕಾಂಗ್ರೆಸ್ ಸಂಸ್ಥೆ ಭದ್ರವಾಗಿ ನಿಲ್ಲಲು ಶ್ರೀಮಂತ ನರಸಿಂಗರಾವ್ ದೇಸಾಯಿ ಕಲ್ಲಾಪುರ, ಮೋತಿಲಾಲ ಕುಲಕರ್ಣಿ ಹಾನಗಲ್ಲು, ಮಲ್ಲಪ್ಪ ನಾಯಕ್ ತಟ್ಟಿ, ರಂಗಾಚಾರ್ಯರ ಗದಗಕರ್, ಶಾಮಾಚಾರ್ ಹಾನಗಲ್ಲು ಮೊದಲಾದವರ ನಿರಂತರ ಶ್ರಮವೇ ಕಾರಣ. ಶಾಮಾಚಾರ್ ಶೇಷಾಚಾರ್ಯರು ನಾಗಪುರ ಕಾಲೇಜಿನಲ್ಲಿ ಉನ್ನತ ವ್ಯಾಸಂಗ ಮಾಡುತ್ತಿದ್ದರು. ಗಾಂಧೀಜಿಯವರ ಸ್ವತಂತ್ರ ಸಂಗ್ರಾಮದ ಕರೆಗೆ ಓಗೊಟ್ಟು ವ್ಯಾಸಂಗವನ್ನು ಕೈಬಿಟ್ಟು ನಾಗಪುರದಿಂದ ಹಾನುಗಲ್ಲಿಗೆ ಬಂದರು. ಜನತೆಯಲ್ಲಿ ರಾಷ್ಟ್ರಪ್ರೇಮ, ರಾಷ್ಟ್ರೀಯ ಚಳುವಳಿಗಳನ್ನು ಬಿಂಬಿಸಲು ಹಾನಗಲ್ಲ ನಗರದಲ್ಲಿ ಪಾಂಡುರಂಗ ದೇವಾಲಯದಲ್ಲಿ ರಾಷ್ಟ್ರೀಯ ಶಾಲೆಯನ್ನು ಪ್ರಾರಂಭಿಸಿದರು. ಹಾನಗಲ್ಲನಲ್ಲಿ ಕಾನೂನು ಭಂಗ ಚಳುವಳಿ ನಡೆದಾಗ ಮಲ್ಲಪ್ಪ ಅಕ್ಕಿವಳ್ಳಿ,ಸಿದ್ದಪ್ಪ ಸಿಂಧೂರ, ನಾಗೇಶರಾವ್ ದೇಸಾಯಿ, ಹನುಮಂತರಾವ್ ದೇಶಪಾಂಡೆ, ಶಿವಾನಂದ ದೀಕ್ಷಿತ್, ಕೃಷ್ಣಮೂರ್ತಿ ದೇಶಪಾಂಡೆ, ಸುಬ್ಬಣ್ಣ ದೀಕ್ಷಿತ್, ಬಿಷ್ಟಪ್ಪ ದೇಶಪಾಂಡೆ, ಕೃಷ್ಣಮೂರ್ತಿ ಕಾಗಿನಲ್ಲಿ ಮೊದಲಾದವರು ಕಾರಾಗೃಹಕ್ಕೆ ಹೋದರು.

**ಹಾನಗಲ್ಲ ತಾಲೂಕ ಕನ್ನೇಶ್ವರ ಪರಿಸರದ ಸ್ವಾತಂತ್ರ್ಯ ಹೋರಾಟ:**

೧೯೦೫–೧೦ ನಿಜವಾದ ರಾಷ್ಟ್ರೀಯ ಜಾಗೃತಿ ಮತ್ತು ಸ್ವದೇಶಿ ಆಂದೋಲನದ ಅಲೆಗಳು ದೇಶವ್ಯಾಪಿ ಹರಡಿತು. ತೀಕ್ಷ್ಣ ಮತ್ತು ಏಕರೂಪತೆಯಲ್ಲಿ ಚಳುವಳಿ ಕರ್ನಾಟಕದಲ್ಲಿ ಎಲ್ಲ ಭಾಗಗಳಲ್ಲಿ ಒಂದೇ ಸಮನಾಗಿರಲಿಲ್ಲ. ಮಹಾರಾಷ್ಟ್ರಕ್ಕೆ ಹೊಂದಿಕೊಂಡಿದ್ದ ಮುಂಬಯಿ ಕರ್ನಾಟಕದ ೪ ಜಿಲ್ಲೆಗಳ ಪಾತ್ರ ಇತರ ಭಾಗಗಳಿಗಿಂತ ಹಿರಿದಾಗಿತ್ತು ಕಾರಣ ಪುನಾದ ಲೋಕಮಾನ್ಯ ತಿಲಕರಿಗೆ ಸಮೀಪವಾಗಿದ್ದವು. ಅಲ್ಲಿಯ ಸಭೆಗಳು, ಭಾಷಣಗಳು ಕರ್ನಾಟಕ ಪತ್ರಿಕೆಗಳಲ್ಲಿ ಪ್ರಕಟವಾದ ಲೇಖನಗಳ ಆ ಪ್ರಭಾವ ಬೀರಿದವು. ವಿದೇಶಿ ವಸ್ತುಗಳ ಬಹಿಷ್ಕಾರ, ಸ್ವದೇಶಿ ಸರಕುಗಳ ಬಳಕೆ, ಕೆಲವು ರಾಷ್ಟ್ರೀಯ ಶಾಲೆಗಳ ಸ್ಥಾಪನೆಯಾದವು. ಬೆಳಗಾವಿಯ ಗಂಗಾಧರರಾವ್ ದೇಶಪಾಂಡೆ, ಬಿಜಾಪುರದ ಶ್ರೀನಿವಾಸ ಕೌಜಲಗಿ, ಆಲೂರು ವೆಂಕಟರಾಯ, ಧಾರವಾಡದ ಗದಿಗಯ್ಯ ಹೊನ್ನಾಪುರಮಠ ಹಾವೇರಿಭಾಗದ ವೀರನಗೌಡ ಪಾಟೀಲ ಹೀಗೆ ಮುಂತಾದ ನಾಯಕರ ಉದಯವಾಯಿತು. ಬ್ರಿಟಿಷ್ ವಸ್ತ್ರ, ಸಕ್ಕರೆ, ಸೀಮೆಎಣ್ಣೆ, ಇವು ಬಹಿಷ್ಕಾರವಾದವು. ಬೆಳಗಾವಿ, ಧಾರವಾಡ, ಹುಬ್ಬಳ್ಳಿ, ಹಾವೇರಿ, ಹಾನಗಲ್ಲ ಮುಂತಾದ ಕಡೆ ರಾಷ್ಟ್ರೀಯ ಶಾಲೆಗಳನ್ನು ಸ್ಥಾಪಿಸುವ ಕಾರ್ಯ ಆರಂಭವಾಯಿತು. ೧೯೨೪ರಲ್ಲಿ ಕಾಂಗ್ರೇಸನಲ್ಲಿಯ ಭಿನ್ನಮತ ಮತ್ತು ಗಾಂಧಿ ನೇತೃತ್ವದಲ್ಲಿ ಒಂದುಗೂಡಿ ಬೆಳಗಾಂವದಲ್ಲಿ ಕಾಂಗ್ರೇಸ್ ಅಧಿವೇಶನ ಯಶಸ್ವಿಯಾದದ್ದು.ಅದು ಕರ್ನಾಟಕದ ಧಾರವಾಡ, ಬೆಳಗಾವಿ ಜಿಲ್ಲೆಯಲ್ಲಿ ಸ್ವಾತಂತ್ರದ ಕಿಚ್ಚು ಹೆಚ್ಚಿಸಿತು.

ವೈಯಕ್ತಿಕ ಸತ್ಯಾಗ್ರಹದಲ್ಲಿ ಹಾವೇರಿ ಜಿಲ್ಲೆಯಲ್ಲಿಯ ಚಳುವಳಿಗಾರರಿಗೆ ಪ್ರೇರಣೆಯಾಯಿತು. ಜಿಲ್ಲೆಯಲ್ಲಿ ಟಿ. ಆರ್. ನೇಸ್ವಿ, ವೀರನಗೌಡ ಪಾಟೀಲ್, ಬಸನಗೌಡ ಮುಳಗುಂದಮಠ, ವೀರಭದ್ರಪ್ಪ ಮಾಳಿ ರಾಯಪ್ಪ ನರಗುಂದ, ಪರಮಣ್ಣ ಹೊಸಮನಿ, ಅ. ನಾ. ಕುಂದಾಪುರ ಮುಂತಾದವರು ಹಲವಾರು ಜನರು ಜಿಲ್ಲೆಯ ಚಳುವಳಿಗಾರರಿಗೆ ಹಾಗೂ ಜನಸಾಮಾನ್ಯರಿಗೆ ಪ್ರೇರಣೆಯಾದರು.

**ಧಾರವಾಡ ಜಿಲ್ಲಾ ೪ನೇ ರಾಜಕೀಯ ಪರಿಷತ್:**

೧೯೨೪ರಲ್ಲಿ ಮತ್ತೆ ಹಾವೇರಿ ಜಿಲ್ಲೆಯ ಹಾನಗಲ್ಲದಲ್ಲಿ ನಡೆಯಿತು ಮೋತಿಲಾಲ, ಭೀಮರಾವ್ ಕುಲಕರಣಿಯವರ ಹೊಲದಲ್ಲಿ ಹಾಕಿದ ಧಾರವಾಡ ಜಿಲ್ಲಾ ೪ನೇ ರಾಜಕೀಯ ಪರಿಷತ್ ವೇದಿಕೆಯ ಅಧ್ಯಕ್ಷತೆಯನ್ನು ಶ್ರೀನಿವಾಸ್ ಕೌಜಲಗಿ ವಹಿಸಿದ್ದರು. ಗಂಗಾಧರರಾವ್ ದೇಶಪಾಂಡೆ, ಕೃಷ್ಣರಾವ್, ಪಂಡಿತ್

ತಾರಾನಾಥ, ಸದಾಶಿವ ಕಾರ್ನಾಡ್ ಇನ್ನೂ ಮುಂತಾದವರು ಭಾಗವಹಿಸಿದರೆ, ಹಾನಗಲ್ಲಿನ ನರಸಿಂಹರಾವ್ ದೇಸಾಯಿಯವರ ನಾಯಕತ್ವದಲ್ಲಿ ಮಲ್ಲಪ್ಪ ಅಕ್ಕಿಯವರೇ ಸ್ವಾಗತಾಧ್ಯಕ್ಷರಾಗಿ ಯಶಸ್ವಿಯಾಗಿ ನೆರವೇರಿತು. (ಕಾಮತ್ ಸೂರ್ಯನಾಥ್: ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ಸಂ –೩ ಪುಟ ೪೦೦) ಇದು ಹಾನಗಲ್ ಭಾಗದ ಜನತೆಗೆ ಸ್ವಾತಂತ್ರ್ಯ ಸಂಗ್ರಾಮದ ಜಾಗೃತಿಯನ್ನು ಮೂಡಿಸುವಲ್ಲಿ ಪ್ರಮುಖ ಪಾತ್ರವಹಿಸಿತ್ತು.

೧೯೨೨ ರವರೆಗೆ ಗುತ್ತಲ ಭಾಗದಲ್ಲಿ ಯುವಕರಿಗೆ ರಾಷ್ಟ್ರೀಯ ಕಾರ್ಯಗಳನ್ನು ಆಗಲಿ ಜನಜಾಗೃತಿ ಕಾರ್ಯಗಳನ್ನು ಆಗಲಿ ಯಾವ ರೀತಿ ಮಾಡಬೇಕೆಂದು ಮಾರ್ಗದರ್ಶನ ಇರಲಿಲ್ಲ, ಈ ಅವಧಿಯಲ್ಲಿ ದತ್ತಾತ್ರೇಯ ವೆಂಕಟೇಶ್ ನಾಡಿಗೇರ್ ಹಾನಗಲ್ಲಿಗೆ ಹೋಗಿ ಅಲ್ಲಿಯ ಶಾಲೆಯ ಕಾರ್ಯಗಳನ್ನು ಅವಲೋಕಿಸಿ ಶಾಲೆಯ ಗುರುಗಳಾದ ಅನಂತಭಟ್ ಕುಂದಾಪುರರನ್ನು ಹಾನಗಲ್ಲನಿಂದ ಗುತ್ತಲಕ್ಕೆ ಬರುವ ಮಾರ್ಗದಲ್ಲಿ ಹಾವೇರಿ ಮುಂತಾದ ಹಳ್ಳಿಗಳಲ್ಲಿ ಕಾರ್ಯಕ್ರಮಗಳನ್ನು ಮಾಡುತ್ತಾ ಅದ್ದೂರಿಯಾಗಿ ಅವರನ್ನು ಬರಮಾಡಿಕೊಳ್ಳಲಾಯಿತು. ಅಂದು ವ್ಯಾಯಾಮ ಶಾಲೆಯನ್ನು ಗುತ್ತಲದಲ್ಲಿ ತೆರೆಯಲು ನಿರ್ಧರಿಸಿದರು. ವ್ಯಾಯಾಮ ಶಾಲೆಯಲ್ಲಿ ಲಾಠಿ, ಭಾಲಾ, ಜಂಬಿಯಾ, ಲೇಜಿಮ್, ಮಲ್ಲಕಂಬ ಡಬಲ್‌ಬಾರ್, ಈಸುವುದು ಹೀಗೆ ಮುಂತಾದ ಶಿಕ್ಷಣವಲ್ಲದೇ ಆಸನ ಪ್ರಾಣಾಯಾಮ ಸೂರ್ಯನಮಸ್ಕಾರ, ಝುಂಡಾ ವಂದನ ರಾಷ್ಟ್ರೀಯ ನಾಯಕರ ಚಾರಿತ್ರಿಕ ಕಥನ ಮುಂತಾದ ಕಾರ್ಯಕ್ರಮಗಳು ಪ್ರಾರಂಭವಾಗಿ ರಾಷ್ಟ್ರೀಯ ಜಾಗೃತಿ ಮೂಡಿಸಿದರು.

**ಅಸಹಕಾರ ಚಳುವಳಿ:**

ವಿದ್ಯಾರ್ಥಿಗಳು, ವಕೀಲರು, ಶಾಲಾ–ಕಾಲೇಜುಗಳು, ಕೋರ್ಟು ಕಚೇರಿಗಳನ್ನು ಬಹಿಷ್ಕರಿಸಿ ಚಳುವಳಿಗೆ ಭಾಗವಹಿಸಿದ್ದು, ತಿಲಕ ಸ್ವರಾಜ್ಯ ಸ್ಥಾಪಿಸಿ ೧ ಕೋಟಿ ರೂ. ಸಂಗ್ರಹಿಸುವುದು, ಆಯ್ದ ಪ್ರದೇಶಗಳಲ್ಲಿ ಕರನಿರಾಕರಣೆ, ಸತ್ಯ ಅಹಿಂಸೆಯಿಂದ ಬಹಿಷ್ಕಾರ ಮಾರ್ಗಗಳಿಂದ ಅನುಷ್ಠಾನಕ್ಕೆ ತರುವುದು. ಗಾಂಧೀಜಿ ಕರೆಯಂತೆ ವಿದ್ಯಾರ್ಥಿಗಳು ಶಾಲಾ ಕಾಲೇಜು ತೊರೆದು ವಿದೇಶಿ ವಸ್ತುಗಳನ್ನು ಬಹಿಷ್ಕರಿಸಿದರು. ಕಾರ್ಮಿಕರು ಮುಷ್ಕರ ಹೂಡಿದರು. ಮಹಿಳೆಯರು ಮದ್ಯಪಾನ ಅಂಗಡಿಗಳ ಮುಂದೆ ಪಿಕೆಟಿಂಗ್ ಆಚರಿಸಿದರು. ವಕೀಲರು



ವೃತ್ತಿಯನ್ನು ಬಿಟ್ಟು ಚಳುವಳಿಗಳಿಗೆ ಬೆಂಬಲಿಸಿದರು. ಹಿರೇಕೆರೂರು ಭಾಗಗಳಲ್ಲಿ ಕರನಿರಾಕರಣೆ ಚಳುವಳಿ ಆರಂಭಿಸಿದರು. ಚಳುವಳಿಯಲ್ಲಿ ವಿದ್ಯಾರ್ಥಿಗಳು ಸಮರೋಪಾದಿಯಲ್ಲಿ ಭಾಗವಹಿಸಿದ್ದರು. ಹಾವೇರಿ ಜಿಲ್ಲೆಯಲ್ಲಿ ಅಸಹಕಾರ ಚಳುವಳಿ ದೊಡ್ಡಪ್ರಮಾಣದಲ್ಲಿ ನಡೆಯಿತು. ಮುಖ್ಯವಾಗಿ ವಿದ್ಯಾರ್ಥಿಗಳು, ವಕೀಲರು, ಚಳುವಳಿಕಾರರು ಸೇರಿ ಸ್ವದೇಶಿ ವಸ್ತುಗಳ ಬಳಕೆ ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಪ್ರಚಾರ ಪಡೆಯಿತು. ನಂತರ ಜಿಲ್ಲೆಯಲ್ಲಿ ರಾಷ್ಟ್ರೀಯ ಶಾಲೆಗಳನ್ನು ಪ್ರಾರಂಭಿಸಿದ್ದು. ಅದರಲ್ಲಿಯೂ ಹಾನಗಲ್ಲ ಭಾಗದಲ್ಲಿ ಹೆಣ್ಣು ಮಕ್ಕಳ ಶಾಲೆ ಪ್ರಾರಂಭಿಸಿದ ಚಳುವಳಿಕಾರರು ರಾಜ್ಯ ಮಟ್ಟದ ನಾಯಕರ ಗಮನ ಸೆಳೆಯುವಂತೆ ಮಾಡಿದ ಘಟನೆಗಳನ್ನು ಸ್ಮರಿಸಬಹುದು. ೧೯೨೪ ರ ವೇಳೆಯಲ್ಲಿ ಹಾನಗಲ್ಲಿನ ಆರ್. ವಿ. ಕರಗುದರಿ ಎಂಬುವರು ಗಾಂಧಿ ಸೇವಾ ಸಂಘದ ವತಿಯಿಂದ ಹಳ್ಳಿಹಳ್ಳಿಗಳಲ್ಲಿ ಹಾದಿ ಮಾಡುವ ಕೆಲಸಕ್ಕೆ ನೇಮಕವಾಗಿದ್ದರು ಇವರ ಸಹಾಯಕ್ಕೆ ಜೋಶಿಯವರು ಹೋಗಿದ್ದಾರೆ ಎಂದು ತಿಳಿದುಬರುತ್ತದೆ.

**ಸ್ವದೇಶಿ ಚಳುವಳಿ:**

ಹಾವೇರಿಯಲ್ಲಿ ರಾಷ್ಟ್ರೀಯ ಶಾಲೆ ಆರಂಭವಾಗಿ ಪುರುಷೋತ್ತಮಾ–ಚಾರ್ಯ ರಾಯಚೂರು, ರಾಮಾಚಾರ ಗುಡಿ, ಪಿ. ಜಿ ಗಣಪುಲೆ, ಕೃಷ್ಣರಾವ್ ತೋರಗಲ್, ಶ್ರೀನಿವಾಸ್ ತೋರಗಲ್, ಗುರುರಾವ್ ಚಿಮ್ಮಲಗಿ ಮೊದಲಾದವರು ಕಾರ್ಯನಿರ್ವಹಿಸಿದರು. ೧೯೨೪ರ ವೇಳೆಗೆ ಹಾನಗಲ್ಲನಲ್ಲಿಯ ಆರ್. ವಿ. ಕರಗುದರಿಯವರು ಗಾಂಧಿ ಸೇವಾಸಂಘದ ವತಿಯಿಂದ ಹಾನಗಲ್ ಭಾಗದಲ್ಲಿ ಹಳ್ಳಿಹಳ್ಳಿಗಳಲ್ಲಿ ಖಾದಿ ಮಾರುವ ಕೆಲಸ ಮಾಡುತ್ತಿದ್ದರು. ಮತ್ತು ಮಲ್ಲಾರ ಭಟ್ ಕಾಗಿನಲ್ಲಿಯವರು ಹೆಣ್ಣುಮಕ್ಕಳ ಶಾಲೆಯನ್ನು ರಾಷ್ಟ್ರೀಯ ಸ್ವರೂಪದಲ್ಲಿ ನಡೆಸಿದರು. ನಾಗಪುರದಲ್ಲಿ ಕಲಿಯುತ್ತಿದ್ದ ಶಾಮಾಚಾರ ಶೇಷಾಚಾರ್ಯ ಹಾನಗಲ್ಲ ಇವರು ಕಾಲೇಜಿಗೆ ಶರಣು ಹೊಡೆದು ಹಾನಗಲ್ಲಿನ ರಾಷ್ಟ್ರೀಯ ಶಾಲೆ ನಡೆಸಿದರು. ಆ ಭಾಗದ ದೇಸಾಯಿಯಾಗಿದ್ದ ನರಸಿಂಹರಾವ್ ದೇಸಾಯಿ ಇವರ ಬೆಂಬಲಕ್ಕೆ ನಿಂತರು. ಹಾನಗಲ್ಲಿನ ಮಾಮಲೇದಾರ್ ಅವರು ತಮ್ಮ ಮನೆಯಲ್ಲಿ ಕೆಲಸಕ್ಕಿದ್ದ ಮತ್ತು ಚಳುವಳಿಗೆ ಭಾಗಿಯಾಗಿದ್ದಕ್ಕೆ ಅನಂತ ಭಟ್ಟರಿಗೆ "ನನ್ನ ಮನೆ ಬೇಕೊ ಇಲ್ಲಾ ಚಳುವಳಿ ಬೇಕೋ ಆಯ್ಕೆಮಾಡಿಕೊ" ಎಂದು ಅವರು ಹೇಳಿದಾಗ ಅನಂತಭಟ್ಟರು, ಮಾಮಲೇದಾರರ ಮನೆ ಬಿಟ್ಟು ಪೂರ್ಣಪ್ರಮಾಣದ

ಚಳುವಳಿಕಾರರಾದದ್ದು ಅವರ ರಾಷ್ಟ್ರೀಯತೆಯ ಪ್ರೇಮಕ್ಕೆ ಸಾಕ್ಷಿಯಾಗಿದೆ. ಊರ ಜನ ಅವರಿಗಾಗಿ ಒಂದು ವ್ಯಾಯಾಮಶಾಲೆ ಪ್ರಾರಂಭಿಸಿ ಅದರ ಉಸ್ತುವಾರಿ ವಹಿಸಿಕೊಟ್ಟರು.

**ಸಂಗೂರು ಕರಿಯಪ್ಪ: (ಎರೆಸೀಮಿ)**

ಹಾವೇರಿ ಜಿಲ್ಲೆಯ ಪ್ರಮುಖ ಚಳುವಳಿಗಳಲ್ಲಿ ಹಾನಗಲ್ ಸಮೀಪವಿರುವ ಗಾಂಧೀಜಿಯವರ ಹರಿಜನೋದ್ಧಾರ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಮಾಜದ ಏಕತೆಗೆ ಹೋರಾಡಿದವರು. ಬಡಕುರುಬರ ಕುಟುಂಬದಲ್ಲಿ ಜನಿಸಿದ ಇವರು ಮುಲ್ಕಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳೊಂದಿಗೆ ಉತ್ತೀರ್ಣರಾಗಿಯೂ ಓದನ್ನು ನಿಲ್ಲಿಸಿ ಬಾಲಗಂಗಾಧರ 'ಕೇಸರಿ' ಪತ್ರಿಕೆಗೆ ಓದಿ ದೇಶಭಕ್ತಿಗೆ ಒಳಗಾಗಿ ೧೯೨೬ ರಿಂದಲೇ ಖಾದಿ ಧರಿಸಲು ಆರಂಭಿಸಿದವರು. ನಂತರ ಬಾರ್ಡೋಲಿ ಸತ್ಯಾಗ್ರಹದ ಕಾಲಕ್ಕೆ 'ಯಂಗ್‌ಇಂಡಿಯಾ' ಗಾಂಧೀಜಿಯವರು ಬರೆಯುತ್ತಿದ್ದ ಲೇಖನಗಳಿಂದ ಪ್ರಭಾವಿತರಾಗಿ ಸ್ವದೇಶಿ ಚಳುವಳಿ ಪ್ರಚಾರ ಆರಂಭಿಸಿದರು ಕಾನೂನು ಭಂಗ ಚಳುವಳಿ ಕಾಲಕ್ಕೆ ಅಂಗಡಿಯೊಂದರಲ್ಲಿ ಗುಮಾಸ್ತರಾಗಿ ಕೆಲಸ ಮಾಡುತ್ತಿದ್ದ ಇವರು ಅದನ್ನೂ ತ್ಯಜಿಸಿದರು ಚಳುವಳಿಕಾರರಾದರು.

ಇವರು ೧೯೩೦ರಲ್ಲಿ ಹಿರೇಕೆರೂರು ತಾಲೂಕಿನ ಚಿಕ್ಕೆರೂರಲ್ಲಿ ನಾಲ್ಕಾರು ಹುಡುಗರನ್ನು ಕರೆದುಕೊಂಡು ಸೇಂದಿಗೊಬ್ಬಿ ಒಡೆಯುವ ಕಾರ್ಯದಲ್ಲಿ ನಿರತರಾದಾಗ ಸೇಂದಿ ಅಂಗಡಿಯ ಮಾಲೀಕರು ಹತ್ತರಿಂದ ಹದಿನೈದು ಜನ ಕುಡುಕರನ್ನು ಇವರ ಮೇಲೆ ದಾಳಿ ಮಾಡಿಸಿದರು. ಆ ಕುಡುಕರು ಚೆನ್ನಾಗಿ ಹೊಡೆದಾಗ ಗಾಂಧೀಜಿಯವರ ಉಪದೇಶದ ಮೇಲೆ ನಂಬಿಕೆ ಇಟ್ಟಿರುವ ಅವರು ಕುಡುಕರಿಗೆ ತನ್ನನ್ನು ಹೊಡೆಯಬೇಡಿ ಎನ್ನುವುದಕ್ಕಿಂತ ನೀವು ಕುಡಿದು ನಿಮ್ಮ ಆರೋಗ್ಯ ಹಾಳು ಮಾಡಿಕೊಳ್ಳಬೇಡಿ ಎಂದು ಹೇಳುತ್ತಿದ್ದರು. ಇವರು ಮೂರ್ಛೆ ಹೋದರು ಅಷ್ಟರಲ್ಲಿ ಅವರನ್ನು ಕರೆದುಕೊಂಡು ಬಂದದ್ದರಿಂದ, ಕುಡುಕರು ಅಲ್ಲಿಂದ ಜಾಗ ಖಾಲಿ ಮಾಡಿದರು, ಇದನ್ನು ಗಮನಿಸಿದ ಜನರು ಸಾರಾಯಿ ಅಂಗಡಿಗೆ ಬೆಂಕಿ ಹಚ್ಚಲು ಮುಂದಾದಾಗ ಕರಿಯಪ್ಪನವರು, "ಬೇಡ ನಾವು ಗಾಂಧೀಜಿಯವರ ಅನುಯಾಯಿಗಳು ಹಿಂಸೆ ಮಾಡುವುದು ನಮ್ಮ ಕಾರ್ಯವಲ್ಲ" ಎಂದು ಜನರನ್ನು ಸಮಾಧಾನಗೊಳಿಸಿದರು. ತಾವು ಮಾತ್ರ ಅದೇ ಭಾಗದಲ್ಲಿ ಚಳುವಳಿಯಲ್ಲಿ ಆಸಕ್ತಿಯಿರುವವರನ್ನು ಕರೆದುಕೊಂಡು



ಈಚಲ ಗಿಡಗಳನ್ನು ಕಡಿಯುವ ಕಾರ್ಯ ಮಾಡಿ ೬ ತಿಂಗಳ ಶಿಕ್ಷೆ ಅನುಭವಿಸಿದರು.

ಡಾ. ಎಂ. ಎಸ್ ಹರ್ಡೇಕರವರ ಸಾನಿಧ್ಯದಲ್ಲಿ ಸೇವಾದಳ ಶಿಕ್ಷಣ ಪಡೆದು ೧೯೩೨ ರಲ್ಲಿ ಸಿರ್ಸಿ, ಸಿದ್ದಾಪುರ ಭಾಗಗಳಲ್ಲಿ ಚಳುವಳಿಯಲ್ಲಿ ಭಾಗವಹಿಸಲು ತೆರಳಿದರು. ಅಲ್ಲಿಯ ಹಳ್ಳಿಹಳ್ಳಿಗೆ ಗುಪ್ತವಾಗಿ ಸಂಚರಿಸಿ ಗಾಂಧೀಜಿಯವರ ಸಂದೇಶಗಳನ್ನು ಜನರಿಗೆ ಮುಟ್ಟಿಸಿದರು. ಯಾರಾದರೂ ಲಿಲಾವಿನಲ್ಲಿ ಜಮೀನನ್ನು ಆಗಲಿ ವಸ್ತುಗಳನ್ನಾಗಿ ಕೊಂಡರೆ ಅವರ ಮನೆ ಮುಂದೆ ಧರಣಿ ಮಾಡುವುದಕ್ಕೆ ಹಲವಾರು ಮಹಿಳೆಯರನ್ನು ಸಿದ್ಧ ಮಾಡಿದ್ದರು.

ವಾನರ ಸೇನೆ ಎಂಬುದನ್ನು ಕರಿಯಪ್ಪನವರು ಮಾಡಿದ ಮತ್ತೊಂದು ಗಮನಾರ್ಹ ಕಾರ್ಯ ಸರ್ಕಾರ ಜಪ್ತಿ ಮಾಡಿದ ಸಾಮಾನುಗಳನ್ನು ಹರಾಜಿಗಿಟ್ಟಾಗ ಊರ ಬಾಲಕರೆಲ್ಲ ಒಟ್ಟಾಗಿ ಸತ್ಯಾಗ್ರಹದ ಮೂಲಕ ಸತ್ಯಾಗ್ರಹಿಗಳ ಅಥವಾ ಕರನೀಡದವರ ವಸ್ತುಗಳನ್ನು ಯಾರು ಕೊಳ್ಳಬಾರದೆಂದು ಪಿಕೆಟಿಂಗ್ ನಡೆಸುತ್ತಿದ್ದರು. ಈ ಬಾಲಕರನ್ನು ಪೊಲೀಸರು ಲಾಠಿಯಿಂದ ಬಡಿದರೆ "ಬೋಲೋ ಭಾರತ್ ಮಾತಾಕಿ ಜೈ" ಎಂದು ವಾನರ ಸೇನೆ ಧ್ಯಾನ ಮಾಡುತ್ತಿತ್ತು. ಸ್ವಾರ್ಥಿಗಳಾದ ಪಟೇಲರು, ಶಾನುಭೋಗರು, ಓಲೇಕಾರರೂ ಸಾವಿರಾರು ರೂಗಳ. ಸಾಮಾನುಗಳನ್ನು ಐದು–ಹತ್ತು ರೂಗಳಿಗೆ ಕೊಂಡು ಮನೆ ತುಂಬಿಸಿಕೊಳ್ಳುತ್ತಿದ್ದರು. ಈ ಪ್ರಕರಣಗಳಲ್ಲಿ ಕರಿಯಪ್ಪನವರು ಸರಕಾರದ, ಪೋಲೀಸರ ದೌರ್ಜನ್ಯವನ್ನು ಖಂಡಿಸಿ ಜನತೆಗೆ ತಿಳಿಸಲು ಕರಪತ್ರಗಳನ್ನು ಛಾಪಿಸಿದರೆ. ವಾನರ ಸೇನೆ ಸಾರ್ವಜನಿಕರಿಗೆ ಮುಟ್ಟಿಸುತ್ತಿತ್ತು. ಕರಪತ್ರದಿಂದ ತಮ್ಮ ತೇಜೋವಧೆ ಆಗುತ್ತದೆಂದು ಸಂಬಂಧಪಟ್ಟವರಿಗೆ ತಿಳಿಸಿದಾಗ, ಪೊಲೀಸರು ಆ ಬಾಲಕರನ್ನು ಚೆನ್ನಾಗಿ ಥಳಿಸಿ, ಯಾರು ನಿಮಗೆ ಕರಪತ್ರವನ್ನು ಕೊಟ್ಟ ಕಾಂಗ್ರೆಸ್ಸಿಗರು ಎಂದು ಪೀಡಿಸುತ್ತಿದ್ದರೆ ಆ ಬಾಲಕರು ಕರಿಯಪ್ಪನವರ, ಮಹಿಳೆಯರ ಹೆಸರುಗಳನ್ನು ಹೇಳುತ್ತಿರಲಿಲ್ಲ.

ಕರೆ ಕೊಡದವರ ಮನೆಯ ವಸ್ತುಗಳನ್ನು ಸರಕಾರವು ಲಿಲಾವು ಮಾಡಿ ಬಂದ ಹಣದಿಂದ ತುಂಬಿಕೊಳ್ಳುತ್ತಿತ್ತು. ಆದರೆ ಅಂಥವರ ಮನೆಯ ವಸ್ತುಗಳನ್ನು ಕೊಂಡವರ ಮನೆಯ ಮುಂದೆ ಚಳುವಳಿಗಾರರು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದರು. ಅಂಥವರ ರಕ್ಷಣೆಗೆ ವಾನರಸೇನೆ ಸದಾ ರಕ್ಷಣೆಗಿರುತ್ತಿತ್ತು.

'ಲಿಲಾವಿನಲ್ಲಿ ತಂದ ವಸ್ತು ನಮಗೆ ಬೇಡ' ಎಂದು ಪತಿಗೆ ಹೇಳುವ ವಾತಾವರಣ ನಿರ್ಮಾಣವಾಯಿತು. ಅದರ ಹಿಂದಿನ ಶಕ್ತಿಯಾಗಿ ನಿಂತವರು ಮಾತ್ರ ಸಂಗೂರು ಕರಿಯಪ್ಪ. ಹೀಗೆ ಕರಿಯಪ್ಪ ಸಾಮಾನ್ಯರಿಗೆ ಪ್ರಚೋದನೆ ಮಾಡಿದ ಅಪರಾಧಕ್ಕಾಗಿ ಪೊಲೀಸರಿಂದ ಬಂಧಿಸಲ್ಪಟ್ಟು ೩೦ ತಿಂಗಳು ಶಿಕ್ಷೆಗೆ ಗುರಿಯಾದರು. ವಿಜಾಪುರದಲ್ಲಿರುವ ಜೈಲಿನಲ್ಲಿರುವಾಗಲೇ ಗಾಂಧೀಜಿಯವರು ಹರಿಜನರ ಶ್ರೇಯಸ್ಸಿಗಾಗಿ ಪ್ರವಾಸ ಕೈಗೊಂಡ ವಿಷಯವನ್ನು ತಿಳಿದು ಕರಿಯಪ್ಪನವರು ಜೈಲಿನಲ್ಲಿ ಬಂಗಿ ಕೆಲಸ ಮಾಡಲು ಆರಂಭಿಸಿದರು. ಕರಿಯಪ್ಪನವರು ಹಾವೇರಿ–ಶಿರಸಿ ಭಾಗಗಳಲ್ಲಿ ಚಳುವಳಿ ಮಾಡುತ್ತಿರುವಾಗ ಗಾಂಧೀಜಿಯವರಿಗೆ ಕರೆಬಂತು ಅವರು ಆಶ್ರಮಕ್ಕೆ ಹೋದರು. 'ನೀನು ನಾನು ಬೆಳೆಸಿದ ವೀರೂಳನ್ನು ಮದುವೆಯಾಗಬೇಕು' ಎಂದು ಕೇಳಿದಾಗ ಕರಿಯಪ್ಪನವರು 'ನಿಮ್ಮಿಚ್ಛೆ' ಎಂದರು ಗಾಂಧೀಜಿಯವರು ಕರಿಯಪ್ಪನವರನ್ನು ತಬ್ಬಿಕೊಂಡು ಸಂತೋಷಪಟ್ಟರು. ೧೯೪೦ರಲ್ಲಿ ಹುಬ್ಬಳ್ಳಿಯಲ್ಲಿ ಹರಿಜನ ಬಾಲಿಕಾಶ್ರಮದಲ್ಲಿ ವೀರಮ್ಮಳನ್ನು ಮದುವೆಯಾದರು. ವಿಶೇಷವೆಂದರೆ ವೀರಮ್ಮ ಇದೇ ಆಶ್ರಮದಲ್ಲಿಯೇ ಬೆಳೆದು ಅದೇ ಆಶ್ರಮದಲ್ಲಿ ಮದುವೆಯಾದರು.

ಕರಿಯಪ್ಪನವರ ವಿವಾಹವಾದ ಮೇಲೆ ಗಾಂಧೀಜಿಯವರು ದಂಪತಿಗಳಿಬ್ಬರನ್ನು ತಮ್ಮ ಆಶ್ರಮಕ್ಕೆ ಕರೆಸಿಕೊಂಡರು. ಅಲ್ಲಿ ಅವರು ಕೃಷಿ ಕಾರ್ಯವನ್ನು ಮಾಡುತ್ತಿದ್ದರು. ೧೯೪೨ ಚಳುವಳಿಯ ಪೂರ್ವದಲ್ಲಿ ಗಾಂಧೀಜಿಯವರು ದಂಪತಿಗಳನ್ನು ಕರೆದು "ನೀವು ನಿಮ್ಮ ಭಾಗಕ್ಕೆ ಹೋಗಬೇಕು, ಈ ಕೊನೆಯ ಹೋರಾಟದಲ್ಲಿ ಅಹಿಂಸಾತ್ಮಕವಾಗಿ ಹೋರಾಡಿ ಬಲಿದಾನ ನೀಡಲು ಸಿದ್ಧರಾಗಬೇಕೆಂದು" ಆಜ್ಞಾಪಿಸಿದರು ದಂಪತಿಗಳಿಬ್ಬರು ಹಿರೇಕೆರೂರು ತಾಲೂಕಿನ ತಡಸ ಆಶ್ರಮಕ್ಕೆ ಬಂದರು. ಈ ಅವಧಿಯಲ್ಲಿ ಗಾಂಧೀಜಿಯವರು 'ಕ್ವಿಟ್ ಇಂಡಿಯಾ' ಕಹಳೆ ಮೊಳಗಲು ಇತ್ತ ಆಶ್ರಮ ಪೊಲೀಸರಿಂದ ಮುಚ್ಚಲ್ಪಟ್ಟಿತ್ತು. ಪತ್ನಿ ವೀರಮ್ಮಳನ್ನು ಸೂಡಂಬಿಯಲ್ಲಿ ಬಿಟ್ಟು ಚಳುವಳಿಗೆ ಸಿದ್ಧರಾದರು ಈ ವೇಳೆಗೆ ಮಹಾದೇವಪ್ಪ ಮೈಲಾರ ಎರಡು ಗುಂಪುಗಳಿದ್ದು ಕರಿಯಪ್ಪನವರು ಆ ಅವುಗಳನ್ನು ಸೇರದೆ ತಮ್ಮದೇ ಆದ ತಂಡವನ್ನು ಕಟ್ಟಿದರು.

**ವಿಧ್ವಂಸಕ ಕಾರ್ಯಗಳು:**

ಕೆಲವು ನಾಯಕರೊಂದಿಗೆ ೩೫ ಜನರ ತಂಡ ಹರಿಹರ–ಹರಪನಹಳ್ಳಿ



ಟಪಾಲು ಲೂಟಿ ಮಾಡಲು ನಿರ್ಧರಿಸಿ ಆ ಭಾಗದಲ್ಲಿ ಕಾಯುತ್ತಿರುವ ರೈತರು ಚಕ್ಕಡಿಗಳು ಬಂದ ಪರಿಣಾಮ, ಇವರ ಗುಂಪು ದೊಡ್ಡದಾದ್ದರಿಂದ ಅವಿತುಕೊಳ್ಳಲು ಪಕ್ಕದಲ್ಲಿ ಹೇಳಿಕೊಳ್ಳುವಂಥ ಸ್ಥಳವಿರದ ಕಾರಣ ಅಲ್ಲಿಯೇ ಕಂಡ ತಗ್ಗುಪ್ರದೇಶದಲ್ಲಿ ಎಲ್ಲರೂ ಹಾರಿದಾಗ ವಿಪರೀತ ಮುಳ್ಳುಗಳು ಎಲ್ಲರಿಗೂ ನಟ್ಟು ನೋವುಂಡರು. ನಂತರ ಟಪಾಲು ಲೂಟಿಮಾಡಲಾಯಿತು. ಈ ಪ್ರಕರಣದಲ್ಲಿ ೧೨ ತಾಸು ನೀರಿಲ್ಲದೆ ನೀರಡಿಕೆ ಅನುಭವಿಸಿದ್ದು ದೊಡ್ಡ ಸಾಧನೆ.

ಇವರು ಹಿರೇಕೆರೂರು–ಬ್ಯಾಡಗಿ ಟಪಾಲು ಲೂಟಿ ಪ್ರಕರಣದಲ್ಲಿ ಹಿರೇಅಣಜಿ ೧೨ ಯುವಕರನ್ನು ಕರೆದುಕೊಂಡು ಬಿದರಕಟ್ಟಿ ಹತ್ತಿರ ಟಪಾಲೂ ಲೂಟಿ ಮಾಡಿದರು. ಈ ಪ್ರಕರಣದಲ್ಲಿ ಹಿರೇಕೆರೂರು ನ್ಯಾಯಾಲಯದಿಂದ ಶಿಕ್ಷೆಯಾಯಿತು. ತಿಮ್ಮನಗೌಡ ಮೆಣಸಿನಹಾಳ್ ಮತ್ತು ಇವರ ನೇತೃತ್ವದಲ್ಲಿ ಬ್ಯಾಡಗಿ ರೈಲ್ವೆ ಸ್ಟೇಶನ್ ಸುಟ್ಟದ್ದು. ಇದು ಇವರು ಆಹುತಿ ತೆಗೆದುಕೊಂಡ ಮೊದಲ ಸ್ಟೇಷನ್. ಇಲ್ಲಿ ದೊರೆತ ನೂರಾರು ರೂಪಾಯಿ ನೋಟುಗಳನ್ನು ಸುಡಲಾಯಿತು. ಹಾನಗಲ್ ಬಳಿ ಹೊಂಕಣದ ಡಾಕ್ ಬಂಗ್ಲೆ ಸುಟ್ಟದ್ದು ದೊಡ್ಡ ಸಾಹಸ. ಕಾರಣ ತುಂಬಿ ಹರಿಯುವ ನದಿಯನ್ನು ಮೊದಲು ಅಂಬಿಗ ಬಂಗ್ಲೆಯವರಿಗೆ ದಾಟಿಸಿದ. ಆದರೆ ಬಂಗ್ಲೆಯನ್ನು ಸುಟ್ಟ ನಂತರ ಆ ಕಡೆಯಿಂದ ಕತ್ತಲಲ್ಲಿಯೇ ಈಜಿ ನದಿ ದಾಟಿದ್ದು ವಿಶೇಷವಾಗಿದೆ. ನಂತರ ಹಸಿವಾಗಿದ್ದರಿಂದ ಊಟಕ್ಕೆ ಕುಳಿತಾಗ ಪಕ್ಕದ ಹಳ್ಳಿಯ ಮಿತ್ರರು ಬಂಗ್ಲೆ ಸುಡಲು ಸೀಮೆಎಣ್ಣೆ ಬಾಟ್ಲು ಮತ್ತು ರೊಟ್ಟಿ ಕೂಡಿಸಿಕೊಂಡು ತಂದಿದ್ದರಿಂದ ರೊಟ್ಟಿಯಲ್ಲಿ ಸೀಮೆಎಣ್ಣೆ ಚೆಲ್ಲಿದ್ದು. ಹಸಿವು ಹೆಚ್ಚಾಗಿದ್ದರಿಂದ ಅದೇ ರೊಟ್ಟಿಯನ್ನು ತಿಂದಂತೆ ಈ ಘಟನೆ ಚಳುವಳಿಕಾರರು ಅನುಭವಿಸಿದ ಸಮಸ್ಯೆಗಳನ್ನು ಅರಿವಿಗೆ ತರುತ್ತದೆ.

ರಾಣೆಬೆನ್ನೂರು ತಾಲೂಕು ಸುಣಕಲ್ಲಬಿದರಿಯಲ್ಲಿ ಕುಸಗೂರು ಬಸಮ್ಮನವರ ಹೊಲದಲ್ಲಿ ಬಾಂಬ್ ತಯಾರಿಸುವಾಗ ಇವರ ಕೈಯಲ್ಲಿಯೇ ಬಾಂಬ್ ಸ್ಫೋಟಗೊಂಡು ಇವರ ಒಂದು ಕೈ ಅತೀವ ಗಾಯವಾಗಿ ದಾವಣಗೆರೆ ಆಸ್ಪತ್ರೆಗೆ ಸೇರಿದರು. ಸುಳ್ಳು ಹೆಸರಿನಲ್ಲಿ ದಾಖಲಾಗಿ ಆಪರೇಷನ್ ಆಗಿ ಬಲಗೈ ಕಟ್ಟಾಯಿತು ಮತ್ತು ಅಲ್ಲಿಯೇ ಜನವರಿ ೧೯೪೩ರಲ್ಲಿ ಇವರ ಬಂಧನವಾಯಿತು. ಹೀಗೆ ಇವರು ಜಿಲ್ಲೆಯ ಚಳುವಳಿಗಳಲ್ಲಿ ಯಾವ ತಂಡವನ್ನೂ

ಬಿಡದೆ ಸಮಯಕ್ಕೆ ತಕ್ಕಂತೆ ಆಯಾ ಭಾಗದಲ್ಲಿ ಆಯಾ ನಾಯಕರ ಬೆಂಬಲದೊಂದಿಗೆ ಭೂಗತ ಕಾರ್ಯಗಳನ್ನು ಯಶಸ್ವಿಗೊಳಿಸುವಲ್ಲಿ ಸಫಲರಾದರು. (ಸಂಕಮ್ಮ ಜಿ ಎಸ್ ಹೆಣ್ಣು ಹೆಜ್ಜೆ– ನಕ್ಷತ್ರ ವೀರಮ್ಮ ಕರಿಯಪ್ಪ ಸಂಗೂರ್ ಕೌರವ ಪತ್ರಿಕೆಯ ಲೇಖನ)

## ಸಿಂಧೂರ ಸಿದ್ಧಪ್ಪನವರು:

ಹಾನಗಲ್ಲ ತಾಲೂಕಿನ ವರದಾ ನದಿ ತೀರದ ಬೆಟ್ಟದ ದಡದಲ್ಲಿರುವ ಕೃಷಿ ಕುಟುಂಬಗಳಿಂದ ಕೂಡಿದ ಗ್ರಾಮ ಶೇಷಗಿರಿ, ರಂಗಕಲೆಯಲ್ಲಿ ಹೆಸರು ಮಾಡಿದಂತಹ ಗ್ರಾಮ. ಇಲ್ಲಿಯ ಸಂಗಮ್ಮನವರು ಮತ್ತು ಸುರಳೇಶ್ವರದ ಸಿಂಧೂರು ಕುಟುಂಬದ ಚನ್ನಪ್ಪನವರ ದಂಪತಿಗಳ ಉದರದಲ್ಲಿ ಎರಡನೇ ಮಗನಾಗಿ ನಮ್ಮ ಹೋರಾಟಗಾರ ನಾಯಕ ಸಿದ್ಧಪ್ಪನವರು ೧೯೦೦ ಫೆಬ್ರುವರಿ ೨೮ ರಂದು ಜನಿಸುತ್ತಾರೆ.

ಸಿದ್ಧಪ್ಪನವರು ತಾಯಿಯ ಉದರದಲ್ಲಿ ಇರುವಾಗಲೇ ತಂದೆಯನ್ನು ಕಳೆದುಕೊಂಡರು ಎಂಬುದು ಹೃದಯವಿದ್ರಾವಕ ಸಂಗತಿ, ತಂದೆಯ ಮುಖವನ್ನೇ ನೋಡದ ಈ ಮಗು ಜನಿಸುತ್ತಿದ್ದಂತೆ ತಾಯಿಯನ್ನು ಕಳೆದುಕೊಂಡು ಅನಾಥನಾದ ಮಗುವನ್ನು ಶೇಷಗಿರಿಯಲ್ಲಿದ್ದ ಸಿದ್ಧಪ್ಪನವರ ಸೋದರಮಾವ ಮಲ್ಲೇಶಪ್ಪ ಅಪ್ಪಾಜಿಯವರು ಮಗುವನ್ನು ತಂದೆ ತಾಯಿಗಿಂತ ಹೆಚ್ಚಾಗಿ ಪ್ರೀತಿಯಿಂದ ಕಂಡು ಪೋಷಿಸಿ ಪಾಲಿಸಿ ಒಬ್ಬ ಕಾರಣಿಕ ಪುರುಷನನ್ನಾಗಿ ನಾಡಿಗೆ ಅರ್ಪಿಸಿದ್ದು ಐತಿಹಾಸಿಕವಾಗಿದೆ. ರಾಷ್ಟ್ರದ ಹಿತಕ್ಕಾಗಿ ಬೆಳೆಸಿರುವ ಒಂದು ಮಗುವಾಯಿತು. ಬಾಲ್ಯ ಶಿಕ್ಷಣವನ್ನು ಶೇಷಗಿರಿಯಲ್ಲಿ ಪಡೆದು ಪ್ರೌಢಶಿಕ್ಷಣಕ್ಕಾಗಿ ಬೆಳಗಾವಿಯಲ್ಲಿ ಕೆಎಲ್ಇ ಗಿಲಗಂಜಿ ಪ್ರೌಢಶಾಲೆಗೆ ಕಳಿಸಿಕೊಡುತ್ತಾರೆ. ನಂತರ ಬೆಳಗಾವಿ ಪ್ರದೇಶದ ಸ್ವಾತಂತ್ರ್ಯ ಹೋರಾಟದ ಪ್ರಭಾವಕ್ಕೆ ಒಳಗಾಗಿ ಶಿಕ್ಷಣವನ್ನು ಮೊಟಕುಗೊಳಿಸಿ ತನ್ನ ಊರಾದ ಸುರಳೇಶ್ವರಕ್ಕೆ ಮರಳಿ ಬಂದು ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದರೂ ದೇಶಕ್ಕಾಗಿ ಹೋರಾಟದ ಕಿಚ್ಚು ಹಚ್ಚಿಕೊಂಡು ಬಂದ ಇವರು ಸ್ವಾತಂತ್ರ್ಯದ ಸಲುವಾಗಿ ಆಸ್ತಿಪಾಸ್ತಿಯನ್ನು ಕಳೆದುಕೊಂಡರು. ನುಡಿದಂತೆ ನಡೆದರು ಸಮಾಜಸೇವೆಗಾಗಿ ಮೀಸಲಾಗಿಸಿದರು. ಮಲೆನಾಡ ಸೆರಗಿನ ಅಕ್ಕಿಆಲೂರು ಹಾನಗಲ್ ತಾಲೂಕಿನ ಅತಿದೊಡ್ಡ ಗ್ರಾಮ. ಗ್ರಾಮಕ್ಕೆ ಸಂಘಟನಾತ್ಮಕ ಶಕ್ತಿಗೆ ಗುಣವಂತ ಪೂರ್ವಜರನ್ನು ಹೊಂದಿರುವುದರಿಂದ ಸದಾಕಾಲಕ್ಕೂ ಬಡವರು ದೀನರು ದಲಿತರನ್ನು ಸಮಾನವಾಗಿ ಕಾಣುವ ಸಮಚಿತ್ತದ ಕುಟುಂಬವಾಗಿ ಸಿದ್ಧಪ್ಪನವರ ಕುಟುಂಬ ಗುರುತಿಸಲ್ಪಟ್ಟಿದೆ. ಸಿದ್ಧಪ್ಪನವರ ಧರ್ಮಪತ್ನಿ ಗಂಗಮ್ಮನವರು ಹಾವೇರಿ ತಾಲೂಕಿನ ಗುತ್ತಲದವರು ಇವರು ಸಿದ್ಧಪ್ಪನವರ ದೇಶಭಕ್ತಿ ಸಮಾಜಸೇವೆ ಸಾಮಾಜಿಕ ಸಮಾನತೆಗಳನ್ನು ಗೌರವದಿಂದ ಕಾಣುತ್ತಿದ್ದರು ಅವರ ಹೆಜ್ಜೆಗಳು ಸಿಂಧೂರ ಹೆಜ್ಜೆಗಳಲ್ಲಿ ಗಟ್ಟಿಯಾಗಿ ಮೂಡಿವೆ.



## ಸ್ವಾತಂತ್ರ್ಯದ ಕಿಚ್ಚು:

ವಿದ್ಯಾರ್ಥಿ ಸಿಂಹನಾಗಿದ್ದ ಸಿದ್ಧಪ್ಪ ಬೆಳಗಾವಿ ವಿದ್ಯಾ ಸಂಸ್ಥೆಯಿಂದಲೇ ಸ್ವತಂತ್ರವಾಗಿ ಘರ್ಜಿಸಿ, ವಿದ್ಯಾರ್ಜನೆಗೆ ಶರಣು ಹೊಡೆದು, ಸ್ವಾತಂತ್ರ್ಯ ಹೋರಾಟದ ರಾಷ್ಟ್ರ ನಾಯಕರಾದ ಜವರಲಾಲ ನೆಹರು, ವಲ್ಲಭಭಾಯ್ ಪಟೇಲ್, ಸುಭಾಷ್‌ಚಂದ್ರಬೋಸ್, ಮೈಲಾರ ಮಹಾದೇವಪ್ಪನವರು, ವೀರನಗೌಡ ಪಾಟೀಲ್, ಟಿ. ಆರ್. ನೇಸ್ವಿ, ಗುದ್ಲೆಪ್ಪ ಹಳ್ಳಿಕೇರಿ, ಮುಂತಾದ ಹೋರಾಟಗಾರರ ಮುಖಂಡರ ಮುಂದಾಳತ್ವದ ಮಾರ್ಗದರ್ಶನದಲ್ಲಿ ಸ್ವಾತಂತ್ರ್ಯ ಹೋರಾಟಗಾರರು ಸ್ವಾತಂತ್ರ್ಯ ಹೋರಾಟದ ಸೇರಿದಂತೆ ಹೋರಾಟದ ಕಿಚ್ಚು ಹಚ್ಚಿಕೊಂಡಿತ್ತು. ಹಾನಗಲ್ ತಾಲೂಕು ಕೇಂದ್ರವನ್ನಾಗಿಸಿಕೊಂಡು ಸುತ್ತಮುತ್ತಲ ಸ್ವಾತಂತ್ರ್ಯ ಹೋರಾಟಗಾರರು ಕ್ರಾಂತಿಕಾರರನ್ನು ಬರಮಾಡಿಕೊಂಡು ಪುಣ್ಯ ಕಾರ್ಯಕ್ಕೆ ಬೇಕಾಗುವ ಎಲ್ಲ ಸಹಕಾರ, ಸೌಲಭ್ಯಗಳನ್ನು ದವಸಧಾನ್ಯಗಳನ್ನು ನೀಡಿದರು. ಕಾರ್ಯಕರ್ತರನ್ನು ಹುರಿದುಂಬಿಸಿ ಮುಂಚೂಣಿಯ ನಾಯಕರಾದರು. ಉಪ್ಪಿನ ಸತ್ಯಾಗ್ರಹ, ಪಾನನಿರೋಧ, ಅಸ್ಪೃಶ್ಯತಾ ನಿವಾರಣೆ, ವಿದೇಶಿ ವಸ್ತು ಬಹಿಷ್ಕಾರ, ಕರನಿರಾಕರಣೆ ಚಳುವಳಿ, ಮುಂತಾದ ಕಾರ್ಯಕ್ರಮಗಳ ಮೂಲಕ ಬ್ರಿಟಿಷ್ ಸರ್ಕಾರದ ಕಣ್ಣು ತೆರೆದರು. ಪೊಲೀಸರ ಲಾಠಿ ಏಟುಗಳಿಗೆ ಜಗ್ಗದೆ ಬೇಡಿ–ಬಂಧನ ಬಿಡುಗಡೆಗಳನ್ನು ಲೆಕ್ಕಿಸದೆ, ಬಂದೀಖಾನೆಗಳಿಗೆ ಸೊಪ್ಪು ಹಾಕದೇ ಬ್ರಿಟಿಷರ ಗುಂಡುಗಳಿಗೆ ಅಂಜದೆ ಎದೆಗೊಟ್ಟು ಬ್ರಿಟಿಷ್ ಸರ್ಕಾರದ ವಿರುದ್ಧ ವಿಧ್ವಂಸಕ ಕೆಲಸಗಳಿಗೆ ಅಣಿಯಾದರು. ಸರ್ಕಾರಿ ದಫ್ತರಗಳನ್ನು ಸುಡುವುದು. ಚಾವಡಿ ಸರ್ಕಾರಿ ಬಂಗಲೆ, ಕಚೇರಿಗಳ ಲೂಟಿ ಮಾಡಲು ಆರಂಭಿಸಿದರು. ಸಂಪರ್ಕ ಮಾಧ್ಯಮದ ತಾರಕಂಬಗಳನ್ನು ಕಿತ್ತೊಗೆದರು. ಹಫ್ತೆ ಲೂಟಿ ಮಾಡಿದರು. ಅಂಚೆ ಕಚೇರಿಗಳನ್ನು ಧ್ವಂಸಮಾಡುವುದು, ಅಂಚೆ ಡಬ್ಬಿಗಳನ್ನು ಹೊಡೆಯುವುದು,

ರೈಲ್ವೆಹಳಿಗಳನ್ನು ಕೀಳುವುದು, ಈಚಲಮರ ಕಡಿಯುವುದು. ಅಲ್ಲಲ್ಲಿ ಹುಸಿ ಬಾಂಬುಗಳನ್ನು ಹಾರಿಸಿ ಬ್ರಿಟಿಷ್ ಸರ್ಕಾರಕ್ಕೆ ಭಯ ಹುಟ್ಟಿಸುವುದು ಸೇರಿದಂತೆ ಬ್ರಿಟಿಷ್ ಸರ್ಕಾರದ ವಿರುದ್ಧ ತಮ್ಮ ಸಿಂಹಘರ್ಜನೆಯನ್ನು ನಿರಾತಂಕವಾಗಿ ನಡೆಸಿ ಭಾಗದಲ್ಲಿ ಸ್ವಾತಂತ್ರ್ಯದ ಕೆಚ್ಚು ಹಚ್ಚಿ ರಾಷ್ಟ್ರನಾಯಕರ ಗಮನಸೆಳೆದರು. ಇವರ ಸಂಗಡಿಗರಾಗಿ ಕ್ರಾಂತಿವೀರ ಏರೇಶಿಮಿ ಸಂಗೂರು ಕರಿಯಪ್ಪನವರು, ಕೊಟ್ಟೂರೇಶ್ವರಶಾಸ್ತ್ರಿ ಹಿರೇಮಠ, ನಿಂಗಪ್ಪ ಮಟ್ಟಿಕೋಟಿ, ಸೋಮಸಾಗರ, ಜಿ. ಎಸ್. ಮಾಸನಕಟ್ಟಿ, ಬಜಂತ್ರಿ ಗುಡ್ಡದ, ಮತ್ತಿಹಳ್ಳಿ ಲಿಂಗ ರೆಡ್ಡಿ, ಹಾಳಗಲ್ಲಾಪುರ ಚಿನ್ನಪ್ಪ, ತುಮ್ಮಿನಕಟ್ಟಿ ವಾಸನದ ಗುಡ್ಡನಗೌಡ ಪಾಟೀಲ್, ಸೇರಿದಂತೆ ನೂರಾರು ಕಾರ್ಯಕರ್ತರು ಹೋರಾಟಕ್ಕೆ ಅಣಿಯಾದರು.ಇವರ ಹೋರಾಟದ ಸಂದರ್ಭದಲ್ಲಿ ಮಲ್ಲಪ್ಪನವರು ಅಕ್ಕಿ, ಭಜನಿ ಗುಡ್ಡಪ್ಪ ಕೋಡಿಯಲ್ಲಾಪುರ, ಶಂಬಣ್ಣ ಶೆಟ್ಟರ್, ಡಾ. ವಿ. ಎಸ್. ತಟ್ಟಿ, ಡಾ. ಶಾಮರಾಯ ದೇಸಾಯಿ, ಬಾಬಣ್ಣ ಕಾಕಡೆ ಬಂಧುಗಳು, ಗುರಪ್ಪ ಬಿಸನಹಳ್ಳಿ, ಚನ್ನವೀರಪ್ಪ ಪ್ರಸಾರದ, ಹನುಮಪ್ಪ ಪೂಜಾರ್, ಸಿದ್ಧರಾಮಪ್ಪ ಕಂಬಾಳಿ, ಮೊದಲಾದವರು ಸಿದ್ಧಪ್ಪನ ಜೋಡಿ ಹೋರಾಟದಲ್ಲಿ ಗಟ್ಟಿಯಾಗಿ ನಿರಂತರವಾಗಿ ತೊಡಗಿಸಿಕೊಂಡವರು. ಪಶ್ಚಿಮ ಭಾಗದಲ್ಲಿ ನಾಗೇಶ್‌ರಾವ್ ದೇಸಾಯಿ, ಮಾರ್ತಾಂಡರಾವ್ ಕುಲಕರ್ಣಿ, ಅನಂತಪುರ್ ಕುಂದಾಪುರ, ಸುಬ್ಬಣ್ಣ ಜಾರಕಿಹೊಳಿ, ಹಾಗೂ ಗಡಿಭಾಗಗಳಲ್ಲಿ ದೇಶಪಾಂಡೆ ಆರ್. ಎಸ್. ಪಾಟೀಲ್, ರಾಮನಗೌಡ ಪಾಟೀಲ್, ಕೊಟ್ರಯ್ಯನವರು ಹಿರೇಮಠ್ ಕೊಪ್ಪರಸಿಕೊಪ್ಪ, ಹುಲಗಡ್ಡಿಯ ಬಸಲಿಂಗಯ್ಯ ಹಿರೇಮಠ, ಅನಂತರಾವ್ ನಾಡಿಗೇರ್ ತಿಳವಳ್ಳಿ, ಈ ಭಾಗದ ರಾಮನಗೌಡ ಮುಗಳಿಕಟ್ಟಿ, ಬೊಮ್ಮನಹಳ್ಳಿ ಭಾಗದ ಬಸನಗೌಡ. ಬೆಳಗಾವಿ ಪೇಟೆಯ ಬಸವಣ್ಣಪ್ಪ ಮೆಣಸಿನಕಾಯಿ, ಮಲ್ಲಿಕಾರ್ಜುನ ಶೆಟ್ಟರ್ ಅರಳೇಶ್ವರ ಬಸಪ್ಪ ಕೂಸನೂರು ಮೊದಲಾದವರು ಸಿದ್ಧಪ್ಪನವರ ಸ್ವಾತಂತ್ರ್ಯ ಹೋರಾಟದಲ್ಲಿ ಬ್ರಿಟಿಷರ ವಿರುದ್ಧ ಕೃತಿಗಳಲ್ಲಿ ಪೊಲೀಸರಿಗೆ ಬ್ರಿಟಿಷರ ಆಡಳಿತಕ್ಕೆ ಸೆಡ್ಡು ಹೊಡೆದಿದ್ದರು. ಇವರೆಲ್ಲರ ಹೋರಾಟವನ್ನು ನೋಡಿ ಬ್ರಿಟಿಷ್ ಸರ್ಕಾರ ಧೈರ್ಯಗುಂದಿತ್ತು. ೧೯೪೧ ರಲ್ಲಿ ಬ್ರಿಟಿಷ್ ಅಧಿಕಾರಿಗಳು ಹಾಗೂ ಸ್ವಾತಂತ್ರ್ಯ ಕಾಂಗ್ರೆಸ್ ಕಾರ್ಯಕರ್ತರ ನಡುವೆ ಒಂದಿಷ್ಟು ಸಂಧಾನ ನಡೆದು ಕೆಲವು ಹೋರಾಟಗಾರರು ಪೊಲೀಸರ ಕಚೇರಿಗೆ ಬಂದು ತಾವೇ ಬಂಧನಕ್ಕೆ ಒಳಗಾದರೂ ಆರು ತಿಂಗಳು ಹಿಂಡಲಗಾ



ಜೈಲಿನಲ್ಲಿ ಇದ್ದರು. ಮುಂದೆ ೧೯೪೨ ರಲ್ಲಿ ಚಲೇಜಾವ್ ಚಳುವಳಿಯಲ್ಲಿ ಬಂಧಿತರಾದರು.

ಬ್ರಿಟಿಷ್ ಸರ್ಕಾರದ ದಬ್ಬಾಳಿಕೆಗೆ ಹೊಲಮನೆಯ ಆಸ್ತಿಪಾಸ್ತಿಗಳನ್ನು ಕಳೆದುಕೊಂಡು ಅನಾಥರಿಗೆ ನೆರವಾದರು ಸಹಾಯ ಮಾಡಿದರು ಕರಪತ್ರಗಳನ್ನು ಜನರಿಗೆ ಮುಟ್ಟಿಸಿದರು. ಮಹಿಳೆ–ಮಕ್ಕಳ ಬಗ್ಗೆ ಜಾಗೃತಿ ವಹಿಸಿ ಸ್ವಾತಂತ್ರ್ಯದ ಕಿಚ್ಚನ್ನು ಹಚ್ಚಿದರು. ಗುಪ್ತ ಸ್ವಾತಂತ್ರ್ಯ ಹೋರಾಟದಲ್ಲಿ ಕರಪತ್ರಗಳನ್ನು ಹಂಚುವ ಚಟುವಟಿಕೆಗಳನ್ನು ಗುಡ್ಡನಗೌಡ ಪಾಟೀಲ ವಾಸನ, ಹನುಮಂತಪ್ಪ ರಾಮತೀರ್ಥ ಹೊಸಕೊಪ್ಪ, ಇವರು ಗುಪ್ತ ಸುದ್ದಿಗಳನ್ನು ಹಗಲು–ರಾತ್ರಿಯೆನ್ನದೆ ಹೋರಾಟಗಾರರಿಗೆ ತಲುಪಿಸುತ್ತಿದ್ದರು, ಕಾಲಕಾಲಕ್ಕೆ ನಡೆಯುವ ಚಟುವಟಿಕೆಗಳನ್ನು ಸಿಂಧೂರ ಸಿದ್ಧಪ್ಪನವರಿಗೆ ವರದಿ ಮಾಡುತ್ತಿದ್ದರು.

ಸಿಂಧೂರ ಸಿದ್ಧಪ್ಪನವರು ಬ್ರಿಟಿಷ್ ಆಳ್ವಿಕೆಯಲ್ಲಿ ತಾಲೂಕುಗಳು ಮೆಂಬರ್ ಆಗಿ, ಡಿಸ್ಟ್ರಿಕ್ಟ್ ಬೋರ್ಡ್ ಸದಸ್ಯರಾಗಿ, ಕೆಪಿಸಿಸಿ ಸದಸ್ಯರಾಗಿ, ಜಿಲ್ಲಾ ಸ್ಕೂಲ್ ಬೋರ್ಡ್ ಚೇರ್ಮನ್‌ರಾಗಿ, ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ, ಕೆಸಿಸಿ ಬ್ಯಾಂಕ್ ನಿರ್ದೇಶಕರಾಗಿ, ಮುಂಬೈ ಮತ್ತು ಮೈಸೂರು ಸರ್ಕಾರದಲ್ಲಿ ಶಾಸಕರಾಗಿ, ನಿಸ್ವಾರ್ಥ ಸೇವೆಯನ್ನು ಸಲ್ಲಿಸಿದರು. ನಾಡಿನ ಹಿತವನ್ನೇ ತಮ್ಮ ಹಿತವೆಂದು ನಂಬಿದವರಾಗಿದ್ದರು.

ಸಿದ್ಧಪ್ಪನವರ ಹಿರಿಯ ಮಗಳು ಇಂದುಮತಿ ಎರಡನೇ ಚನ್ನಬಸಪ್ಪ ಇಂದುಮತಿಯನ್ನು ಲಕ್ಷ್ಮೇಶ್ವರದ ಫಕ್ಕಿರಪ್ಪನವರು ಪಿಳ್ಳಿ ಅವರ ಹಿರಿಯ ಪುತ್ರ ಶಂಕ್ರಪ್ಪ ಅವರಿಗೆ ಕೊಟ್ಟು ವಿವಾಹ ಮಾಡಲಾಯಿತು. ಜನಸಾಮಾನ್ಯರ ಕಲ್ಯಾಣಕ್ಕಾಗಿ ಹಗಲಿರುಳು ಶ್ರಮಿಸಿದ ಸಿಂಧೂರು ಸಿದ್ಧಪ್ಪನವರು ಹರಿಜನ ಗಿರಿಜನ ಉದ್ಧಾರಕ್ಕಾಗಿ ಅವಿರತ ಶ್ರಮಿಸಿದರು. ಪಾನನಿರೋಧ ಮೊದಲಾದ ಕಾರ್ಯಗಳನ್ನು ಮಾಡಿದರು. ವೀರಶೈವ–ಲಿಂಗಾಯತ ಸಂಪ್ರದಾಯದವರಾದ ಸಿದ್ಧಪ್ಪನವರು ಹಾಗೂ ಅವರ ಧರ್ಮಪತ್ನಿ ಗಂಗಮ್ಮ ಹರಿಜನರ ಮನೆಗಳ ವಿವಾಹ ಸಮಾರಂಭಗಳಿಗೂ ಹೋಗುತ್ತಿರುವ ಕಾರ್ಯಗಳಲ್ಲಿ ಪಾಲ್ಗೊಂಡು ಸಂಪ್ರದಾಯದಂತೆ ಅರಿಶಿಣ ಹಚ್ಚುವುದಾಗಿ ಎಲ್ಲ ಧಾರ್ಮಿಕ ಸಂಪ್ರದಾಯಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಜಾತಿ ಬೇಧದ ಭಾವನೆಗಳಿಗೆ ನೀಡಿರಲಿಲ್ಲ ಅನ್ನುವುದಕ್ಕೆ

ಸಾಕ್ಷಿಯಾಗಿ ಸಿದ್ಧಪ್ಪನವರು ನನ್ನ ತಂದಿ ಸಮ ಇದ್ದರು. ಅವರು ಹೇಳಿದ ಮಾತು ನಾ ಎಂದು ತಪ್ಪುತ್ತಿರಲಿಲ್ಲ, ಅವರ ಪಟ್ಟಶಿಷ್ಯ ಅದೇ ಅವರು ಬಡಬಗ್ಗರ ಬಗ್ಗೆ ಎಷ್ಟು ಪ್ರೀತಿ ಇದ್ದರೆ ತೊಂದರೆ ಇಲ್ಲ ಅಂತ ಅವರ ಬಗ್ಗೆ ಅಭಿಮಾನದಿಂದ ವಾಸನದ ಗುಡ್ಡನಗೌಡ ಪಾಟೀಲ್ ಅವರು ಹೇಳುತ್ತಾರೆ.

ಸಿದ್ಧಪ್ಪನವರು ಅಕ್ಕಿಆಲೂರಿನ ತಮ್ಮ ಕಾರ್ಯಕ್ಷೇತ್ರದ ಕೇಂದ್ರ ವನ್ನಾಗಿಟ್ಟುಕೊಂಡು ಕುಬಿಹಾಳ ಲಿಂಗಪ್ಪನವರಿಗೆ ಪ್ರೋತ್ಸಾಹ ನೀಡುವುದರೊಂದಿಗೆ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಸ್ಥಾಪಿಸಿದರು. ೧೯೩೪ ರಲ್ಲಿ ಮಹಾತ್ಮ ಗಾಂಧೀಜಿಯವರನ್ನು ಅಕ್ಕಿಆಲೂರಿಗೆ ಮಾಡಿಕೊಂಡು ಸಾರ್ವಜನಿಕರಿಗೆ ಭಿನ್ನವತ್ತಳೆ ಅರ್ಪಿದರು. ಧಾರವಾಡ ಜಿಲ್ಲಾ ಸ್ಕೂಲ್ ಬೋರ್ಡ್ ಚೇರ್ಮನ್ ಇದ್ದಾಗ ಒಂದೇ ವರ್ಷದಲ್ಲಿ ೨೦೦೦ ನೇಮಿಸಿಕೊಂಡರು. ೧೯೫೩ ಮುಂಬೈ ವಿಧಾನಸಭೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿದ್ದರು. ೧೯೪೯ ರಲ್ಲಿ ಮುಂಬೈ ಸರ್ಕಾರದಿಂದ ಚಿಕ್ಕ ನೀರಾವರಿ ಯೋಜನೆ ಆರಂಭಗೊಂಡು ೧೯೫೦ರಲ್ಲಿ ಹಾನಗಲ್ಲ ತಾಲೂಕ ಶಿಕ್ಷಣ ಸಂಸ್ಥೆಯನ್ನು ಆರಂಭಿಸಿದರು. ಅಕ್ಕಿಆಲೂರಿನಲ್ಲಿ ನರಸಿಂಗರಾವ್ ದೇಸಾಯಿ ಪ್ರೌಢಶಾಲೆ ಸ್ಥಾಪಿಸಿದರು. ಜೋಗದ ೨೦೦ ಮೆಗಾವ್ಯಾಟ್ ವಿದ್ಯುತ್ತನ್ನು ಹಾನಗಲ್ ತಾಲೂಕಿಗೆ ತಂದ ಹೆಮ್ಮೆ ಇವರದು. ಹಾನಗಲ್ ಪಶ್ಚಿಮ ಭಾಗದ ಮುಂಡಗೋಡ ತಾಲೂಕಿನ ಮಗನಹಳ್ಳಿ ಕೆರೆಯನ್ನು ಜಲಾಶಯ ಹಾನಗಲ್ ತಾಲೂಕಿನ ಅರ್ಧಭಾಗದ ಕೃಷಿ ಭೂಮಿಗೆ ನೀರನ್ನು ಒದಗಿಸಲು ಸಾಧ್ಯ ಎಂಬ ನರಸಿಂಗರಾವ್ ದೇಸಾಯಿಯವರ ಕನಸನ್ನು ೧೯೬೨ರಲ್ಲಿ ಎಸ್. ಲಿಂಗಪ್ಪ ಮುಖ್ಯಮಂತ್ರಿ ಇದ್ದಾಗ ಧರ್ಮ ಜಲಾಶಯದ ನೀರನ್ನು ರೈತರಿಗೆ ಒದಗಿಸಿದ ಯಶಸ್ಸು ಸಿಂಧೂರ್ ಸಿದ್ಧಪ್ಪನವರದು. ೧೯೪೩ರಲ್ಲಿ ಲೋಕಾರ್ಪಣೆಯಾಯಿತು. ಸುಮಾರು ೧೮೬೦೫ ಎಕರೆ ಕೃಷಿ ಭೂಮಿಗೆ ನೀರನ್ನು ಒದಗಿಸುತ್ತದೆ. ಈ ಉದ್ಘಾಟನೆಯಲ್ಲಿ ಸಿಂಧೂರ ಸಿದ್ಧಪ್ಪನವರು ಫಲಕದಲ್ಲಿ ತಮ್ಮ ಹೆಸರನ್ನು ಹಾಕದಿರುವ ಬಗ್ಗೆ ತಾಕೀತು ಮಾಡಿದ್ದಾರೆ ಎಂದು ತಿಳಿದುಬರುತ್ತದೆ. ಅವರ ಮನೆಯವರೆಲ್ಲ ಡ್ಯಾಮ್ ನೋಡಲು ಗಾಡಿಗೆ ಹೊರಟಾಗ ಸರ್ಕಾರಿ ಜೀಪಿನ ಚಾಲಕನಿಗೆ ಹತ್ತು ರೂಪಾಯಿ ಕೊಟ್ಟು ಎಣ್ಣೆ ಹಾಕಿಕೊಂಡು ಬಾ ಎಂದು ಡ್ರೈವರ್ ಕಳಿಸಿದರಂತೆ ತಮ್ಮ ಸ್ವಂತದ ಯಾವುದೇ ಖರ್ಚನ್ನು ಸರ್ಕಾರದ ಖರ್ಚಿನಲ್ಲಿ ಮಾಡಿದವರಲ್ಲ.



ಇವರ ಬಗ್ಗೆ ಶ್ರೀ ಮಲ್ಲಪ್ಪ ವಿ. ಅವರು ತಿಳಿಸುತ್ತಾ ೧೯೩೬ರಲ್ಲಿ ಹಿರೇಕೆರೂರ ತಾಲೂಕಿನಲ್ಲಿ ಶ್ರೀಯುತ ಕಚೇರಿ ವೀರನಗೌಡ ಪಾಟೀಲರಿಂದ ಕರೆಯಲ್ಪಟ್ಟ ತಾಲೂಕ ಕರಬಂದ ಚಳುವಳಿಯ ಸಹಾಯಕ್ಕಾಗಿ ಇವರು ಹಾನಗಲ್ ತಾಲೂಕು ಹೊಂಕಣ ಸಭೆಯಲ್ಲಿ ಪರಿಣಾಮವಾಗಿ ತಾಲೂಕಿನ ೧೦೦೦೦೦ ರೂಪಾಯಿ ಸೂಟ್ ಆಯಿತು. ೧೯೪೧ರ ಕಾಂಗ್ರೆಸ್ಸಿನ ವೈಯಕ್ತಿಕ ಸತ್ಯಾಗ್ರಹದಲ್ಲಿ ಆರು ತಿಂಗಳು ಶಿಕ್ಷೆಯು ಡಿ. ೫೦ ಸ್ವಾತಂತ್ರ್ಯ ಪ್ರೇಮವು ಆಜನ್ಮಸಿದ್ಧ ಹಕ್ಕು ಎಂಬ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

**ಜೈಲಿನ ಅನುಭವಗಳು:**

ಸಿಂಧೂರ ಸಿದ್ಧಪ್ಪನವರು ಒಂದು ನಿಮಿಷ ಊಟಕ್ಕೆ ತಡವಾಗಿ ಬಂದದ್ದಕ್ಕೆ ಜೈಲಿನ ಅವರು ಊಟವನ್ನೇ ಕೊಡಲಿಲ್ಲ ಆದರೆ ಸಿದ್ಧಪ್ಪನವರು ಇದಕ್ಕೆ ಪ್ರತಿಭಟಿಸಿದಾಗ ಜೈಲರಿಂದ ಹೊಡೆತವನ್ನು ತಿನ್ನಬೇಕಾಯಿತು. ಸಿದ್ಧಪ್ಪನವರ ಕೈಗೆ ಹೆಚ್ಚು ಪೆಟ್ಟಾಗಿ ಊಟಕ್ಕೂ ಬರದಂತಾಯಿತು.ಈ ಸಂದರ್ಭದಲ್ಲಿ ಅವರ ಜೊತೆಗಾರರು ಸಹಿತ ಊಟವನ್ನು ಬಿಟ್ಟು ಪ್ರತಿಭಟಿಸಿದರು ಇದಕ್ಕೆ ಜೈಲಿನ ಎಲ್ಲಾ ಹೋರಾಟಗಾರರು ಬೆಂಬಲಿಸಿದರು. ಎಲ್ಲರೂ ರೊಟ್ಟಿ ತಿನ್ನಲು ನಿರಾಕರಿಸಿದರು. ಎಲ್ಲರೂ ಪ್ರತಿಭಟನೆಗಾರರು ರೊಟ್ಟಿ ಜೊತೆಗೆ ಅನ್ನ ಮೊಸರು ಕೊಡಬೇಕು. ಇಲ್ಲಿ ಎಲ್ಲರೂ ಹರೆಯದರಿದ್ದಾರೆ ಹೊಟ್ಟೆ ತುಂಬಾ ಊಟ ಕೊಡಬೇಕು ಎಂದು ಆಗ್ರಹಿಸಿದರು. ಜೈಲರ್ ಅವರು ಬೇಡಿಕೆ ಈಡೇರಿಸಿದರು. ಜೈಲಿನ ಸಿಬ್ಬಂದಿಯವರಿಗೆ ಒಂದು ತಾಸು ಕುಟುಂಬದವರನ್ನು ಮಾತನಾಡಿಸಲು ಮತ್ತು ಮಾತನಾಡುವಾಗ ಜೈಲಿನ ಸಿಬ್ಬಂದಿ ಇರಬಾರದು ಎಂಬ ವಾದವನ್ನು ತೆಗೆದು ಸತ್ಯಾಗ್ರಹ ಮಾಡಿ ಜಾರಿಗೆ ತಂದರು ಎಂಬುದು ಅವರ ಹೋರಾಟವಾಗಿದೆ. ಬೆಂಗೇರಿ ಖಾದಿ ಗ್ರಾಮೋದ್ಯೋಗದ ಬಗ್ಗೆ ಸಿಂಧೂರ ಸಿದ್ಧಪ್ಪನವರಿಗೆ ಬಹಳಷ್ಟು ಪ್ರೀತಿ. ಅವರಿಗೆ ವಿವಿಧ ಸಭೆ–ಸಮಾರಂಭಗಳಲ್ಲಿ ಹಾಕಿದ ಖಾದಿ ಹಾರಗಳನ್ನು ಶೇಖರಿಸಿಟ್ಟು ಅವುಗಳನ್ನು ತೆಗೆದುಕೊಂಡು ಹೋಗಿ ಆ ನೂಲಿನಿಂದ ಬಟ್ಟೆಗಳನ್ನು ಸಿದ್ಧ ಮಾಡಿಸಿಕೊಂಡು ಬಂದು, ಆ ಬಟ್ಟೆಗಳನ್ನು ತಮ್ಮ ಮನೆಯಲ್ಲಿ ವಿದ್ಯಾಭ್ಯಾಸಕ್ಕಾಗಿ ಇರುವ ವಿದ್ಯಾರ್ಥಿಗಳಿಗೆ ಬಟ್ಟೆ ಹೊಲಿಸಿ ಕೊಡುತ್ತಿದ್ದರು.

ಸಿದ್ಧಪ್ಪನವರು ಆಡಿದಂತೆ ನಡೆದುಕೊಂಡ ಮಹಾಪುರುಷರು, ಸರ್ಕಾರದ

ಕೆಲಸ ದೇವರ ಕೆಲಸ, ಸರ್ಕಾರದ ಸೌಲಭ್ಯಗಳು ಸರ್ಕಾರದ ಪ್ರತಿನಿಧಿಗೆ ಹೊರತು ಅವರ ಕುಟುಂಬಕ್ಕೆ ಅಲ್ಲ ಇದನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬಂದವರು. ಶಾಸಕ ಕೋಣೆಯಲ್ಲಿಯೂ ಸಹಿತ ತಮ್ಮ ಕುಟುಂಬದವರಿಗೆ ಸ್ನಾನಗೃಹ ಇತ್ಯಾದಿ ಬಳಸಲು ಅನುಮತಿ ನೀಡದೆ ಇರುವರಾಗಿದ್ದರು. ಸರ್ಕಾರದ ಫೋನ್ ಬಳಸಲಿಕ್ಕೆ ಸಹಿತ ತಾಕೀತು ಮಾಡಿದ್ದರು ಎಂದು ತಿಳಿದುಬರುತ್ತದೆ. ಸರ್ಕಾರದ ಕೆಲಸ ಮಾಡುವವರು ಮಾತ್ರ ಸರ್ಕಾರದ ವಸ್ತುಗಳನ್ನು ಬಳಸಬೇಕು ಎಂಬುದನ್ನು ಅವರು ಪಾಲಿಸಿಕೊಂಡು ಬಂದಿದ್ದರು. ಸರ್ಕಾರದ ವಾಹನ ಮಗನಿಗೆ ಕನ್ಯಾ ನೋಡುವ, ನಮ್ಮ ಮನೆ ಕೆಲಸಕಲ್ಲವೆಂದು ಎಂಬುದನ್ನು ಅವರು ಖಡಾಖಂಡಿತವಾಗಿ ಹೇಳಿಬಿಟ್ಟರು. ಸಕ್ಕರೆ ಕಾರ್ಖಾನೆ ಆಗೋತನಕ ಸಕ್ಕರೆ ತಿನ್ನಂಗಿಲ್ಲ ಅಂತ ಶಪಥ ಮಾಡಿ ಸಕ್ಕರೆ ತಿಂದಿರಲಿಲ್ಲ ಎಂಬುದು ತಿಳಿದುಬರುತ್ತದೆ. ಹೀಗೆ ತಮ್ಮ ವ್ಯಕ್ತಿತ್ವದಲ್ಲಿ ಶಿಸ್ತು, ಮತ್ತು ಸಂಯಮವನ್ನು ರೂಢಿಸಿಕೊಂಡು ಕೊನೆಯ ಉಸಿರಿರುವವರೆಗೂ ಸಮಾಜಸೇವೆಯೇ ಪ್ರಥಮ ಗುರಿಯಾಗಿಸಿಕೊಂಡಿದ್ದರು. ರಾಷ್ಟ್ರೀಯ ಹೋರಾಟಗಳಿಗೆ ಓಗೊಟ್ಟು ತಮ್ಮ ಸರ್ವಸ್ವವನ್ನು ತ್ಯಾಗ ಮಾಡಿ ಉದಾರ ಜೀವನ ನಡೆಸಿ ಸಿದ್ಧಹಸ್ತರಾದರು.

## ಎಣ್ಣೆಕೊಪ್ಪ ಮಲ್ಲಿಕಾರ್ಜುನ ಗೌಡ:

ಎಣ್ಣೆಕೊಪ್ಪ ಮಲ್ಲಿಕಾರ್ಜುನಗೌಡ ಜಿಲ್ಲೆಯ ಚಳವಳಿಗಾರರಿಗೆ ಸಹಾಯ ಸಹಕಾರ ನೀಡಿದ ಗಡಿ ಜಿಲ್ಲೆಯ ತಾಲೂಕಿನ ಮತ್ತೊಬ್ಬ ಶಿವಮೊಗ್ಗ ಜಿಲ್ಲೆಯ ಆನವಟ್ಟಿ ಹೋಬಳಿಯ ಎಣ್ಣೆಕೊಪ್ಪ ಮಲ್ಲಿಕಾರ್ಜುನ ಗೌಡರು ಇವರು ದೊಡ್ಡ ಜಮೀನ್ದಾರರು ಹಾಗೂ ಪೋಲೀಸ್ ಪಾಟೀಲ್ ಇವರು ಹಾವೇರಿ ಜಿಲ್ಲೆಯ ಪ್ರಮುಖ ಚಳುವಳಿ ನಾಯಕರಾದ ವೀರನಗೌಡ ಪಾಟೀಲ್, ಶಿವಣ್ಣ ನೇಶ್ವಿ, ಕೆ.ಎಸ್. ಪಾಟೀಲ್, ಹಳ್ಳಿಕೇರಿ ಗುದ್ಲೆಪ್ಪ, ಮಹಾದೇವಪ್ಪ ಮೈಲಾರ, ವೀರಭದ್ರಪ್ಪ ನ್ಯಾಮತಿ, ದೇವೇಂದ್ರಪ್ಪ ವಿಭೂತಿ, ಮೆಣಸಿನಹಾಳ ತಿಮ್ಮನಗೌಡರು, ಸಂಗೂರು ಕರಿಯಪ್ಪ, ವೆಂಕಟೇಶ್ ಮಾಗಡಿ, ದಂದೂರ್ ವಕೀಲರು, ಹಾಲಪ್ಪ ತೊಗರ್ಸಿ, ಮೊದಲಾದವರಿಗೆ ಸಹಾಯ ಮಾಡಿದವರು. ಹಾವೇರಿ ಜಿಲ್ಲೆಯ ಚಳುವಳಿ ನಾಯಕರು ವಿಧ್ವಂಸಕ ಕಾರ್ಯಗಳಿಂದಾಗಿ ಪೊಲೀಸರ ಕಾಟ ಹೆಚ್ಚಾದಾಗ ತಕ್ಷಣ ನೆನಪಾಗುವ ಸ್ಥಳ ವ್ಯಕ್ತಿ ಎಣ್ಣೆಕೊಪ್ಪದ ಮಲ್ಲಿಕಾರ್ಜುನ ಗೌಡರು.

೧೯೪೨ರ ಚಲೋ ಚಳುವಳಿ ಕಾಲಕ್ಕೆ ಜಿಲ್ಲೆಯ ನಾಯಕರ ಬಂಧನವಾಗುವಂತಹ ಸಮಯ ಎಲ್ಲ ನಾಯಕರಿಗೆ ನೆನಪಾದದ್ದು ಮಲ್ಲಿಕಾರ್ಜುನ ಗೌಡರ ಮನೆ ಅಲ್ಲಿಂದಲೇ ಅನೇಕ ಯೋಜನೆಗಳನ್ನು ರೂಪಿಸಿದರು. ಜಿಲ್ಲೆಯ ನಾಯಕರಾದ ಮಹದೇವ ಮೈಲಾರ, ಸಂಗೂರ ಕರಿಯಪ್ಪ, ಮೆಣಸಿನಹಾಳ ತಿಮ್ಮನಗೌಡರು, ವೀರನಗೌಡ ನೇಶ್ವಿ ಇವರ ನಾಲ್ಕು ತಂಡಗಳಿಗೆ ಸಹಾಯ–ಸಹಕಾರ ಮತ್ತು ಪ್ರಾಂತೀಯ ಮತ್ತು ಎಐಸಿಸಿಯಿಂದ ಬಂದ ಸಂದೇಶಗಳನ್ನು ಮುಟ್ಟಿಸುವ ಕಾರ್ಯ. ಬ್ಯಾಡಗಿ ರೈಲ್ವೆ ಸ್ಟೇಷನ್ ಸುಡುವ ಕಾರ್ಯವನ್ನು ಕರಿಯಪ್ಪ ಸಂಗೂರ, ತಿಮ್ಮನಗೌಡ ಮೆಣಸಿನಹಾಳ, ವೀರಭದ್ರಪ್ಪ ನ್ಯಾಮತಿ ಅವರಿಗೆ ವಹಿಸಲಾಯಿತು. ಅಮರಗೋಳ ದುಂದೂರು ಮತ್ತು ಕುಸಗರ ರೈಲ್ವೆ ಸ್ಟೇಷನ್ ಸುಡುವ ಕಾರ್ಯಕ್ಕೆ ದೊಂದುರು ವಕೀಲರು ವೆಂಕಟೇಶ್ ಮಾಗಡಿ ಅವರಿಗೆ ವಹಿಸಿಕೊಡಲಾಯಿತು. ಇಲ್ಲಿಯ ಮಾಹಿತಿ ಎಲ್ಲ ವಿವರ ಪೊಲೀಸರಿಗೆ ತಿಳಿದಿತ್ತು ಗುಪ್ತಚರ ಪೊಲೀಸ್ ಆಯ್ಕೆ ಧಾರವಾಡ ಆಫೀಸ್ ನಂಬರ್ ೫ ಐ.ಎನ್.ಸ ಪುಟ ೭೭ ೭೯ ೮೩ ರಿಂದ ಸಂಗ್ರಹಿಸಿದ್ದು ಜಿಲ್ಲೆಯ ಕಾರ್ಯರೂಪಕ್ಕೆ ತಂದು ೧೯೪೨ರ ಚಳುವಳಿ ಯಶಸ್ವಿ ಯಶಸ್ವಿಯಾಗುವಂತೆ ಮಾಡಿದರು (ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು–ಸೂರ್ಯನಾಥ್ ಕಾಮತ್ ಕ. ಸಂ. ನಿರ್ದೇಶನಾಲಯ ಬೆಂಗಳೂರು)

## ಡಾ. ವಸಂತ ಶಂಕರ್ ನಾಯ್ಕ ತಟ್ಟಿ ಸಾ: ಅಕ್ಕಿಆಲೂರ ತಾ: ಹಾನಗಲ್ಲ

೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ತಮ್ಮ ಸೋದರಮಾವ ವೈದ್ಯರಾದ ಡಾಕ್ಟರ್ ರಾಮಚಂದ್ರ ಜಂತಲಿ ಅವರ ಪ್ರಭಾವದಿಂದ ಅಧಿಕಾರಿಗಳಾಗಿ ೧೯೬೨ ರಲ್ಲಿ ಅಕ್ಕಿಆಲೂರಿನಲ್ಲಿ ಮಾಡುವ ಕಾರ್ಯದಲ್ಲಿ ಭಾಗಿಯಾಗಿ ಬಂಧನಕ್ಕೊಳಗಾದರು ಇವರಿಗೆ ಒಂದು ವರ್ಷಜೈಲು ಶಿಕ್ಷೆ ೨೦೦ರೂ ದಂಡ ವಿಧಿಸಲಾಯಿತು (ಕರ್ನಾಟಕ ಸ್ವಾತಂತ್ರ್ಯ ಹೋರಾಟಗಾರರು ಕ್ವಿಟ್ ಇಂಡಿಯಾ – ಸುವರ್ಣಮಹೋತ್ಸವ ಸ್ಮರಣಸಂಚಿಕೆ ಬೆಂಗಳೂರು ೧೯೯೩.)

## ಸುಬ್ಬಣ್ಣಚಾರ್ ಲಕ್ಷ್ಮಣಚಾರ್ ಅಕ್ಕಿವಳ್ಳಿ ಸಾ: ಹಾನಗಲ್ಲ

ಸುಬ್ಬಣ್ಣಚಾರ್ ಲಕ್ಷ್ಮಣಚಾರ್ ಅಕ್ಕಿವಳ್ಳಿ ಹಾನಗಲ್ ಅವರ ತಾಯಿ ಖಾದಿ ಬಟ್ಟೆಯನ್ನು ನೀನು ಸದಾ ತೊಡಬೇಕೆಂದು ಹೇಳಿದಾಗ ಇಂದಿನವರೆಗೂ ೮೭ನೇ ವಯಸ್ಸಿನವರೆಗೂ ಖಾದಿ ಅಂಗಿಯನ್ನು ಹಾಕಿಕೊಂಡಿರುವ ಅಭಿಮಾನದ ಮಾತು ಆಡುವರು. ಸ್ವಾತಂತ್ರ್ಯ ಚಳುವಳಿ ಕುರಿತು ಧ್ವಜ ಹಾರಿಸುವುದು,

ಪ್ರಭಾತಭೇರಿ ಮಾಡುವುದು, ಚಳುವಳಿ ಬಗ್ಗೆ ಚಳುವಳಿಗಾರರ ಬಗ್ಗೆ ಲಾವಣಿ ಹಾಡುತ್ತಿದ್ದ ಪಕೀರಪ್ಪನೊಂದಿಗೆ ಸೇರಿ ಲಾವಣಿ ಹಾಡುವುದು. ಈ ರೀತಿ ಕಾರ್ಯಗಳನ್ನು ಮಾಡುತ್ತಿದ್ದರಿಂದ ಇವರನ್ನು ನಾಲ್ಕು ಸಾರಿ ಪೊಲೀಸ್ ಸ್ಟೇಷನ್‌ನಲ್ಲಿ ಹೆಸರು ದಾಖಲಾಗಿದ್ದರೂ ಇವರನ್ನು ಬಂಧಿಸಲಿಲ್ಲ ಕಾರಣ ಹವಾಲ್ದಾರ್ ಮನೆ ಇವರ ಮನೆಯ ಪಕ್ಕದಲ್ಲಿದ್ದರಿಂದ ಇವರ ತಂದೆಯೊಡನೆ ಸ್ನೇಹವಿರುವುದರಿಂದ, ಆದರೆ ಸ್ಥಳೀಯ ಪೊಲೀಸರ ಆದೇಶದಿಂದ ಇವರ ಬಂಧನವಾಗಿ ಹಾನಗಲ್ಲ ನ್ಯಾಯಾಲಯದಲ್ಲಿ ಒಂಭತ್ತುವರೆ ತಿಂಗಳು ಶಿಕ್ಷೆಯಾಗಿ ಹಿಂಡಲಗಾ ಜೇಲಿನಲ್ಲಿ ಜೈಲುವಾಸ ಅನುಭವಿಸಿದರು.

### ಗುಡ್ಡನಗೌಡ ನೀಲನಗೌಡ ಪಾಟೀಲ್ (ಹರಿಜನ) ಸಾ: ಅಕ್ಕಿ ಆಲೂರು ತಾಲೂಕು ಹಾನಗಲ್

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗಾಂಧೀಜಿಯವರು ಹೇಳಿದಂತೆ "ಅಸ್ಪೃಶ್ಯತೆ ತೊಲಗುವವರೆಗೂ ಬ್ರಿಟಿಷ್‌ರಿಂದ ಸ್ವಾತಂತ್ರ್ಯ ಕೇಳಲು ನಮಗೆ ಅರ್ಹತೆ ಇಲ್ಲ" ಎಂಬ ಮಾತಿನಂತೆ, ಗಾಂಧೀಜಿಯ ಹರಿಜನೋದ್ಧಾರ ಕಾರ್ಯಕ್ರಮವನ್ನು ಹಾವೇರಿ ಜಿಲ್ಲೆಗೆ ಸಂಬಂಧಿಸಿದಂತೆ ಗಮನಿಸಿದರೆ ತಾಲೂಕಿನ ಸಚಿವ ಗ್ರಾಮದ ವೀರನಗೌಡ ಪಾಟೀಲ್ ನಾಗಮ್ಮ, ಪಾಟೀಲ್ ಹಳ್ಳಿಕೇರಿ ಗುದ್ಲೆಪ್ಪ ಕರಿಯಪ್ಪ ಮುಂತಾದವರ ಸತತ ಪ್ರಯತ್ನದ ಫಲವಾಗಿ ಹರಿಜನೋದ್ಧಾರ ಕಾರ್ಯ ಭರದಿಂದ ಸಾಗಿತು. ಗಾಂಧೀಜಿಯವರ ಹರಿಜನೋದ್ಧಾರ ಕಾರ್ಯದಲ್ಲಿ ಗಾಂಧೀಜಿ ಜಿಲ್ಲೆಯ ಮೇಲ್ವರ್ಗದವರೇ ಸರ್ಕಾರದಿಂದ ತಮ್ಮ ಸಮುದಾಯದ ಜನರ ಸಮಸ್ಯೆಗಳನ್ನು ಸರಿಪಡಿಸಿಕೊಳ್ಳುವಂತೆ ಅವರು ಆ ಸಮುದಾಯದಲ್ಲಿ ಯಾರಾದರೂ ಇದ್ದಿರಬಹುದು ಎಂದು ಗಮನಿಸಿದರೆ ಹಾವೇರಿ ಜಿಲ್ಲೆಗೆ ಸಂಬಂಧಿಸಿದಂತೆ ಅಕ್ಕಿಆಲೂರಿನ ಗುಡ್ಡನಗೌಡ ಪಾಟೀಲ್(ಹರಿಜನ) ಪ್ರಮುಖವಾಗಿ ಕಂಡು ಬರುತ್ತಾರೆ ಸ್ವಾತಂತ್ರ ಹೋರಾಟಗಾರರು ಒಂದಿಗೆ ತಮ್ಮ ಸಮುದಾಯದ ಏಳಿಗೆಗಾಗಿ ಸತತವಾಗಿ ವೀರಯೋಧರಂತೆ ಹೋರಾಡಿದರು ಅವರಲ್ಲಿ ಹರಿಜನರ ಅಭಿವೃದ್ಧಿಗೆ ಹೋರಾಟ ನಡೆಸಿದ್ದಾರೆ.

ಹಾವೇರಿ ಜಿಲ್ಲೆ ಹಾನಗಲ್ಲ ತಾಲೂಕಿನ ಕನ್ನೇಶ್ವರದ ಸಮೀಪದ ವಾಸನದಲ್ಲಿ ಸಾಮಾನ್ಯ ಜನರ ಬಡಕುಟುಂಬದಲ್ಲಿ ಹುಟ್ಟಿದ ಗುಡ್ಡನಗೌಡ ಕುರಿ ದನ ಕಾಯುತ್ತಿದ್ದನು. ಯುವಕ ಧೈರ್ಯವಂತನಾಗಿದ್ದ ಗಟ್ಟಿಮುಟ್ಟು ದೇಹವಿತ್ತು ಚೆನ್ನಾಗಿ ಮಾತನಾಡುತ್ತಿದ್ದ. ಇವರ ಸ್ನೇಹಿತ ಕೊಟ್ರೇಶಶಾಸ್ತ್ರಿ ಹಿರೇಮಠ್ ಇವರಿಗೆ ಸಿಂಧೂರು ಸಿದ್ದಪ್ಪನವರನ ಭೇಟಿ ಮಾಡಿಸಿದ ಸಿಂಧೂರ ಸಿದ್ಧಪ್ಪನವರು ವಾಸನಕ್ಕೆ ಬಂದಾಗ ನೀನು ಮಾತುಗಾರ ಬುದ್ಧಿವಂತ ನಮ್ಮೊಂದಿಗೆ ಯಾಕೆ ಬರಬಾರದು? ನಿಮ್ಮ ಸಮುದಾಯದಲ್ಲಿ ಯಾರು ಇಲ್ಲ ಎಂದು ಹೇಳಿದ್ದು ಚಳುವಳಿಗೆ ಧುಮುಕಲು ಕಾರಣವಾಯಿತು.

### ಗುಡ್ಡನ ಗೌಡ ಸ್ವಾತಂತ್ರ್ಯ ಚಳುವಳಿಗೆ ಧುಮುಕಿದ ಮೇಲೆ ಮಾಡಿದ ಪ್ರಮುಖ ಕಾರ್ಯಗಳೆಂದರೆ:

ಕುಮ್ಮೂರು ಚೌಡಿ ಸುಟ್ಟಿದ್ದು ಹೊಂಕಣದ ನದಿಯನ್ನು ರಾತ್ರಿಯಲ್ಲಿ ಈಜಿ ಹೊಂಕಣದ ಬಂಗ್ಲೆಗೆ ಬೆಂಕಿ ಹಚ್ಚಿದ್ದು. ಹಾವೇರಿಯ ಶಾನುಭೋಗರು ಬಿಟ್ಟುಹೋಗಿದ್ದ ದಾಖಲೆಗಳನ್ನು ಲೂಟಿ ಮಾಡಿದ್ದು.

ಸುಣಕಲ್ಲ ಬಿದರಿ ಕುಸುಗೂರು ಬಸಮ್ಮನವರ ಹೊಲದಲ್ಲಿ ಬಾಂಬು ತಯಾರಿಸಿ ಅವು ಒಣಗಿದ ಮೇಲೆ ಚೀಲ ತುಂಬುವಾಗ ಬಾಂಬ್ ಸ್ಫೋಟಗೊಂಡು ಕರಿಯಪ್ಪನ ಕೈ ಗಾಯವಾಗಿದ್ದು ಆಸ್ಪತ್ರೆಗೆ ಹೋದಾಗ ವೈದ್ಯರಿಗೆ ಗುರುತು ಹತ್ತದಂತೆ ಕಂದಲಿಯಿಂದ ಕೈ ಕತ್ತರಿಸಿಕೊಂಡದ್ದಕ್ಕೆ ಸಾಕ್ಷಿಯಾದವನು ಗುಡ್ಡನಗೌಡ.

ಸಿಂಧೂರ ಸಿದ್ಧಪ್ಪ ಗಾಂಧೀಜಿಯನ್ನು ಆಲೂರಿಗೆ ಕರೆಸಲು ನಿರ್ಧರಿಸಿದಾಗ ಎಲ್ಲರೂ ಸಹಕಾರ ಕೊಡದ ಕಾರಣ, ಬೊಮ್ಮನಹಳ್ಳಿ ಬಸನಗೌಡರು ಬೊಮ್ಮನಹಳ್ಳಿ ಇಂದ ಜನರನ್ನು ಕರೆಸಿ ಆ ಊರ ಕನ್ನಡ ಶಾಲೆಯ ಮೈದಾನದಲ್ಲಿ ಅವರಿಂದ ಚಪ್ಪರ ಹಾಕಿಸಿದರು. ಅಕ್ಕಿಆಲೂರುಗೆ ಬಂದ ತಕ್ಷಣ ಕೇಳಿದ್ದು ಹರಿಜನರ ಕೇರಿಯನ್ನು ಕೇಳಿದರು. ಹರಿಜನರ ಕೇರಿಗೂ ಬಂದು ಕಸ ಗುಡಿಸಲು ಆರಂಭಿಸಿದಾಗ ಇವರು ಬೇಡವೆಂದು ಕೇಳಿಕೊಂಡರು ನಂತರ ಪ್ರಮುಖರನ್ನು ಸೇರಿಸಿ ಕ್ವಾಟಿ ಹೊಂಡದಲ್ಲಿ ಹರಿಜನರಿಂದ ನೀರು ತುಂಬಿಸಲು ಹೇಳಿದ್ದನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಗಾಂಧೀಜಿಯವರ ಕಾರ್ಯದಿಂದ ತಮಗೆ ಮತ್ತಷ್ಟು ಬಲ ಬಂದಾಯಿತು ಎಂದು ಆ ದಿನವನ್ನು ಸ್ಮರಿಸುತ್ತಾರೆ

ಕಾಕೋಳದ ಹನುಮನಮಟ್ಟಿಯಲ್ಲಿ ಕೆ. ಎಫ್. ಪಾಟೀಲರ ಸೋದರ ತಿರುಕಪ್ಪ ಪಾಟೀಲ್ ತಮ್ಮ ಹೊಲದಲ್ಲಿಯೇ ಊಟದ ವ್ಯವಸ್ಥೆ ಮಾಡಿದ್ದನ್ನು

ನೆನಪಿಸಿಕೊಳ್ಳುತ್ತಾರೆ. ಮುತ್ತಳ್ಳಿಯ ಈರಪ್ಪ ಪೂಜಾರ್ ಬ್ಯಾತನಾಳದ ಸಿಗಡಿ ಬಸಪ್ಪ ಚಳುವಳಿಕಾರರು ಇದ್ದಲ್ಲಿಗೆ ಬಂದು ಊಟ ಕೊಟ್ಟು ಹೋಗುತ್ತಿದ್ದರು. ಸುಣ್ಣಕಲ್ಲಬಿದರಿ ಕುಸುಗೂರು ಬಸಮ್ಮ ಅವರ ತಂಡಕ್ಕಾಗಿ ಜೋಳದ ಹೊಲಕ್ಕೆ ಬುತ್ತಿ ರೊಟ್ಟಿ ಕೊಟ್ಟು ಕಳಿಸುತ್ತಿದ್ದರು ಹೀಗೆ ವಿವಿಧ ರೀತಿಯ ಸಹಾಯ ಮಾಡಿದ ಜನರನ್ನು ಗುಡ್ಡನಗೌಡರು ಸ್ಮರಿಸಿಕೊಳ್ಳುತ್ತಾರೆ.

ಇವರನ್ನು ೧೯೬೨ರ ಮೊದಲ ವಾರದಲ್ಲಿಯೇ ಹಾವೇರಿಯ ಪೈ ಇನ್ಸ್ಪೆಕ್ಟರ್ ಬಂಧಿಸಿದರು. ತಮ್ಮ ನಾಯಕರನ್ನು ಹಿಡಿಯಲು ಎಷ್ಟೇ ಕೇಳಿದರೂ ಅವರು ಹೇಳಲಿಲ್ಲ. ಇವರು ಹಾವೇರಿ ಧಾರವಾಡದ ಸಾಬ್ ಜೈಲಿನಲ್ಲಿ ನಾಲ್ಕುವರೆ ತಿಂಗಳು ಯರವಾಡ ಜೈಲಿನಲ್ಲಿ ಎರಡು ತಿಂಗಳು ಶಿಕ್ಷೆ ಅನುಭವಿಸಿದರು. ಹರಿಜನರಿಗೆ ದೇವಾಲಯದ ಪ್ರವೇಶವಿಲ್ಲ ಹೊಂಡಾ, ಸೇದು ಬಾವಿಗಳಲ್ಲಿ ನೀರು ಮುಟ್ಟುವ ಹಾಗಿರಲಿಲ್ಲ, ಸಭೆ–ಸಮಾರಂಭ ಸಹಭೋಜನ ಮಾಡುವಂತಿಲ್ಲ ಇವೆಲ್ಲವುಗಳನ್ನು ನಿವಾರಿಸುವ ಬಗ್ಗೆ ಆ ಕಾರ್ಯಕ್ಕೆ ಮುಂದಾದರು.

## ಹರಿಜನರಿಗಾಗಿ ಹೋರಾಟ

ದೇವರಗುಡ್ಡ ಬಸಾಪುರ ಆಡೂರು ಇಲ್ಲಿ ಊರ ದೇವಾಲಯಗಳ ಸಮಾರಂಭದಲ್ಲಿ ದಲಿತರಿಗೆ ಬಹಳ ಹೊತ್ತಾದರೂ ಊಟ ಕೊಡಲಿಲ್ಲ. ಗುಡ್ಡನಗೌಡರು ಊರಗೌಡರಿಗೆ ದಲಿತರಿಗೆ ಊಟ ಕೊಡಲು ಪದೇಪದೇ ಹೇಳಿದರೂ ಅದಕ್ಕೆ ಅವರು ಸ್ಪಂದಿಸಲಿಲ್ಲ, ಆಗ ಸಿಟ್ಟಿನಿಂದ ಜೈ ಬೋಲೋ ಭಾರತ್ ಮಾತಾಕಿ ಎನ್ನುತ್ತಾ ಅನ್ನದ ಬುಟ್ಟಿಗೆ ಕೈಹಾಕಿದರು. ಆಗ ಸವರ್ಣಿಯರು ಇವನನ್ನು ಹೊಡೆದರು ಕೆಟ್ಟಕೆಟ್ಟದಾಗಿ ನಿಂದಿಸಿದರು. ಈ ಸುದ್ದಿ ಕೇಳಿ ಪೊಲೀಸ ಅಧಿಕಾರಿಗಳಿಗೆ ತಿಳಿದು ಊರಿಗೆ ಬಂದು ಸವರ್ಣೀಯರನ್ನು ಬಂಧಿಸಿದರು. ಇನ್ನು ಮುಂದೆ ಹೀಗೆ ಆಗದಂತೆ ನೋಡಿಕೊಳ್ಳುತ್ತೇನೆ ಎಂದರು. ಹಾನಗಲ್ ತಾಲೂಕ ಹರಿಜನ ಸಂಘದ ಸಂಸ್ಥಾಪಕನಾಗಿ ೫ ವರ್ಷ ಸೇವೆ. ಈ ಅವಧಿಯಲ್ಲಿ ಸಮಾಜಕಲ್ಯಾಣ ಮಂತ್ರಿ ಎಂ ರಾಚಯ್ಯ, ಅಬಕಾರಿ ಖಾತೆ ಮಂತ್ರಿ ಬಿ ಬಸಲಿಂಗಪ್ಪ ಅವರನ್ನು ಕರೆಸಿ ಸಮುದಾಯದವರ ಸಮಸ್ಯೆಗಳು ಅವುಗಳ ಪರಿಹಾರ ಕುರಿತು ಚರ್ಚಿಸಿದರು. ಹಾನಗಲ್ ತಾಲೂಕಿನಲ್ಲಿ ೧೨ .೫ ಎಕರೆ ಜಮೀನನ್ನು ದಲಿತರಿಗೆ ಕೊಡಿಸಿದರು. ಸಕ್ರಮದಲ್ಲಿ ೫೦೦ ಎಕರೆ ಜಮೀನು ದಲಿತರಿಗೆ ಸಿಗುವಂತೆ ಮಾಡಿ, ಸಿ. ಎಸ್. ಪಾಟೀಲ್, ದಾನೇಶ್ವರ



ವಕೀಲರು, ನಾಯಕತ್ವದಲ್ಲಿ ಒಂದು ಎಕರೆ ಭೂಮಿಗೆ ಇವರೇ ಗುದ್ದಲಿ ಪೂಜೆ ಮಾಡಿ ಹಸ್ತಾಂತರಿಸಿದರು. ಉಪ್ಪುಣಸಿ, ಕಲಕೇರಿ, ಬ್ಯಾಗವಾದಿ, ಸೋಮಸಾಗರ, ಕೆರೆ ಕ್ಯಾತನಹಳ್ಳಿ ಅಕ್ಕಿಆಲೂರು ಇನ್ನು ಮುಂತಾದ ಕಡೆ ಅಕ್ರಮ–ಸಕ್ರಮ ಕಾರ್ಯ ಮಾಡಿಸಿದರು. ಶಾಡಗುಪ್ಪಿಯಲ್ಲಿ ದಲಿತರಿಗೆ ನೀರು ಸೇದಲು ಅವಕಾಶ ಮಾಡಿಸಿಕೊಂಡು ಬಂದರು. ದೇವರಗುಡ್ಡ ಬಸಾಪುರ ಆಡೂರು ಮತ್ತು ಅಕ್ಕಿಆಲೂರುಗಳ ದೇವಾಲಯ ಪ್ರವೇಶಿಸಿದ್ದಲ್ಲದೇ ದೇವರಿಗೆ ಸ್ವತಃ ಪೂಜೆ ಮಾಡಿದರು, ಇದರಿಂದ ತಮ್ಮ ದಲಿತರಿಗೆ ಮಾದರಿ ಹಾಕಿಕೊಟ್ಟರು. ಹಲವು ನಿಷೇಧವಿರುವ ಕಡೆ ನೀರನ್ನು ತುಂಬಿಸಿರುವುದನ್ನು ಹೆಮ್ಮೆಯಿಂದ ವಿವರಿಸುತ್ತಾರೆ.

ಸ್ವಾತಂತ್ರ ನಂತರ ರಾಚಯ್ಯನವರು ಸಮಾಜಕಲ್ಯಾಣ ಖಾತೆ ಸಚಿವರಿದ್ದಾಗ ರಾಜ್ಯಮಟ್ಟದ ಎಸ್ಸಿ ಮತ್ತು ಎಸ್ಟಿ ಸಮಿತಿಗೆ ಅಧ್ಯಕ್ಷರಾದರೆ ಗುಡ್ಡಪ್ಪನವರು ಉಪಾಧ್ಯಕ್ಷರಾಗಿ ನೇಮಕವಾದರು. ಕೆಂಗಲ್ ಹನುಮಂತರಾಯ ಆಡಳಿತ ಅವಧಿಯಲ್ಲಿ ಧಾರವಾಡ ಜಿಲ್ಲಾ ಹರಿಜನ ಸಮಿತಿಯ ಅಧ್ಯಕ್ಷರಾಗಿದ್ದು ಅವರ ಅಭಿವೃದ್ಧಿಗೆ ಶ್ರಮಿಸಿದರು. ೧೯೬೧ ರಿಂದ ಸತತ ೧೨ ವರ್ಷ ವಾಸನದ ಪಂಚಾಯಿತಿ ಮೆಂಬರ್ ಆಗಿ ಸೇವೆ ಸಲ್ಲಿಸಿದರು. ೧೯೬೧ ರಲ್ಲಿ ದೀನದಲಿತರಿಗೆ ಸರ್ಕಾರಿ ಸಂಘ ನೋಂದಣಿ ಮಾಡಿಸಿ ಅದರ ಚೇರಮನ್ ಆಗಿ ೧೭೦ ಎಕರೆ ಜಮೀನನ್ನು ನೊಂದಣಿ ಮಾಡಿಸಿದರು. ಇನ್ನೂ ಹೆಚ್ಚು ಹೆಚ್ಚು ಹರಿಜನರ ಅಭಿವೃದ್ಧಿಗೆ ಹೆಚ್ಚು ಹೋರಾಡಿದವರು. ಸದ್ಯದ ರಾಜಕೀಯ ರಾಜಕಾರಣ ಗಮನಿಸಿ ಯುವಜನತೆಯ ಬಗ್ಗೆ ಕೋಪಿಸಿಕೊಳ್ಳುತ್ತಾರೆ. ಹೀಗೆ ಸಾಮಾನ್ಯ ದಲಿತನೊಬ್ಬ ಸ್ವಾತಂತ್ರ ಸಂಗ್ರಾಮಕ್ಕೆ ಧುಮುಕಿ ದಲಿತರಿಗಾಗಿ ಹೋರಾಟದಿಂದಲೇ ನ್ಯಾಯ ಕೊಡಿಸುವಲ್ಲಿ ವಹಿಸಿದ ಪಾತ್ರ ಸ್ಮರಣೀಯವಾಗಿದೆ.

ಅರಣ್ಯ ಸತ್ಯಾಗ್ರಹ ಹಾನಗಲ್ ಬ್ಯಾಡಗಿ ಹಿರೇಕೆರೂರು ಸಿಗ್ಗಾವ್ ತಾಲೂಕುಗಳಲ್ಲಿ ನಡೆಯಿತು. ಹಾನಗಲ್ ತಾಲೂಕಿನ ಗ್ರಾಮಗಳು ಸಂಪೂರ್ಣ, ಹಾವೇರಿ ತಾಲ್ಲೂಕಿನ ಕಬ್ಬೂರು, ಸಂಗೂರು ನಾಗನೂರು, ಬೆಂಚಿಹಳ್ಳಿ ಮುಂತಾದ ಗ್ರಾಮಗಳಲ್ಲಿ ಹುಲುಬನ್ನಿ ಲಿಲಾವನ್ನು ಹಿಡಿಯಲಿಲ್ಲ (ಹುಲಬನ್ನಿ ಲೀಲಾವ ಎಂದರೆ ಗ್ರಾಮಗಳ ಊರು ದನಗಳ ಆಹಾರಕ್ಕಾಗಿ ಸರ್ಕಾರಿ ಗೋಮಾಳ ಜಾಗೆಗಳಲ್ಲಿ ದನಕರುಗಳನ್ನು ಮೇಯಿಸಲು ಸರ್ಕಾರ ಮೇಯುವ ದನಗಳಿಗೆ ತೆರಿಗೆ ವಿಧಿಸಿತ್ತು) ಕಾರಣ ಆ ಗ್ರಾಮಗಳಿಗೆ ಹೋಗಿ ಅಲ್ಲಿಯ ಕೃಷಿಕರಿಗೆ

ಪರಮಣ್ಣ ಹೊಸಮನಿ, ವೆಂಕಟೇಶ್ ಚೆಟ್ಟಿ, ಗೋವಿಂದಾಚಾರ್, ಅಗ್ನಿಹೋತ್ರಿ, ಮುಂತಾದವರು ಮನೆ ಮನೆಗಳಿಗೆ ಹೋಗಿ "ನೀವು ಯಾರು ಸರ್ಕಾರ ಮಾಡುವ ಲಿಲಾವನ್ನು ಹಿಡಿಯಬೇಡಿ" ಎಂದು ರೈತರ ಮನವೊಲಿಸುತ್ತಲಿದ್ದರು. ಇದರ ಪ್ರಭಾವವಾಗಿ ಬಂಕಾಪುರ ತಾಲೂಕಿನ ದುಂಡಸಿಯನ್ನು ಕೇಂದ್ರವನ್ನಾಗಿ ಮಾಡಿಕೊಂಡು ೧೯೩೦ ರಲ್ಲಿ ಮೂರುಬಾರಿ ಮುತ್ತಿಗೆ, ಸತ್ಯಾಗ್ರಹಗಳು ನಡೆದವು. ಹಾನಗಲ್ ತಾಲೂಕಿನ ಬೊಮ್ಮನಹಳ್ಳಿಯಲ್ಲಿ ಹುಲುಬನ್ನಿ ನಿರಾಕರಣೆ ಮತ್ತು ಗಂಧದ ಗಿಡಗಳನ್ನು ಸಂಹಾರ ಮಾಡಲಾಯಿತು. ಮಲೆನಾಡ ಭಾಗವಾದ ಜಿಲ್ಲೆಯ ಹಾನಗಲ್ ತಾಲೂಕಿನ ಹಳ್ಳಿ ಹಳ್ಳಿಗೆ ಹೋಗಿ ಹುಲ್ಲುಬನ್ನಿ ಲಿಲಾವನ್ನು ಯಾರೂ ಹಿಡಿಯದಂತೆ ಕೃಷಿಕರ ಮನವೊಲಿಸಿದರು. ಈಚಲಮರಗಳನ್ನು ಕಡಿಯಲಾರಂಭಿಸಿದ್ದು, ಕುಡಿಯುವುದು ಮಹಾಪಾಪ ನಿಮ್ಮ ಸರ್ವನಾಶಕ್ಕೆ ನಾಂದಿ ಎಂದು ಮನವೊಲಿಸಿರುವುದು ವಿಶೇಷವಾಗಿತ್ತು. (ಹಾವೇರಿ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರು – ಡಾ. ಹೆಚ್. ಬಿ. ಕೆಂಚಳ್ಳಿ ಪಿಹೆಚ್.ಡಿ ಅಪ್ರಕಟಿತ)

**ಕನ್ನೇಶ್ವರ ರಾಮ:**

ಬ್ರಿಟಿಷ್ ಸಾಮ್ರಾಜ್ಯವನ್ನು ಕಿತ್ತೊಗೆಯಲು ಅನೇಕ ಭಾರತೀಯರು ಪಣತೊಟ್ಟರು ಈ ಹಿನ್ನೆಲೆಯಲ್ಲಿ ಬ್ರಿಟಿಷ್ ವಿರುದ್ಧ ಒಂದಾಗಲು ಅನೇಕ ವ್ಯಕ್ತಿಗಳು ಬೀದಿ ನಾಟಕ, ಹಗಲುವೇಷ, ಕನ್ನಡ ಜನಪದ ಸಾಹಿತ್ಯಗಳಲ್ಲಿ ಗ್ರಾಮೀಣ ಪ್ರದೇಶದ ಜನತೆ ತಾವು ಕಣ್ಣಮುಂದಿನ ಘಟನೆ ಮತ್ತು ದೃಶ್ಯವನ್ನು ತಮ್ಮ ಅನುಭವದ ಮೂಲಕ ಲಾವಣಿಗಳಲ್ಲಿ ಸೆರೆಹಿಡಿದಿದ್ದಾರೆ ಸಂಗೊಳ್ಳಿ ರಾಯಣ್ಣ, ಸಿಂಧೂರ ಲಕ್ಷ್ಮಣ, ಕಿತ್ತೂರು ಚೆನ್ನಮ್ಮ, ಕನ್ನೇಶ್ವರ ರಾಮ, ಮೈಲಾರ ಮಹದೇವ, ಹಲಗಲಿ ಬೇಡರು ಮುಂತಾದವರು ನಡೆಸಿದ ಸ್ವಾತಂತ್ರ್ಯ ಹೋರಾಟದ ಕುರಿತು ರಚಿಸಿದ್ದಾರೆ. ಅದು ಒಂದು ಹಾಡಾದರೂ ಕಥೆ ಹೇಳುವುದು ಅದರ ಮುಖ್ಯ ಉದ್ದೇಶ. ಹಾಡಿನ ರೂಪದಲ್ಲಿ ಕಟ್ಟಿದ ಕಥೆ. ಹೀಗೆ ರಚಿಸಿದ ಲಾವಣಿಗಳಲ್ಲಿ ಕನ್ನೇಶ್ವರ ರಾಮನ ಲಾವಣಿಯು ಒಂದಾಗಿದೆ. ಇದನ್ನು ಹರಗಿಯ ಲೋಕಪ್ಪ ಪರಸಪ್ಪ ಸಣ್ಣ ಹೊತ್ತಿಗೆ ಎಂಬ ಜನಪದ ಕಲಾವಿದರು ವಂಶಪಾರಂಪರ್ಯವಾಗಿ ತಂದೆಯಿಂದಲೇ ಕಲಿತುಕೊಂಡು ಇಂದಿನವರೆಗೂ ಹಾಡುವ ಹವ್ಯಾಸವನ್ನಿಟ್ಟುಕೊಂಡಿದ್ದಾರೆ. ನಾಥೂರಾಮ ಗೋಡ್ಸೆ ಗಾಂಧೀಜಿ ಹತ್ಯೆ ಮಾಡಿದ ಸನ್ನಿವೇಶ ಮುಂತಾದ ಲಾವಣಿಗಳನ್ನು ಹಾಡುವರು.



ಗೌಡಾಳಿಕೆಯ ಅನೈತಿಕ ಸಂಬಂಧಗಳ ಸಂಧಿಗ್ಧತೆಗಳಲ್ಲಿ ಸಿಲುಕಿ ಊರುಬಿಟ್ಟು ಇದ್ದ ೨೫ ಎಕರೆ ಜಮೀನನ್ನು ಬೀಳುಗೆಡವಿ ಹಪ್ತೆ ಕಟ್ಟದೇ ಹರಾಜಾಗಿರುವ ಪ್ರಸಂಗದಲ್ಲಿ ಊರ ಜಮೀನ್ದಾರ ಗೌಡರ ವಿರುದ್ಧ ಸೆಟೆದು ನಿಲ್ಲುವ ವ್ಯವಸ್ಥೆಯ ವಿರುದ್ಧ ಹೋರಾಡುವ ಮನೋಭಾವದ ರಾಮ, ಅರಣ್ಯದಲ್ಲಿ ಅಡಗಿ ಭಯಂಕರನಾಗಿ ವರ್ತಿಸುತ್ತ ವಿರೋಧಿಗಳ ಮನೆಗೆ ಬೆಂಕಿ ಇಡುವ ಸಾಹಸಕ್ಕೆ ಕೈಹಾಕಿ ದುಷ್ಟನೆನಿಸಿಕೊಂಡವನಿವ ಕೊನೆಗೆ ಅನೈತಿಕತೆಯ ಹೆಣ್ಣಿನ ಸಹವಾಸದಿಂದಲೇ ಪೋಲೀಸರಿಗೆ ಸಿಕ್ಕು ದುರಂತಸಾವನ್ನು ಎದುರಿಸಬೇಕಾಯಿತು. ಇವನು ದಟ್ಟ ಕಾಡಿನಲ್ಲಿದ್ದು ಡಕಾಯಿತನ ಮಾಡುತ್ತ ಉಳ್ಳವರ ಶ್ರೀಮಂತರ ಸೊಕ್ಕನ್ನು ಮುರಿಯಲು ಅವರ ಮನೆಯನ್ನು ಹೇಳಿ ಲೂಟಿ ಮಾಡಿ ಬಡವರಿಗೆ ದಾನಮಾಡುತ್ತಿದ್ದ ರೀತಿ ವಿಶೇಷವಾಗಿತ್ತು. ಬಡವರ ಬಂಧುವಾಗಿ ಆಳುವವರ ತಲೆನೋವಾಗಿ ಸಮಾಜವೀರನಾಗಿ ದಂತಕತೆಯಾಗಿ ಲಾವಣಿಗಳಲ್ಲಿ ಕಂಡುಬಂದಿದ್ದಾನೆ. ಬಡವರು ಜನಸಾಮಾನ್ಯರಿಗೂ ಆರ್ಥಿಕ ನ್ಯಾಯ ಒದಗಿಸುವಲ್ಲಿ ಆದರ್ಶಮಯ ಸಮಾಜದ ಕಲ್ಪನೆಯಲ್ಲಿರುವ ಇವನು ಡಕಾಯಿತನಾಗುವ ಮತ್ತು ಅದರಿಂದ ಪಾರಾಗುವ ಇಚ್ಛೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರರಲ್ಲಿ ವಿಲೀನಗೊಳ್ಳುವ ಪ್ರಕ್ರೀಯೆಯಲ್ಲಿ ಸಾಗಿ ಅವರೊಡಗೂಡಿ ಸ್ವಾತಂತ್ರ್ಯಹೋರಾಟಗಾರನೆನಿಸಿಕೊಂಡನು.

**ಕನ್ನೇಶ್ವರ ಲಾವಣಿ**

**ನರವೀರ ಕನ್ನೇಶ್ವರ ರಾಮನೆಂಬವ ಶೂರ**
**ಧೀರತನ ತೋರಿ ತಾ ಪ್ರಾಣಕೊಟ್ಟ ಸರದಾರ ॥ ಪ ॥**
**ಮೈಸೂರು ಪ್ರಾಂತ ಶಿಕಾರಿಪುರ ತಾಲೂಕು ಸಣ್ಣ ಊರ**
**ಐಶ್ವರ್ಯದಿ ಮೆರೆವುದು ಹರಗಿ ಎಂಬ ಹೆಸರ**
**ಶರಹರಗಿಯೊಳಗೆ ಅವಾ ಮಾಡಿಕೊಂಡು ಮನಿವಾರ**
**ಹರುಷದಿ ಸಾಗಿಸಿದ್ದ ಕೂಡಿಕೊಂಡು ಸಂಸಾರ**
**ದನಕಟ್ಟಿ ಬಹಳ ನಡೆತೆನಿವಳದಿತ್ತು ಬಹಳ ಸರಳ**
**ಪರಮೇಶ್ವರ ಕೊಟ್ಟು ಮಾಡದಿದ್ದ ಇತ್ತ ಬಂಗಾರ**
**ಬೆನ್ನತ್ತಿದ ಶನಿ ಅವನ ಬಂದಿತ್ತು ಕಾಡುವ ಕಾಲ**
**ದನ ದೊಡ್ಡಿಗೆ ಕೂಡಿದ ಕಾರಣ ಹುಟ್ಟಿತು ಜಗಳ**

ಮುತ್ತಿಗಿ ಹುಚ್ಚಣ್ಣನ ದನಗಳ ದೊಡ್ಡಿಗೆ ಕೂಡಿದ ನಲ್ಲ
ಕೆಟ್ಟ ಬೈಗುಳ ಬೈದನು ರಸ್ತೆಯ ಮೇಲೆ ನಿಂತು
ಅವಮಾನ ಸಹಿಸದೇ ರಾಮಣ್ಣ ರೇಗಿದನಲ್ಲ
ಮಾನ ಹೋದ ಮೇಲೆ ಜಗದೊಳಿದ್ದು ಫಲವಿಲ್ಲ
ಹುಚ್ಚಣ್ಣನ ಮೇಲೆ ತೊಟ್ಟ ಹಠ ತೆಗೆಯಲಿಕ್ಕೆ ಘಟ ಮಾಡಿಕೊಂಡ ದಿಟ
ಬಾರ ಮಾಡಿದ ಬಂದೂಕ ತೋಟಿ ತುಂಬಿ ತಯ್ಯಾರ ॥ ಧೀರತನವ ॥

ಮರುದಿವಸ ಉದಯದಲೆದ್ದು ಹುಚ್ಚ ಬಂದ ಬಾಗಿಲಕೆ
ತಲೆಬಾಗಲ ತಾಕಿ ತನ್ನ ಪೌಡ ಬಿದ್ದಿತ್ತು ನೆಲಕೆ
ಅಪಶಕುನ ಕಂಡು ಹುಚ್ಚಣ್ಣ ಮಾಡತಾನ ತೂಕ
ತಲೆಪೌಡ ಬಿದ್ದರೆ ಮನುಜಗೆ ಆಗುವುದು ಕೆಡಕ
ಎಡಗಾಲ ಮುಂದೆ ಹರಿ ಯಾಕೆ ಬಂದ ಹುಚ್ಚಣ್ಣ
ಕೇಡುಗಾಲ ವೆಂದು ಕಾಗೆಯು ಸುಳದೀತು ಎಡಕೆ
ಹುಚ್ಚಣ್ಣಗಿಲ್ಲೋ ಎಚ್ಚರ ಕೆಲಸದವಸರ ಹೊರಟ ಬರ ಬರ
ಭೋರಿಡುತ ಭೂಮಿತಾಯಿ ಸುರಿಸುತ್ತಾಳ ಕಣ್ಣೀರ ॥ ಧೀರತನವ ॥

ಸೇಂದಿ ಗಿಡವ ಕಟ್ಟಲಿಕ್ಕೆ ಮರದ ಮೇಲೆ ಕುಳಿತಿದ್ದ
ಕಲಿ ತಿಳಿದು ಕನ್ನೇಶ್ವರ ರಾಮನಲ್ಲಿಗೆ ಬಂದ
ಅನುಮಾನವಿಲ್ಲ ಗಿಡದಿಂದ ಹುಚ್ಚ ಗಿಳಿಸಿದ
ಕರಕರನೆ ಹಲ್ಲು ತಿಂದು ರಾಮ ಬಂದು ಕೆಚ್ಚಿದ
ಕರಮುಗಿದು ಹುಚ್ಚ ತಂದೆ ತಾಯಿ ದೇವರಿಗೆ ನೆನೆದ
ಅಷ್ಟರೊಳಗೆ ಗುಂಡು ಬಂದಿತು ಎದೆಗೆ ಬಡದಿತು ಪ್ರಾಣ ಹಾರಿಹೋಯ್ತು
ತ್ವರೆ ಮಾಡಿ ಸರ್ಕಾರವು ಮಾಡಿಕೊಂಡಿತು ಮಹಜೂರ ॥ ಧೀರತನವ ॥

ಬಯಲುಸೀಮೆ ಪೊಲೀಸ ಪಾರ್ಟಿ ಬಂತು ರಾಮನ ಹಿಡಿಯಾಕೆ
ಕಲ್ಲೆದೆಯ ಕನ್ನೇಶ್ವರ ರಾಮ ಹೆದರಲಿಲ್ಲ ಮನಕೆ
ಊರ ಹೊರಗೆ ಬಂದ ಹನುಮಂತ ದೇವರಂತಾಕೆ
ಕರಮುಗಿದು ಎರಗಿ ಶಿರಬಾಗಿ ನಿಂತ ಪಾದಕ್ಕೆ



ಹಾತಾರ ಮಸೆದ ತೊಡಲೊಳಗಿ ಬಂದ ತಾಗೊಂಡು
ಮತ್ತೆ ಮತ್ತೆ ಮದ್ದುಮಸಿಗುಂಡ ಮಾಡಿಟ್ಟುಕೊಂಡನು ಸ್ಟಾಕ್
ಸದ್ದು ಗುಂಡ ಗುಡ್ಡದ ಅರಣ್ಯ ಇತ್ತು ದೊಡ್ಡ ಖಾನ ಅಲ್ಲಿ ಮಾಡಿಟ್ಟಾನ
ಸರ್ಕಾರದ ಸಂಗಡ ಕುಸ್ತಿ ಹಿಡಿದ ಬಹದ್ದೂರ ॥ ಧೀರತನವ ॥

ಮೋಸವಾತು ಒಮ್ಮೆ ತನ್ನ ಖಾಸಾ ಕನ್ನೇಶ್ವರದೊಳಗ
ದ್ವೇಷದಿಂದ ಹಿಡಿಸಿ ಕೊಟ್ಟ ಪೊಲೀಸರಿಗೆ
ಹಿಡಿದೋಯ್ದು ಹಾನಗಲ್ಲ ಜೈಲಿನೊಳಗ ಇಟ್ಟಾರವಗ
ಅದೇ ದಿವಸ ರಾತ್ರಿ ಹನುಮಂತ ಬಂದ ಸ್ವಪ್ನದಾಗ
ಹಿಡಿ ಜೈಲ ಮುರಿದು ತಳಭಾಗ ಹೊರಟು ಭಾಗ ಹೊರಗ
ಹೇಡಿಯಂತೆ ಮಲಗಬೇಡ ತೆಗೆಯೋ ಮುಖದ ಮೇಲೆ ಮುಸಗ
ಸ್ವಪ್ನ ಕಂಡು ಎದ್ದು ರಾಮ ರೋಷ ತಾಳಿದ ಸಲಾಕಿಯ ಮುರಿದ
ಬರ ಹಿಂಡಿನೊಳಗ ಹೊರ ಹೊರಟ ಅಂಜಿಕಿಲ್ಲ ಜರಾ ॥ ಧೀರತನವ ॥

ರಣಕೇಕೆ ಹೊಡೆದು ಸುಪ್ರೆಂಟ ಹೇಳತಾನ ನಿಂತು
ಜೈಲು ಮುರಿದು ರಾಮ ಹೋಗುತಾನ ಹಿಡಿಯ ಬೇಕಂತ
ನೂರಾರು ಪೊಲೀಸರು ಹಿಡಿಯಾಕ ಬಂದರು ಸುತ್ತಮುತ್ತ
ತುಂಬ ಹರಿವ ಹಾನಗಲ್ಲ ಹೊಳೆ ದಾಟಿಸ ನರ ಅಂತ
ಆರ್ಭಟದಿ ಹೊಂಟ ಹಿಡಿದು ಕೊಟ್ಟ ಗೌಡನುಲುಕುತ್ತ
ಸಿರ ಹರಿದು ಬಿಡುವೆನೆಂದು ಮನದಿ ಮಾಡಿದನು ಶಪಥ
ಕನ್ನೇಶ್ವರದ ಗೌಡನ ಮನೆ ಹೊಕ್ಕ ಗೌಡ ಕೈಗೆ ಸಿಕ್ಕ ರೌಂಡ್ ಮಾಡಿದ
ಅದಕ ॥ ಧೀರತನವ ॥

ನಡುರಾತ್ರಿಯೊಳು ರಾಮ ಬಂದು ಹೊಕ್ಕ ಮನಿಯಾಗ
ಹೊರಬಂದು ಹೊರಗಿನಿಂದ ಬೀಗ ಹಾಕ್ಯಾರು ಬಾಗಿಲಕ
ಪೊಲೀಸರ ಪಾಡ ಪರಪೂರ ತಿರುಗುತಾರ ಹೊರಗೆ
ನೂರಾರು ಪೊಲೀಸರಿಗಿಲ್ಲ ಧೈರ್ಯ ಹಿಡಿಯಾಕ
ಬಲೆಯೊಡ್ಡಿ ಕಾಯೆಲ್ಲರ ಕೈಯಲ್ಲಿಡಿದು ಬಂದೂಕ ॥ ಧೀರತನವ ॥

ಹರಗಿ ಕೋಡಿಹಳ್ಳಿ ಜನ ತಾನೆಲ್ಲಾದಿತೋ ಸರ್ಕಾರಕ್ಕೆ
ನಿರಿನಿಂತ ಕನ್ನೇಶ್ವರ ರಾಮನಿಡಿದು ಕೊಡಲಾಕೆ
ಹರಗಿ ತಾನೆಲ್ಲಾದ ಸುದ್ದಿ ಕೇಳಿ ರಾಮ ರೋಷದಲ್ಲಿ ಬಂದ
ಪುರಹರಿಗೆ ಸುಟ್ಟಿಸಿರೆ ಬಿಡದನೆಂದು ಹೊಗೆ ಹೊರಟ
ಹಾಡಹಗಲೇ ಬಂದು ಹೊರಗೆ ಬೆಂಕಿಯ ಕೊಟ್ಟ
ಸುಡುತಿರಲು ಕೆರೆ ಏರಿಗೆಗೆ ಬಂದೂಕು ಹಿಡಿದು ನಿಂತ
ಹಿಡಿಹೊಯ್ತು ಹೀಗೆ ಈ ತರದ ರಾಮ ಕೊಂಡಾಟ
ಸರ್ಕಾರದ ಜನರಿಗೆ ಬಂದಿತು ಭಾದ್ದಿಕಲಾಟ
ಸರ್ಕಾರ ಅಂದ್ರೆ ರಾಮಣ್ಣಗಿಲ್ಲೋ ದರಕಾರ
ಗರಾಗೀರಿದರು ಆಕಳಿಸಿತು ಆಗ ಸರ್ಕಾರ ॥ ಧೀರತನವ ॥

ಕಾನಕೊಪ್ಪವೆಂಬುದು ತೀರ ಸಮೀಪದ ಹಳ್ಳಿ
ಕನ್ನೇಶ್ವರ ರಾಮನಲ್ಲಿದ್ದವಳು ಪ್ರೀತಿಯ ಸೂಳಿ
ತಪ್ಪದಂತೆ ಹೋಗುತ್ತಿದ್ದ ಇತ್ತ ಅವಗ ದುರಚಾಳಿ
ಉಪ್ಪತಿಂದ ಬೆಪ್ಪನರಿ ತಿರುಗಿಬಿದ್ದಳು ಗಯ್ಯಾಳಿ
ಈ ವರ್ತಮಾನವನ್ನು ರಿಸರ್ವ ಪೊಲೀಸರು ಕೇಳಿ
ಸಮನಾಗಿ ತಂದ್ರು ರಾಮಣ್ಣನ ಜೀವಕ್ಕೆ ದಾಳಿ
ಒಳಸಂಚು ಸುಳಿಯೊಳು ನಡೆಸಿ ಪ್ರೀತಿಯನು ಕೆಡಿಸಿ ತಗೊಂಡರು ಭಾಷಿ
ಮರ ಮೋಸದಿಂದ ಹಿಡಿದು ಕೊಡುವೆನುಡುತ ಕಾರಭಾರ ॥ ಧೀರತನವ ॥

ಸೇಂದಿ ಸರಾಯ ಗಾಂಜಾ ಸೀದಾ ಮಾಡುತ್ತಿದ್ದ ಬರ್ತಿ
ಸೆರೆದೊಳಗ ಅಪು ಬೆರೆಸಲು ತೆಗೆದಳೊಮ್ಮೆ ಯುಗತಿ
ಮಧ್ಯಪಾನ ದೊಳು ಅಪ್ಪು ಬೆರೆಸಿ ಕೊಟ್ಟಳನುಸರಿಸಿ ಕುಡಿದನು ಪರಮಾಸಿ
ಸೆರೆ ಕುಡಿದಮೇಲೆ ಎಂಬ ಲಕ್ಷೆ ಬಿದ್ದಿದಿಲ್ಲ ಕದರ. ॥ ಧೀರತನವ ॥

ಹೊರಬಂದು ಹೇಳಿದಳು ರಿಸರ್ವ ಪೊಲೀಸರಿಗೆ ಗುಟ್ಟು
ಮಲಗಿದ ರಾಮನನ್ನು ಕಂಡು ಪೊಲೀಸರ ದಂಡು ಮುತ್ತಿತಾ ಹಿಂಡು
ಮರೆಯಾಯ್ತು ಮಾರುತಿಯ ಕರುಣ ಕಟಾಕ್ಷದ ಘೋರ. ॥ ಧೀರತನವ ॥



ಕಣ್ಣ ತೆರೆದು ನೋಡಿದರೆ ಬಂದೂಕಿಲ್ಲ ಹತ್ತಿರ
ಕಡೆಗೊಮ್ಮೆ ತಳದಿ ಮಂಗನಂತೆ ಅವತಾರ
ಮಡಬಿದ್ದ ಹುಲಿಯ ಸೆರೆ ಹಿಡಿಕಿದಂತೆ ಸರದಾರ
ಹಲ್ಲ ಹಚ್ಚಿ ಕಡೆದ ಬಲು ಗಾಯಗೊಂಡರೂ ಪೊಲೀಸರ
ಹಲ್ಲ ಹಚ್ಚಿ ಕಡಿದರೂ ಬಿಡಲಿಲ್ಲ ಪೋಲಿಸರಪಾರ
ಮರಣೋದ ಕಾಲ ಬಂತೆಂದು ತೆಗೆದು ಕಣ್ಣೀರ
ಮಿಡಕಿದರೆ ಮನುಜ ಕೊನೆಗಾಯನೆಂದು ನಾಧೀರ
ನರವೀರ ಕನ್ನೇಶ್ವರ ರಾಮನೆಂಬುವ ಶೂರ
ಧೀರತನವ ತೋರಿ ತಾ ಪ್ರಾಣಕೊಟ್ಟ ಸರದಾರ

– ಹಾಡಿದವರು: ಲೋಕಪ್ಪ ಪರಸಪ್ಪ ಸಣ್ಣಹೊತ್ತಿಗೆ , ಹರಗಿ

ಕನ್ನೇಶ್ವರ ರಾಮ ಶೂರನಾಗಿದ್ದ ಧೀರತನದಿಂದ ತನ್ನ ಪ್ರಾಣವನ್ನು ಕೊಟ್ಟಂತಹ ಸರದಾರ. ಇವನು ಮೈಸೂರು ಪ್ರಾಂತ ಶಿಕಾರಿಪುರ ತಾಲೂಕಿನ ಹರಿಗಿಯೆಂಬ ಗ್ರಾಮದಲ್ಲಿ ಮನೆ ಮಾಡಿಕೊಂಡು ಜೀವನ ಸಾಗಿಸುತ್ತಿದ್ದವನು. ದನಕರುಗಳನ್ನು ಕಟ್ಟಿಕೊಂಡಿದ್ದ ಅವನ ಜೀವನ ಬಹಳ ಸರಳ ಇತ್ತು. ಆದರೆ ಅವನಿಗೆ ಶನಿಕಾಟ ಪ್ರಾರಂಭವಾಯಿತು. ಮುತ್ತಿಗಿ ಹುಚ್ಚಣ್ಣ ದನಗಳನ್ನು ದೊಡ್ಡಿಗೆ ಹಾಕಿದ ಕಾರಣ ರಸ್ತೆ ಮೇಲೆ ನಿಂತು ಕೆಟ್ಟ ಬೈಗುಳ ಬೈದಾಗ ರಾಮನಿಗೆ ಅವನಿಗೂ ದ್ವೇಷ, ಅವಮಾನ ಸಹಿಸದೆ ರಾಮಣ್ಣ ರೇಗಿದನು. ಮಾನಹೋದ ಮೇಲೆ ಬದುಕಿದ್ದು ಫಲವಿಲ್ಲ ಎಂದು ಹುಚ್ಚಣ್ಣನ ಮೇಲೆ ಹಟತೊಟ್ಟನು. ಅವನಲ್ಲಿರುವ ಬಂದೂಕು ರೆಡಿ ಮಾಡಿದನು. ಸೇಂದಿ ಗಿಡ ಕಟ್ಟಲಿಕ್ಕೆ ಮರವೇರಿದ್ದ ಹುಚ್ಚಣ್ಣನನ್ನು ಕೆಳಗಿಳಿಸಿ ಗುಂಡುಹೊಡೆದಾಗ, ಸರ್ಕಾರ ಮಹಜೂರ ಮಾಡಿಕೊಂಡು ಹೊಯ್ತು ಅವನ ಹಿಡಿಯಲು ಹೊಂಚು ಹಾಕಿದರು. ರಾಮ ಅಡವಿಯಲ್ಲಿ ಇರಹತ್ತಿದನು. ಒಮ್ಮೆ ಮೋಸವಾಗಿ ಅವನನ್ನು ಹಿಡಿದು ಹಾನಗಲ್ ಜೈಲಿನಲ್ಲಿಟ್ಟರು. ಕನಸಿನಲ್ಲಿ ಹನುಮಂತ ಬಂದು ಹೇಡಿಯಂತೆ ಮಲಗಬೇಡ ಏಳು ಎಂದಾಗ ಮರುದಿನ ಜೈಲು ಮುರಿದು ಹೊರಬೀಳುತ್ತಾನೆ. ಪೋಲಿಸರು ಹಿಡಿಯಲಿಕ್ಕೆ ಸುತ್ತಮುತ್ತಿದರೂ ತುಂಬಿದ ಹಾನಗಲ್ ಹೊಳೆಯ ದಾಟಿ ಆರ್ಭಟಿಸಿ ಹೋದ ಅವನನ್ನು ಹಿಡಿಯಲು ಪೊಲೀಸರು ಕಾಯುತ್ತಿರುತ್ತಾರೆ ಹರಿಗಿ ಕೋಡಿಹಳ್ಳಿ ಜನ ರಾಮನನ್ನ ಹಿಡಿದು ಕೊಡಲಿಕ್ಕೆ ಸಿದ್ಧರಾದಾಗ ಅವರ ಮನೆಗೆ ಬೆಂಕಿಯನ್ನು ಹಚ್ಚುವನು. ನೀರು ಹಾಕಿ ನಂದಿಸಬಾರದು ಎಂದು ಕೆರೆ ಏರಿಗೆ ಬಂದೂಕು

ಹಿಡಿದು ನಿಂತನಲ್ಲದೇ ಸರ್ಕಾರಕ್ಕೆ ಸವಾಲ ಆದನು. ಇವನು ಕಾನಕೊಪ್ಪದಲ್ಲಿ ಒಬ್ಬ ಸೂಳೆಯ ಜೊತೆ ಇರುವುದನ್ನು ತಿಳಿದು ಸರಕಾರ ಅವಳಿಗೆ ಆಮಿಷ ಒಡ್ಡಿದಾಗ ಅವಳು ಅವನಿಗೆ ಮದ್ಯಪಾನದ ಹವ್ಯಾಸದಲ್ಲಿ ಅಪು ಬೆರೆಸಿ ಕೊಟ್ಟಳು, ಪೊಲೀಸರಿಗೆ ಗುಟ್ಟನ್ನು ಹೇಳಿದಳು ಪೊಲೀಸರ ದಂಡು ಅವನನ್ನ ಸುತ್ತುವರೆಯಿತು. ಕಣ್ಣು ತೆರೆದು ನೋಡಿದರೆ ಬಂದೂಕು ಹತ್ತಿರ ಇರಲಿಲ್ಲ ಹುಲಿಯಂತೆ ಸೆರೆಹಿಡಿದರು ಅವನನ್ನು ಹಲ್ಲುಕಚ್ಚಿ ಕಡೆದ ಪೊಲೀಸರನ್ನು ಮರಣದ ಕಾಲ ಬಂತೆಂದು ಅಧೀರನಾದ ಎಂಬುದು ಈ ಲಾವಣಿಯ ಸಾರವಾಗಿದೆ.

## ಕನ್ನೇಶ್ವರದ ಪರಿಸರದಲ್ಲಿಯ ಚಟುವಟಿಕೆಗಳು:

ಸ್ವಾತಂತ್ರ್ಯ ಹೋರಾಟಗಾರರು ಪ್ರಚಾರ ಮಾಡುತ್ತಾ ಒಮ್ಮೆ ಎಣ್ಣೆಕೊಪ್ಪದ ದಿ.ಮಲ್ಲಿಕಾರ್ಜುನಪ್ಪ ಗೌಡರ ಮನೆಗೆ ಗುಂಪು ವಸತಿ ಮಾಡಿತು. ಇದೇ ಮನೆಯಲ್ಲಿ ಈ ಮೊದಲು ಕಾಂಗ್ರೆಸ್ ಕಾರ್ಯಕರ್ತರ ಗುಪ್ತ ಆಲೋಚನ ಸಭೆ ಸೇರಿತ್ತು. ಗೌಡರ ಮನೆಯಲ್ಲಿ ಆದರಾತಿಥ್ಯ ಸ್ವೀಕರಿಸಿ ಡಾಕ್ಟರ ಶಿವಣ್ಣ ನೇಶ್ವಿಯವರು ಗೌಡರ ಜೊತೆ ಮಾತನಾಡುತ್ತ ಮಲಗಿದರು. ಇವರ ಸಂಗಡಿಗರು ಕೆಲವರು ಸಮೀಪದ ಕಮನಳ್ಳಿಯಲ್ಲಿ ನಡೆಯುತ್ತಿದ್ದ ಗೊಂದಲ ಜೋಗಿಯವರ ಆಟ ನೋಡಲು ಹೋಗಿದ್ದರು. ಅದನ್ನು ನೋಡಲು ದೊಡ್ಡ ಜನ ಜಾತ್ರೆ ನೆರೆದಿತ್ತು. ಆಗ ಇವರ ಸಂಗಾತಿಯೊಬ್ಬ ಬಂದು ಇವರನ್ನು ಸದರ ನಾಟಕದಲ್ಲಿ ಜನ ಸಮೂಹದ ಎದುರಿಗೆ ಭಾಷಣ ಮಾಡಲು ಕರೆದುಕೊಂಡು ಹೋದರು. ಆಗ ಕಾಂಗ್ರೆಸ್ಸಿನವರಿಗೆ ಎಲ್ಲ ಕಡೆ ಗೌರವ ಮತ್ತು ಪ್ರೀತಿ ದೊರಕುತ್ತಿತ್ತು. ಬೈಲಾಟ ಶುರುವಾಗಿ ಭಾರಿ ಜನಸಮೂಹ ಸೇರಿದಾಗ ಇವರಿಗೆ ಭಾಷಣ ಮಾಡಲು ಆಸ್ಪದ ಮಾಡಿಕೊಟ್ಟರು. ಡಾಕ್ಟರು "ತಮ್ಮ ಭಾಷಣದಲ್ಲಿ ದೇಶಾಭಿಮಾನ ಮತ್ತು ಸ್ವಾತಂತ್ರ್ಯ ಇವುಗಳ ಅವಶ್ಯಕತೆ ಹಾಗೂ ಸ್ವಾತಂತ್ರ್ಯದ ಹೋರಾಟದ ಸಲುವಾಗಿ ಗಾಂಧೀಜಿ, ನೆಹರು, ಸುಭಾಷ್‌ಚಂದ್ರ ಮೊದಲಾದವರು ಹೋರಾಟ ನಡೆಸಿದ್ದಾರೆ. ಈ ಹೋರಾಟದಲ್ಲಿ ಅನೇಕ ದೇಶಾಭಿಮಾನಿ ಸ್ತ್ರೀ–ಪುರುಷರು ತನುಮನದಿಂದ ಭಾಗವಹಿಸಿದ್ದಾರೆ. ಅದರಂತೆ ನಾವೂ ಸರ್ವ ತ್ಯಾಗಕ್ಕೆ ಸಿದ್ಧರಾಗಿ ಮನೆ–ಮಾರು ಬಿಟ್ಟು ಓದು–ಬರಹ ನಿಲ್ಲಿಸಿ ಈ ಆಂದೋಲನದಲ್ಲಿ ಧುಮುಕಿದ್ದೇವೆ. ಹಳ್ಳಿಹಳ್ಳಿ ಸುತ್ತುತ್ತಾ ಜನಜಾಗ್ರತಿ ಮಾಡಿ ಬ್ರಿಟಿಷ್ ಸರ್ಕಾರದ ವಿರುದ್ಧ ದಂಗೆ



ಏಳಲು ಜನತೆಯಲ್ಲಿ ಪ್ರಚಾರ ನಡೆಸಿದ್ದೇವೆ. ನಮ್ಮೀ ಕಾರ್ಯದಲ್ಲಿ ತಾವುಗಳು ಭಾಗವಹಿಸಿ ಮಾತೃಭೂಮಿಯ ಬಂಧನ ವಿಮೋಚನೆಗಾಗಿ ಸಹಾಯ, ಸಹಕಾರ ನೀಡಬೇಕು" ಎಂದು ಎಲ್ಲ ಬಂಧು–ಬಗಿನಿಯರಲ್ಲಿ ಪ್ರಾರ್ಥಿಸಿಕೊಂಡರು.

ಅಲ್ಲದೇ ಈ ಭಾಗದಲ್ಲಿ ಆನವಟ್ಟಿ, ಕನ್ನೇಶ್ವರ, ಕೂಸನೂರು ಮತ್ತು ಇನ್ನೂ ಕೆಲ ಊರುಗಳಲ್ಲಿ ಕೆಲಮಂದಿ ಬಂದೂಕುಗಳ ಹಾಗೂ ಹುಲಿಗಳ ಬಾಯಿಕಟ್ಟುತ್ತಾರೆ ಅರ್ಥಾತ್ ಬಂದೂಕು ಹಾರದಂತೆ ಮತ್ತು ಹುಲಿಗಳು ದನಗಳನ್ನು ಹಿಡಿದು ತಿನ್ನದಂತೆ ಮಂತ್ರ–ಮಾಟ ಮಾಡುತ್ತಾರೆಂದು ಕೇಳಿದ್ದೇನೆ. ಅಂಥಹ ಮಂತ್ರಗಾರರು ಯಾರಾದರು ಇದ್ದರೆ ನನ್ನನ್ನು ಆಟ ಮುಗಿದ ತರುವಾಯ ಭೇಟಿಯಾಗಬೇಕೆಂದು ಕೂಡಿದ ಜನರಲ್ಲಿ ವಿನಂತಿಸಿದರು. ಹೀಗೆ ಸಹಾಯ ಮಾಡಿದರೆ ಅವರಿಗೆ ಬಹುದೊಡ್ಡ ಮೊತ್ತದ ಬಹುಮಾನ ಕೊಡುವುದಾಗಿ ಸಾರಿ ಹೇಳಿದರು. ಇದು ಅಲ್ಲದೇ ಈ ಭಾಗದ ಅಂಡಿಗೆ ಊರಲ್ಲಿ ಭೂತಪ್ಪ ಇದೆಯಂತೆ. ಆ ಭೂತಪ್ಪನನ್ನು ಕೆಲವರು ತಮಗೆ ಆಗದ ವೈರಿಗಳ ಮೇಲೆ ಬಿಡುತ್ತಾರಂತೆ. ಸದರ ಭೂತ ಅಂಥ ವೈರಿಗಳ ಮನೆಯಲ್ಲಿ ಹೊಲಸು ಮಾಡುವುದು ಮತ್ತು ಇನ್ನಿತರ ರೀತಿಯಿಂದ ಕಾಡುತ್ತದೆಯಂತೆ ಹೀಗೆ ಭೂತಪ್ಪ ಬಿಡುವ ಸಾಮರ್ಥ್ಯವಿದ್ದವರೂ ಸಹ ಇವರನ್ನು ಕಡೆಗೆ ಭೆಟ್ಟಿಯಾಗಿ ಸಹಾಯ ಮಾಡಿದರೆ ಅವರಿಗೂ ಸಹ ಭಾರೀ ದೊಡ್ಡ ಇನಾಮು ಕೊಡುವುದಾಗಿ ಘೋಷಣೆ ಮಾಡಿದರು. ಈ ಹೋರಾಟದಲ್ಲಿ ನಾವು ಗೆದೆಯಲೇಬೇಕು ಮತ್ತು ಗೆದ್ದೇತೀರುತ್ತೆವೆಂದು ಹೇಳಿದರಲ್ಲದೆ ಎಲ್ಲರ ಸಹಾಯ ಸಹಕಾರವನ್ನು ಕಳಕಳಿಯಿಂದ ಯಾಚಿಸಿದರು. ಇವರ ಭಾಷಣದಿಂದ ನೆರೆದ ಜನರೆಲ್ಲ ಹುರುಪುಗೊಂಡು ಜಯಕಾರ ಮಾಡಿದರು.

ಇದಾದ ಕೆಲ ದಿವಸಗಳಲ್ಲಿ ಇವರ ಬಗ್ಗೆ ಕೆಲ ಕಟ್ಟು ಕಥೆಗಳು ಹುಟ್ಟಿಕೊಂಡವು. ಇವರಿಗೆ ಗುಂಡು ಹಾಕಿದರೆ ಗುಂಡು ತಾಗುದಿಲ್ಲವಂತೆ. ಬಂದೂಕಿನ ಗುಂಡು ಮುಂದಕ್ಕೆ ಹೋಗುವ ಬದಲು ಹಿಂದಕ್ಕೆ ಒದೆಯುವುದೆಂದೂ, ಇವರು ಒಂದು ಮಾಟಿಯಂತ್ರ ಮಾಡಿಸಿಕೊಂಡು ತೊಡೆಯಲ್ಲಿ ಹಾಕಿಸಿಕೊಂದ್ದಾರೆಂತಲೂ, ಇದರಿಂದ ಇವರಿಗೆ ಯಾವ ತರದ ಬಾಧೆ ಇಲ್ಲವೆಂದೂ, ಇವರ ಸೊಂಟದಲ್ಲಿ ಒಂದು ಬಿಚ್ಚುಗತ್ತಿ ಇದೆ ಎಂತಲೂ, ಅದನ್ನು ಬಿಚ್ಚಿ ಪ್ರಯೋಗಿಸಿದರೆ ಇವರ ಸುತ್ತಲೂ ಇದ್ದವರ ಪ್ರಾಣ

ತೆಗೆದುಕೊಳ್ಳುವದೆಂತಲು ಕಥೆಗಳು ಪ್ರಚಾರದಲ್ಲಿ ಬಂದವು. ಈ ಕಟ್ಟು ಕಥೆಗಳಿಂದ ಡಾಕ್ಟರರಿಗೆ ಒಳ್ಳೆಯ ಸಹಾಯವಾಗಹತ್ತಿತು. ಈ ಗಾಳಿ ಸುದ್ದಿ ಒಮ್ಮೆ ದಿ. ಸರ್ದಾರ್ ವೀರನಗೌಡರಿಗೂ ಮುಟ್ಟಿ ಅವರು ಸೊರಬ ತಾಲ್ಲೂಕ ಬೆಣಗೇರಿ ಕಡ್ಲಿಗೌಡರ ವೀರನಗೌಡರ ಮನೆಯ ಗುಪ್ತವಾಗಿದ್ದಾಗ ಇವರನ್ನು ಅಲ್ಲಿಗೆ ಕರೆಸಿ ಕಡ್ಲಿಗೌಡರ ಒಳ ಅಂಗಳದಲ್ಲಿಯೇ ಇವರಿಗೆ ಭಾಷಣ ಮಾಡಲು ಹೇಳಿದರು. ಇವರ ಭಾಷಣದ ನಂತರ ನಿಮ್ಮ ಭಾಷಣ ಜನರಿಗೆ ರಂಜನೆಯಾಗಿರುತ್ತದೆ ಎಂದು ಶಹಭಾಸ್‌ಗಿರಿ ಕೊಟ್ಟರಂತೆ.

ಹೀಗೆ ಇವರ ಗುಂಪು ಹಿರೇಕೆರೂರ ತಾಲ್ಲೂಕಿನ ಬಹುತೇಕ ಎಲ್ಲ ಹಳ್ಳಿಗಳಲ್ಲಿ ರಾಣಿಬೆನ್ನೂರಿನ ದಕ್ಷಿಣಭಾಗದ ಹಳ್ಳಿಗಳಲ್ಲಿ, ಬ್ಯಾಡಗಿ ತಾಲ್ಲೂಕಿನ ಬಹಳಷ್ಟು ಹಳ್ಳಿಗಳಲ್ಲದೇ ಹಾವೇರಿ, ಹಾನಗಲ್ಲ, ಹೊನ್ನಾಳಿ, ಶಿಕಾರಿಪುರ, ಸೊರಬ ತಾಲೂಕಿನ ಕೆಲ ಹಳ್ಳಿಗಳಲ್ಲಿ ೪೨ರ "ಭಾರತ ಬಿಟ್ಟು ತೊಲಗಿರಿ" ಎಂಬ ಆಂದೋಲನದ ಬಗ್ಗೆ ಹಳ್ಳಿಗರಲ್ಲಿ ಜನಜಾಗೃತಿ ಮಾಡಿ, ಅಲ್ಲಲ್ಲ ಸ್ವಾತಂತ್ರ್ಯತೆ ಘೋಷಿಸಿ, ಸಮಾಂತರ ಕಾಂಗ್ರೆಸ್ ಸರ್ಕಾರ ಸ್ಥಾಪಿಸುವುದು ಮುಖ್ಯ ಗುರಿಯಾಗಿತ್ತು. ಇದರ ಜೊತೆಗೆ ಅಬಲರನ್ನು, ಕಾಂಗ್ರೆಸ್ ವಿರೋಧಿಗಳನ್ನೂ ಜೇಲಿಗೆ ಕಳಿಸಿ ಜೇಲು ಭರ್ತಿ ಮಾಡುವುದು ಎರಡನೇ ಕೆಲಸವಾಗಿತ್ತು. ಒಟ್ಟಿನಲ್ಲಿ ಸರಕಾರಿ ಯಂತ್ರ ನಡೆಯದಂತೆ ಮಾಡಿ ಸರಕಾರವನ್ನು ಸದೆಬಡಿಯುವುದು ಇವರ ಮೊದಲ ಕರ್ತವ್ಯವಾಗಿತ್ತು. ಇವರ ಕಾರ್ಯ ಕ್ಷೇತ್ರವು ಹಾನಗಲ್ಲಿನಿಂದ ಹರಿಹರದವರೆಗೆ, ಹಾವೇರಿಯಿಂದ ಹೊನ್ನಾಳಿಯವರೆಗೆ ೬೦–೭೦ಮೈಲಿ ಉದ್ದಗಲ ವ್ಯಾಪಿಸಿಕೊಂಡಿತ್ತು. ಇವರ ಗುಂಪಿನಲ್ಲಿ ಸಾಧಾರಣ ೨೫–೩೫ ಮಂದಿ ಯೋಧರು ಇರುತ್ತಿದ್ದರು. ಈ ತಂಡದಲ್ಲಿ ಡಾಕ್ಟರ ನೇಶ್ವಿ ಅವರಲ್ಲದೇ ದಿ. ಕರಿಯಪ್ಪ ಎರೇಸೀಮಿ ಸಂಗೂರ ಮತ್ತು ಹುತಾತ್ಮ ತಿಮ್ಮನಗೌಡ ಮೆಣಸಿನಹಾಳ ಎಂಬ ಪ್ರಭಾವಶಾಲಿಗಳು ಇದ್ದರು. ಹೆಚ್ಚಾಗಿ ಈ ಮೂವರು ಮುಖಂಡರು ಒಂದೇ ಕಡೆ ಕೂಡಿಯೇ ವಿಚಾರ ವಿನಿಮಯ ಮಾಡಿ ಒಂದು ನಿರ್ಧಾರಕ್ಕೆ ಬಂದು ಅದರಂತೆ ಕಾರ್ಯ ಮಾಡುತ್ತಿದ್ದರು. ಕೆಲವೊಮ್ಮೆ ಬೇರೆ ಬೇರೆಯಾಗಿಯೂ, ಒಮ್ಮೊಮ್ಮೆ ಹುತಾತ್ಮ ಮೈಲಾರ ಮಹಾದೇವರೊಂದಿಗೂ ಕೆಲಸಮಾಡುತ್ತಿದ್ದರು. ಸಣ್ಣ ಪುಟ್ಟ ಕೆಲಸಗಳನ್ನು ಇವರ ಸಹಕಾರ್ಯಕರ್ತರೇ ಹೋಗಿ ಮಾಡಿಕೊಂಡು ಬರುತ್ತಿದ್ದರು. ಕರಿಯಪ್ಪನವರು ಹೆಚ್ಚಾಗಿ ದೂರ ಸಂಪರ್ಕದ ಓಡಾಟದಲ್ಲಿ ತೊಡಗಿರುತ್ತಿದ್ದರು. ಇವರು ಇಲ್ಲವೆ ತಿಮ್ಮನಗೌಡರು ಕಾಯಂ ೨೦–೨೫ ಮಂದಿ ಕಟ್ಟಿಕೊಂಡು ಪ್ರಚಾರ ಮಾಡಿ ಜನರಿಗೆ ತಾರಕಂಬ ಕಡಿಯುವದು, ತಂತಿ ಕತ್ತರಿಸುವುದು, ಗ್ರಾಮಸ್ಥರ ದಫ್ತರ ನಾಶ ಮಾಡುವುದು, ಟಪಾಲು ಡಬ್ಬಿ ಅಪಹರಣ, ಟಪಾಲು ಚೀಲ ಮತ್ತು ಟಪಾಲು ಬಸ್ ಲೂಟಿಮಾಡುವದು, ಸರಕಾರಿ ಚಾವಡಿ ಬಂಗಲೆ ಸುಡುವುದು, ಸೇತುವೆ ನಾಶ ಮಾಡುವುದು, ಸ್ಟೇಶನ್ ಸುಡುವುದು, ಹಪ್ತೆ (ಕಂದಾಯ) ಅಪಹರಣ ಮುಂತಾದ ಕಾರ್ಯಗಳನ್ನು ಜನರಿಂದ ಅಥವಾ ಜನರನ್ನು ಕೂಡಿಕೊಂಡು ಮಾಡುತ್ತಿದ್ದರು. ಮನೆತನದ ಹಿರಿಮೆ, ವಿದ್ಯೆ, ದೇಶದ ರಾಜಕೀಯ ಅಭ್ಯಾಸದ ಹಿನ್ನೆಲೆಯಿಂದ ಡಾ. ನೇಶ್ವಿಯವರನ್ನು ಈ ಮೂವರ ಸಂಘಟನೆಗೆ ರಾಜನೆಂದೂ, ಕರಿಯಪ್ಪನವರು ಪ್ರಧಾನಿಯಂತೆ, ತಿಮ್ಮನಗೌಡರನ್ನು ಸೇನಾಪತಿ ಎಂದೂ ತಿಳಿಸಲಾಗಿತ್ತು ಅಥವಾ ಸಂಭೋಧಿಸಲಾಗುತ್ತಿತ್ತು. ಇವರ ವತಿಯಿಂದ ಕರಿಯಪ್ಪನವರನ್ನು ಎಣ್ಣೆಕೊಪ್ಪದ ಕಾಂಗ್ರೆಸ್ ಕಾರ್ಯಕರ್ತರ ಗುಪ್ತ ಸಭೆಗೆ ಕಳಿಸಲಾಗಿತ್ತು. ಒಮ್ಮೆ ಮುಂಬೈಗೆ ಬಾಂಬ ತಯಾರಮಾಡುವುದನ್ನು ಕಲಿತುಕೊಂಡು ಬರಲಿಕ್ಕೆ ಕಳಿಸಲಾಗಿತ್ತು. ಧಾರವಾಡ ಹುಬ್ಬಳ್ಳಿ ಕಡೆ ಸಮಾಚಾರ ತಿಳಿದುಕೊಂಡು ಬರಲಿಕ್ಕೆ ಒಂದೆರಡು ಬಾರಿ ಹೋಗಿದ್ದರು. (ಕ್ರಾಂತಿವೀರ ಡಾ. ಶಿವಣ್ಣ ನೇಶ್ವಿ (ಜೀವನ ಚರಿತ್ರೆ) ಸಂ: ಶ್ರೀಮತಿ ಪಾರ್ವತಿ ಇಂದುಶೇಖರ, ನಂದಿ ಪ್ರಕಾಶನ ಬೆಂಗಳೂರು.)

ಅಲ್ಲದೇ ರಾಣಿಬೆನ್ನೂರು ತಾಲೂಕು ಹೆಡಿಯಾಲದ ಹಿಂದಿ ಮೇಷ್ಟ್ರು ಜೊತೆ ಏಳೆಂಟು ಜನ ಇದ್ದರಂತೆ ಹಾಗೇನೆ ಶ್ರೀಮಂತರ ಮನೆಗೆ ಹೇಳಿ ಕಳುವು ಮಾಡುತ್ತಿದ್ದರು ಅದನ್ನು ಬಡವರಿಗೆ ತಂದುಕೊಡುತ್ತಿದ್ದರು, ನಂತರ ಬ್ರಿಟಿಷರ ವಿರುದ್ಧವಿದ್ದು ಅವರ ಕಚೇರಿ ಸುಟ್ಟರು, ಬಸ್ ಸುಟ್ಟರೂ, ಪೋಸ್ಟಾಫೀಸು ಸುಟ್ಟರು. ಅವರು ನಿಮ್ಮ ಮನೆ ಕಳುವ ಮಾಡ್ತೀವಿ ಅಂತ ಹೇಳಿ ಕಳುವು ಮಾಡಿ ಅದನ್ನೆಲ್ಲ ತಗೊಂಡ್ ಬಂದು ಸೂಡಂಬಿ, ತಿಮ್ಮಾಪುರ, ಗುಡ್ಡದಮಲ್ಲಾಪುರ, ನಡುವೆ ನಳುಕಲನಲ್ಲಿ ಇರುತ್ತಿದ್ದರು. ಜೋಗೊಂಡರ ಸಿದ್ದಜ್ಜ ಮನೆಗೆ ಹೋಗಿ ಬೆಳ್ಳಿ ಬಂಗಾರ ಇಡುತ್ತಿದ್ದರು. ಆಮೇಲೆ ಬಡವರಿಗೆ ಬಗ್ಗರಿಗೆ ಹಂಚುತ್ತಿದ್ದರು. ಇದೇ ರೀತಿ ಕನ್ನೇಶ್ವರ ರಾಮನ ನಡವಳಿಕೆಗಳು ಇದ್ದವು ಅನ್ನೋದನ್ನ ಗಮನಿಸಿದಾಗ ಸ್ವಾತಂತ್ರಹೋರಾಟದ ಕೆಲವು ಅಂಶಗಳು ಅವನಲ್ಲಿದ್ದವೆಂಬುದನ್ನು ಎಂಬುದನ್ನು ಗಮನಿಸಬಹುದು.

ಸ್ವಾತಂತ್ರ್ಯ ಹೋರಾಟವನ್ನು ವರ್ಗ ಸ್ವರೂಪಿ ಎಂದು ಕೇವಲ ಉನ್ನತ ವರ್ಗದ ಒಂದು ಹೋರಾಟವಾಗಿತ್ತೆಂದೂ ಪ್ರತಿಪಾದಿಸುವ ವಾಡಿಕೆ. ವಾಸ್ತವವಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಉನ್ನತ ವರ್ಗದ ಪ್ರಾಬಲ್ಯವಿತ್ತು ಎಂಬುದು ಅರೆ ಸತ್ಯ ನಿಜವಾಗಿಯೂ ಸ್ವಾತಂತ್ರ ಹೋರಾಟದ ಸಂದರ್ಭದಲ್ಲಿ ಗ್ರಾಮಗಳಲ್ಲಿ ಪುಟ್ಟ ನಗರಗಳಲ್ಲಿ ನಡೆಯುತ್ತಿದ್ದ ಸ್ವತಂತ್ರ ಚಳುವಳಿಯಲ್ಲಿ ಕೇವಲ ಗಣ್ಯರನ್ನು, ಜಮೀನ್ದಾರರನ್ನು, ಮುಖಂಡರನ್ನು ಮಾತ್ರ ಬಂಧಿಸುತ್ತಿದ್ದು, ಅವರುಗಳ ಮೇಲೆ ಮಾತ್ರ ಕೋರ್ಟ್ ಕಟ್ಲೆಹಾಕುತ್ತಿದ್ದರಂತೆ ಕೂಲಿನಾಲಿ ಮಾಡಿಕೊಂಡಿದ್ದವರು ಚಳುವಳಿಯಲ್ಲಿ ಭಾಗವಹಿಸುತ್ತಿದ್ದರೂ ಸಹ ಬಂಧಿಸುತ್ತಿರಲಿಲ್ಲವಂತೆ ಇದರಿಂದಾಗಿ ಸಾಮಾನ್ಯ ಜನರು, ಕೆಳಜಾತಿ, ಕೆಳವರ್ಗದ ಜನರು, ಸ್ವಾತಂತ್ರ್ಯ ಚಳುವಳಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದ ಅನೇಕ ಬಡವರು, ಕೂಲಿಯಾಳುಗಳು, ಭೂರಹಿತರನ್ನು ಪೊಲೀಸರು ಬಂಧಿಸಲಿಲ್ಲ. ಇದರಿಂದಾಗಿ ಸಾಮಾನ್ಯ ಜನರಿಗೆ ಹಾಗೂ ಕೆಳಜಾತಿ, ಕೆಳವರ್ಗದ ಜನರಿಗೆ ಸ್ವಾತಂತ್ರ್ಯ ಹೋರಾಟಗಾರರು ಎಂಬ ಪ್ರಮಾಣಪತ್ರ ದೊರೆಯಲಿಲ್ಲ, ಸ್ವಾತಂತ್ರ ಹೋರಾಟಗಾರರು ಎನಿಸಿಕೊಳ್ಳಲು ಜೈಲು ಶಿಕ್ಷೆಯೊಂದೇ ಮಾನದಂಡವಾಗಲಾರದು.

❑

## ಗ್ರಂಥಋಣ


ಹೆಚ್. ಬಿ. ಕೆಂಚಳ್ಳಿ – ಹಾವೇರಿ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರು ಪಿಹೆಚ್.ಡಿ ಅಪ್ರಕಟಿತ

ಶ್ರೀಮತಿ ಪಾರ್ವತಿ ಇಂದುಶೇಖರ – ಕ್ರಾಂತಿವೀರ ಡಾ. ಶಿವಣ್ಣ ನೇಶ್ವಿ (ಜೀವನ ಚರಿತ್ರೆ) – ಸಂ: ನಂದಿ ಪ್ರಕಾಶನ ಬೆಂಗಳೂರು.

ಸೂರ್ಯನಾಥ್ ಕಾಮತ್ – ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಕ.ಸಂ. ನಿರ್ದೇಶನಾಲಯ ಬೆಂಗಳೂರು.

ಕರ್ನಾಟಕ ಸ್ವಾತಂತ್ರ್ಯ ಹೋರಾಟಗಾರರು ಕ್ವಿಟ್ ಇಂಡಿಯಾ – ಸುವರ್ಣ ಮಹೋತ್ಸವ ಸ್ಮರಣ ಸಂಚಿಕೆ ಬೆಂಗಳೂರು.

ಲಿಂಗರಾಜ ಕಮ್ಮಾರ – ಹೆಬ್ಬಾಗಿಲು ಹಾವೇರಿ ಜಿಲ್ಲಾ ಉತ್ಸವ ೨೦೦೭, ಸಂಘಟನೆ–ಸಂಘರ್ಷಗಳು

ವಾಸುದೇವ ಬಡಿಗೇರ – 'ಹಾನುಗಲ್ಲು' ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ ೨, ಪ್ರಸಾರಂಗ, ಕನ್ನಡ. ವಿ.ವಿ.ಹಂಪಿ

ಮಾರುತಿ ಶಿಡ್ಲಾಪುರ – 'ಸಿಂಧೂರ ಸಿದ್ದಪ್ಪ' ಸ್ವಾತಂತ್ರ್ಯಸೇನಾನಿ ಧೀಮಂತ ರಾಜಕಾರಿಣಿ ದೂರದೃಷ್ಟಿಯ ನಾಯಕ, ಹಳ್ಳೂರ ಪ್ರಕಾಶನ, ಬೆಂಗಳೂರು.

ಪಾಟೀಲ್ ಭೋಜರಾಜ.; (ಜಿಲ್ಲಾ ಸಂ) ಕರ್ನಾಟಕ ಗ್ರಾಮ ಚರಿತ್ರೆ ಕೋಶ ಹಾವೇರಿ. ಜಿಲ್ಲಾ ಸಂಪುಟ–೨,

ಶಿವತಾರಕ್ ಕೆ. ಬಿ,; 'ಕರ್ನಾಟಕದ ಪುರಾತತ್ವ ನೆಲೆಗಳು'

ಕಾಮತ್ ಸೂರ್ಯನಾಥ (ಸಂ); ಧಾರವಾಡ ಜಿಲ್ಲಾ ಗ್ಯಾಸೆಟಿಯರ್,.

ಕರ್ನಾಟಕ ಇನ್ಸ್‌ಕ್ರಿಪ್ಸೆನ್ಸ್ – ಸಂಪುಟ ೬, ನಂ ೭

ಕಲಬುರ್ಗಿ ಎಂ ಎಂ.; ಕರ್ನಾಟಕ ಶಾಸನ ಸೂಚಿ, ಧಾರವಾಡ ಜಿಲ್ಲೆ,

❑

# ಅನುಬಂಧ

## ಛಾಯಾಚಿತ್ರಗಳು

### ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರಗಳು



ಸುಬ್ಬಣ್ಣಾಚಾರ ಅಕ್ಕಿವಳ್ಳಿ



ಸಂಗೂರ ಕರಿಯಪ್ಪ



ಸಿಂಧೂರ ಸಿದ್ದಪ್ಪ



ಗುಡ್ಡನಗೌಡ ಪಾಟೀಲ (ಹರಿಜನ)



ಕೃಷ್ಣಮೂರ್ತಿ ಕಾಗಿನೆಲ್ಲಿ




ಹಾನಗಲ್ಲ ಜೈಲು ಸರಳು ಮುರಿದ ಜಾಗ



ತಂಡಗುಂದ ಹನುಮಂತ ದೇವಸ್ಥಾನ









ತೊಗರ್ಶಿ ಪಂಚವಣ್ಣಿಗೆ ಮಠ



ಕನ್ನೇಶ್ವರದ ಪ್ರಾಥಮಿಕ ಶಾಲೆ



ಕನ್ನೇಶ್ವರದ ಅಂಬೇಡ್ಕರ ಭವನ







ಹರಗಿ ಗ್ರಾಮದ ರಾಮಪ್ಪ ಹರಿಯಮ್ಮನವರೊಂದಿಗೆ



ಕನ್ನೇಶ್ವರನನ್ನು ಬಂಧಿಸಿದ ಹಾನುಗಲ್ಲು ಜೈಲು



ಹಾನುಗಲ್ಲ ತಹಶಿಲದಾರ ಕಛೇರಿ





ವೀರಭದ್ರಗೌಡರು ಕನ್ನೇಶ್ವರ



ಲಾವಣಿಕಾರ – ಲೋಕಪ್ಪ ಪ
ಸಣ್ಣಹೊತ್ತಿಗೆ

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |

| | | | |
|---|---|---|---|
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |



| | | | |
|---|---|---|---|
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |

| | | | |
|---|---|---|---|
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |